ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 14 ಭಾನುವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 28 | ಪುಟಗಳು: 12+IV

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಜಿಲ್ಲೆಯಲ್ಲಿ ಜಿ.ಟಿ.ದೇವೇಗೌಡ, ಪುತ್ರ ಜಿ.ಡಿ.ಹರೀಶ್‌ಗೌಡರ ದಾಖಲೆ



ಮೈಸೂರು, ಮೇ 13(ಎಸ್‌ಬಿಡಿ)– ಒಂದು ಜಿಲ್ಲೆ, ಒಂದು ಪಕ್ಷದಿಂದ ತಂದೆ–ಮಗ ಶಾಸಕರಾಗಿ ಆಯ್ಕೆಯಾಗಿರುವ ದಾಖಲೆಗೆ ಜಿ.ಟಿ. ದೇವೇಗೌಡರ ಕುಟುಂಬ ಸೇರ್ಪಡೆಯಾಗಿದೆ.

ಚಾಮುಂಡೇಶ್ವರಿ ಕ್ಷೇತ್ರದಿಂದ ಜಿ.ಟಿ.ದೇವೇಗೌಡರು ಹಾಗೂ ಅವರ ಪುತ್ರ ಜಿ.ಡಿ.ಹರೀಶ್‌ಗೌಡ ಹುಣಸೂರು ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದು, ತಂದೆ–ಮಗನ ಗೆಲುವಿನಿಂದ ಮೈಸೂರು ಜಿಲ್ಲೆಯಲ್ಲಿ ಜೆಡಿಎಸ್ ಮುಖಭಂಗದಿಂದ ಪಾರಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ವಿರುದ್ಧ ಭಾರೀ ಮತಗಳ ಅಂತರದಲ್ಲಿ ಜಿಟಿಡಿ ಪುನಾರಾಯ್ಕೆಯಾದರೆ, ಹರೀಶ್‌ಗೌಡರು ಮೊದಲ ಅವಕಾಶದಲ್ಲೇ ಹಾಲಿ ಶಾಸಕ, ಕಾಂಗ್ರೆಸ್ ಅಭ್ಯರ್ಥಿ ಹೆಚ್.ಪಿ.ಮಂಜುನಾಥ್ ಅವರನ್ನು ಮಣಿಸಿ ವಿಧಾನಸಭೆಗೆ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಹಲವು ಪ್ರಕರಣ: ಹಾಸನ ಜಿಲ್ಲೆ ಅರಕಲಗೂಡು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎ.ಮಂಜು ಗೆಲುವು ಸಾಧಿಸಿದ್ದು, ಅವರ ಪುತ್ರ ಮಂಥರ್‌ಗೌಡ ಕಾಂಗ್ರೆಸ್ ಅಭ್ಯರ್ಥಿಯಾಗಿ ನೆರೆ ಜಿಲ್ಲೆ ಕೊಡಗಿನ ಮಡಿಕೇರಿ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ. ಅಪ್ಪ–ಮಗ ಏಕಕಾಲದಲ್ಲಿ ಬೇರೆ ಬೇರೆ ಪಕ್ಷದಿಂದ ಶಾಸಕರಾಗಿ ಆಯ್ಕೆಯಾಗಿರುವುದು ವಿಶೇಷವಾಗಿದೆ. ಹೀಗೆಯೇ ದಾವಣಗೆರೆ ದಕ್ಷಿಣ ಮತ್ತು ಉತ್ತರ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಅಪ್ಪ–ಮಗ ಜಯಭೇರಿ ಭಾರಿಸಿದ್ದಾರೆ. ದಾವಣಗೆರೆ ದಕ್ಷಿಣ ಕ್ಷೇತ್ರದಿಂದ 92 ವರ್ಷದ ಶಾಮನೂರು ಶಿವಶಂಕರಪ್ಪ ಭಾರೀ ಅಂತರದಲ್ಲಿ ಪುನಾರಾಯ್ಕೆಯಾಗಿದ್ದರೆ ಅವರ ಪುತ್ರ ಎಸ್.ಎಸ್.ಮಲ್ಲಿಕಾರ್ಜುನ ದಾವಣಗೆರೆ ಉತ್ತರ ಕ್ಷೇತ್ರದಿಂದ ಜಯಗಳಿಸಿದ್ದಾರೆ. ಕಾಂಗ್ರೆಸ್ ಹಿರಿಯ ನಾಯಕ ಎಂ.ಕೃಷ್ಣಪ್ಪ ಬೆಂಗಳೂರಿನ ವಿಜಯನಗರ ಕ್ಷೇತ್ರದಿಂದ ಹಾಗೂ ಅವರ ಪುತ್ರ ಪ್ರಿಯಾಕೃಷ್ಣ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಗೆಲುವು ಪಡೆದಿದ್ದಾರೆ.

ತಂದೆ–ಮಗಳಿಗೆ ವಿಜಯ: ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ತಂದೆ–ಮಗಳು ವಿಜಯಶಾಲಿಗಳಾಗಿದ್ದಾರೆ. ದೇವನಹಳ್ಳಿ ಕ್ಷೇತ್ರದಿಂದ ಕೆ.ಹೆಚ್.ಮುನಿಯಪ್ಪ ಹಾಗೂ ಕೆಜಿಎಫ್ ಕ್ಷೇತ್ರದಿಂದ ರೂಪಕಲಾ ಶಶಿಧರ್ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ತಂದೆಗೆ ಗೆಲುವು: ಜೆಡಿಎಸ್ ನಾಯಕ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಚನ್ನಪಟ್ಟಣ ಕ್ಷೇತ್ರದಿಂದ ಹಾಗೂ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ರಾಮನಗರದಿಂದ ಸ್ಪರ್ಧಿಸಿದ್ದರು. ಕುಮಾರಸ್ವಾಮಿ ಅವರು ಗೆಲುವು ಸಾಧಿಸಿದ್ದು, ಅವರ ಪುತ್ರ ಪರಾಜಿತರಾಗಿದ್ದಾರೆ.

ಚಾಮುಂಡೇಶ್ವರಿಯಲ್ಲಿ ಜಿಟಿಡಿ ಹ್ಯಾಟ್ರಿಕ್ ಗೆಲುವು

ಜಿ.ಟಿ.ದೇವೇಗೌಡರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ದಾಖಲಿಸಿದ್ದಾರೆ. ಮೊದಲ ಬಾರಿ 2013ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಎಂ.ಸತ್ಯನಾರಾಯಣ ಅವರ ವಿರುದ್ಧ 7103 ಮತಗಳ ಅಂತರದಲ್ಲಿ ಗೆದ್ದಿದ್ದರು. ನಂತರ 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು 36,042 ಮತಗಳ ಅಂತರದಲ್ಲಿ ಮಣಿಸಿ ಪುನಾರಾಯ್ಕೆಯಾದರು. ಇದೀಗ ಕಾಂಗ್ರೆಸ್‌ನ ಮಾವಿನಹಳ್ಳಿ ಸಿದ್ದೇಗೌಡರ ವಿರುದ್ಧ ಸುಮಾರು 25 ಸಾವಿರ ಮತಗಳೊಂದಿಗೆ ಹ್ಯಾಟ್ರಿಕ್ ಗೆಲುವು ದಾಖಲಿಸಿದ್ದಾರೆ. ಈ ಹಿಂದೆ ಹುಣಸೂರು ಕ್ಷೇತ್ರದಲ್ಲಿ ಎರಡು ಬಾರಿ ಶಾಸಕರಾಗಿದ್ದರು. ಇದರೊಂದಿಗೆ ಐದು ಬಾರಿ ಶಾಸಕರಾದಂತಾಗಿದೆ.

ಅಭ್ಯರ್ಥಿಗಳು ಪಡೆದ ಅಂಚೆ ಮತಗಳು

ಮೈಸೂರು, ಮೇ 13(ಆರ್‌ಕೆ)–ವಿದ್ಯುನ್ಮಾನ ಮತಯಂತ್ರಗಳ ಮೂಲಕ ದಾಖಲಾದ ಮತಗಳ ಜೊತೆಗೆ ಮತಗಟ್ಟೆಗೆ ಹೋಗಲಾರದ 80 ವರ್ಷ ಮೇಲ್ಪಟ್ಟ



ವೃದ್ಧರು, ಅಂಗವಿಕಲರು ಹಾಗೂ ಚುನಾವಣಾ ಕರ್ತವ್ಯದಲ್ಲಿ ನಿರತರಾದ ಅಧಿಕಾರಿಗಳು ಹಾಗೂ ಸಿಬ್ಬಂದಿ ಅಂಚೆ ಮೂಲಕ ಮತದಾನ ಮಾಡುವ ಮೂಲಕ ತಮಗಿಚ್ಛೆ ಬಂದ ಅಭ್ಯರ್ಥಿಗಳಿಗೆ ಬೆಂಬಲ ನೀಡಿದ್ದಾರೆ.

ಅದರಂತೆ ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಎಂ.ಅಶ್ವಿನ್‌ಕುಮಾರ್‌ಗೆ 305, ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ 390, ಡಾ.ಎಂ.ರೇವಣ್ಣ ಅವರಿಗೆ 137, ಹೆಚ್.ಡಿ.ಕೋಟೆ ಕ್ಷೇತ್ರದ ಅನಿಲ್ ಚಿಕ್ಕಮಾದುಗೆ 376, ಜಯಪ್ರಕಾಶ್ ಚಿಕ್ಕಣ್ಣನವರಿಗೆ 272, ಕೆ.ಎಂ.ಕೃಷ್ಣನಾಯಕರಿಗೆ 231, ಕೃಷ್ಣರಾಜ ಕ್ಷೇತ್ರದ ಟಿ.ಎಸ್.ಶ್ರೀವತ್ಸರಿಗೆ 649, ಎಂ.ಕೆ.ಸೋಮಶೇಖರ್‌ರಿಗೆ 482, ಕೆ.ವಿ.ಮಲ್ಲೇಶ್‌ರಿಗೆ 56, ಹುಣಸೂರು ಕ್ಷೇತ್ರದ ಜಿ.ಡಿ.ಹರೀಶ್‌ಗೌಡರಿಗೆ 481, ಹೆಚ್.ಪಿ.ಮಂಜುನಾಥ್‌ರಿಗೆ 472, ಚಾಮರಾಜ ಕ್ಷೇತ್ರದ ಎಲ್.ನಾಗೇಂದ್ರರಿಗೆ 419, ಕೆ.ಹರೀಶ್‌ಗೌಡರಿಗೆ 412, ನಂಜನಗೂಡು ಕ್ಷೇತ್ರದ ದರ್ಶನ್ ಧ್ರುವನಾರಾಯಣ್‌ರಿಗೆ 543, ಬಿ.ಹರ್ಷವರ್ಧನ್‌ರಿಗೆ 404, ಕೆ.ಆರ್.ನಗರದ ಸಾ.ರಾ.ಮಹೇಶ್‌ರಿಗೆ 1,402, ಡಿ.ರವಿಶಂಕರ್‌ರಿಗೆ 1,418, ಪಿರಿಯಾಪಟ್ಟಣದಲ್ಲಿ ಕೆ.ವೆಂಕಟೇಶ್ ಪರ 655, ಕೆ.ಮಹದೇವ್ ಪರ 529, ಸಿ.ಹೆಚ್.ವಿಜಯಶಂಕರ್ ಪರ 76, ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯರಿಗೆ 386, ವಿ.ಸೋಮಣ್ಣರಿಗೆ 229, ನರಸಿಂಹರಾಜದಲ್ಲಿ ತನ್ವೀರ್ ಸೇಠ್‌ರಿಗೆ 587, ಎಸ್.ಸತೀಶ್ ಸಂದೇಶ್ ಸ್ವಾಮಿ ಅವರಿಗೆ 558, ಅಬ್ದುಲ್ ಮಜೀದರಿಗೆ 66, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡರಿಗೆ 956, ಕವೀಶ್‌ಗೌಡರಿಗೆ 511, ಎಸ್.ಸಿದ್ದೇಗೌಡರಿಗೆ 643 ಅಂಚೆ ಮತದಾನ ಮೂಲಕ ಚಲಾವಣೆಯಾಗಿದೆ.

ಕಟ್ಟಡಗಳೇ ಮಾಹಿತಿ ಕೇಂದ್ರಗಳು!



ಮೈಸೂರು,ಮೇ 13(ಜಿಎ)–ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಮಾಹಿತಿಯನ್ನು ವಿವಿಧ ಪಕ್ಷದ ಕಾರ್ಯಕರ್ತರು ಕಟ್ಟಡಗಳ ಮೇಲೆ ಕುಳಿತು ಪಡೆದುಕೊಂಡಿದ್ದು, ಎಲ್ಲರ ಗಮನ ಸೆಳೆಯಿತು.

ಚುನಾವಣೆ ಫಲಿತಾಂಶದ ಬಗ್ಗೆ ಯಾವ ಪಕ್ಷ ರಾಜ್ಯದ ಚುಕ್ಕಾಣಿ ಹಿಡಿಯಲಿದೆ ಎಂದು ಇಡೀ ರಾಜ್ಯಕ್ಕೆ ಕುತೂಹಲವಿತ್ತು. ಅದರಂತೆ ಜಿಲ್ಲೆಯ 11 ಕ್ಷೇತ್ರದ ಫಲಿತಾಂಶದ ಬಗ್ಗೆ ಅಭ್ಯರ್ಥಿಗಳು ಮತ್ತು ಪಕ್ಷದ ಕಾರ್ಯಕರ್ತರಿಗೆ ತೀವ್ರ ಕುತೂಹಲವಿದ್ದರಿಂದ ಮತ ಎಣಿಕೆ ಕೇಂದ್ರದ ಸುತ್ತಲೂ ಅಳವಡಿಸಿದ್ದ ಧ್ವನಿವರ್ಧಕಗಳ ಮೂಲಕ ಬರುತ್ತಿದ್ದ ಮತ ಎಣಿಕೆ ಮಾಹಿತಿಯನ್ನು ಕಟ್ಟಡಗಳ ಮೇಲೆ ಕುಳಿತು ಕೇಳಿಸಿಕೊಂಡರು.

ಮೈಸೂರಿನ ಮಹಾರಾಣಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಜಿಲ್ಲೆಯ 11 ಕ್ಷೇತ್ರದ ಮತ ಎಣಿಕೆ ಮಾಡಲಾಯಿತು. ಕೇಂದ್ರವನ್ನು ಪ್ರವೇಶಿಸಲು ಚುನಾವಣಾ ಆಯೋಗದಿಂದ ಚುನಾವಣಾಧಿಕಾರಿಗಳು ಗುರುತಿನ ಚೀಟಿಯನ್ನು ವಿತರಿಸಿದರು. ಈ ಗುರುತಿನ ಚೀಟಿ ಪಡೆದುಕೊಂಡವರಿಗೆ ಮಾತ್ರ ಪ್ರವೇಶಿಸಲು ಪೊಲೀಸರು ಅನುಮತಿಸಿದರು.

ಗುರುತಿನ ಚೀಟಿ ಇಲ್ಲದವರನ್ನು ಮತ ಎಣಿಕೆ ಕೇಂದ್ರದ ಬಳಿಯೂ ಸುಳಿಯದಂತೆ ಪೊಲೀಸರು ಕ್ರಮ ವಹಿಸಿದರು. ಇದನ್ನು ಗಮನಿಸಿದ ಕಾರ್ಯಕರ್ತರು ಕೇಂದ್ರದ ಅಕ್ಕ–ಪಕ್ಕವಿರುವ ಕಟ್ಟಡಗಳ ಮೇಲೆ ಕುಳಿತು ತಮ್ಮ ಅಭ್ಯರ್ಥಿಗಳ ಭವಿಷ್ಯ ಏನಾಗುತ್ತಿದೆಂಬುದನ್ನು ಧ್ವನಿವರ್ಧಕದಲ್ಲಿ ಬರುತ್ತಿದ್ದ ಮಾಹಿತಿ ಮೂಲಕ ಲೆಕ್ಕಾಚಾರ ಹಾಕಿದರು.

ಭಾರೀ ಬಂದೋಬಸ್ತ್: ಸುಗಮ ಮತ ಎಣಿಕೆ

ಅತ್ಯಂತ ಅಚ್ಚುಕಟ್ಟಾಗಿ ಮತ ಎಣಿಕೆ ಕಾರ್ಯ ಪೂರ್ಣಗೊಳಿಸಿ ಪ್ರಶಂಸೆಗೆ ಪಾತ್ರರಾದ ಅಧಿಕಾರಿಗಳು, ಸಿಬ್ಬಂದಿ





ಮೈಸೂರು, ಮೇ 13(ಆರ್‌ಕೆ)–ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕೇಂದ್ರದಲ್ಲಿ ಇಂದು ನಡೆದ ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯಕ್ಕೆ ಭಾರೀ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಹಾಗಾಗಿ ಎಣಿಕಾ ಪ್ರಕ್ರಿಯೆ ಸುಗಮವಾಗಿ ಪೂರ್ಣಗೊಂಡಿತು.

ಬೆಳಗ್ಗೆ 8 ಗಂಟೆಗೆ ಮತ ಎಣಿಕೆ ಪ್ರಕ್ರಿಯೆ ಆರಂಭಗೊಂಡಿತಾದರೂ, ಮುಂಜಾಗ್ರತಾ ಕ್ರಮವಾಗಿ ಬೆಳಗ್ಗೆ 6 ಗಂಟೆಯಿಂದಲೇ ಕೇಂದ್ರದ ಬಳಿ 400 ಪೊಲೀಸ್ ಸಿಬ್ಬಂದಿಯನ್ನು ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಿ, ಮತ ಎಣಿಕೆ ಅಧಿಕಾರಿಗಳು, ಸಿಬ್ಬಂದಿ, ಅಭ್ಯರ್ಥಿಗಳು, ವಿವಿಧ ಪಕ್ಷಗಳ ಏಜೆಂಟರನ್ನು ಹೊರತುಪಡಿಸಿ ಉಳಿದಂತೆ ಯಾರೂ ಕೇಂದ್ರ ಪ್ರವೇಶಿಸದಂತೆ ಕಟ್ಟೆಚ್ಚರ ವಹಿಸಲಾಗಿತ್ತು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ ಸ್ವತಃ ಸ್ಥಳದಲ್ಲಿ ಮೊಕ್ಕಾಂ ಹೂಡಿ ಭದ್ರತಾ ವ್ಯವಸ್ಥೆಯ ಮೇಲ್ವಿಚಾರಣೆ ನಡೆಸಿದರು.

150 ಮಂದಿ ಶಸ್ತ್ರಸಜ್ಜಿತ ಸಿಐಎಸ್‌ಎಫ್ ಸಿಬ್ಬಂದಿ, ಸಿಎಆರ್, ಕೆಎಸ್‌ಆರ್‌ಪಿ, ಮೌಂಟೆಡ್, ಸಿಟಿ ಸಿವಿಲ್ ಪೊಲೀಸರು, ಚಾಮುಂಡಿ ಕಮಾಂಡೋ ಪಡೆ ಸೇರಿದಂತೆ 400 ಪೊಲೀಸ್ ಸಿಬ್ಬಂದಿಯನ್ನು ಮತ ಎಣಿಕಾ ಕೇಂದ್ರಕ್ಕೆ ನಿಯೋಜಿಸಿ ಕಟ್ಟುನಿಟ್ಟಿನ ಭದ್ರತೆ ವಹಿಸಿದ ಹಿನ್ನೆಲೆಯಲ್ಲಿ ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಯಾವುದೇ ಗೊಂದಲ, ಗಲಾಟೆ, ಗದ್ದಲವಿಲ್ಲದಂತೆ ಶಾಂತಿಯುತವಾಗಿ ಮತ ಎಣಿಕೆ ಕಾರ್ಯ ಸಂಜೆ 4 ಗಂಟೆ ವೇಳೆಗೆ ಮುಕ್ತಾಯಗೊಂಡಿತು. ಕಾಲೇಜಿನ ಮುಖ್ಯ ದ್ವಾರದ ಬಳಿ 2 ಹಂತದ ಮೆಟಲ್ ಡೋರ್ ಡಿಟೆಕ್ಟರ್‌ಗಳನ್ನು ಅಳವಡಿಸಿ, ಅಧಿಕೃತ ಪಾಸ್ ಹೊಂದಿರುವ ಅಧಿಕಾರಿಗಳು, ಸಿಬ್ಬಂದಿ ಹಾಗೂ ಮಾಧ್ಯಮ ಪ್ರತಿನಿಧಿಗಳನ್ನು ತಪಾಸಣೆ ಮಾಡಿ, ಪ್ರವೇಶಕ್ಕೆ ಅವಕಾಶ ಮಾಡಿಕೊಟ್ಟರು.

ಕಾಲೇಜು ಕಟ್ಟಡದ ಪ್ರತೀ ಮಹಡಿಯಲ್ಲೂ ಬ್ಯಾರಿಕೇಡ್ ಅಳವಡಿಸಿ ನಿಯೋಜಿಸಿರುವ ಕೊಠಡಿಗಳಿಗೆ ಮಾತ್ರ ತೆರಳುವಂತೆ ಮಾರ್ಗವನ್ನು ಸಜ್ಜುಗೊಳಿಸಲಾಗಿತ್ತು. ಅಲ್ಲದೇ ಪ್ರತೀ ಮಹಡಿಯಲ್ಲೂ ಮತ್ತೊಮ್ಮೆ ಮೆಟಲ್ ಹ್ಯಾಂಡ್ ಡಿಟೆಕ್ಟರ್ ಮೂಲಕ ತಪಾಸಣೆ ಮಾಡಿ ಕರ್ತವ್ಯಕ್ಕೆ ಅನುವು ಮಾಡಿಕೊಡಲಾಯಿತು. ಮತ ಎಣಿಕೆ ಕರ್ತವ್ಯಕ್ಕೆ ನಿಯೋಜನೆಗೊಂಡ ಪ್ರತಿಯೊಬ್ಬ ಅಧಿಕಾರಿ ಹಾಗೂ ಸಿಬ್ಬಂದಿ ಮತ್ತು ಅಭ್ಯರ್ಥಿಗಳ ಏಜೆಂಟರು ಹೊಂದಿದ್ದ ಮೊಬೈಲ್ ಫೋನ್‌ಗಳನ್ನು ಕಾಲೇಜಿನ ಕಾಂಪೌಂಡ್ ಗೇಟ್‌ನಲ್ಲೇ ವಶಕ್ಕೆ ಪಡೆದುಕೊಳ್ಳಲಾಗಿತ್ತು. ಕಟ್ಟಡ, ಆವರಣ, ಹೊರ ಆವರಣ ಹಾಗೂ ಟೆರೇಸ್ ಮೇಲೆ 150ಕ್ಕೂ ಹೆಚ್ಚು ಶಸ್ತ್ರಸಜ್ಜಿತ ಪೊಲೀಸರನ್ನು ನಿಯೋಜಿಸಲಾಗಿತ್ತಲ್ಲದೇ, ಮೊಬೈಲ್ ಕಮಾಂಡ್ ಸೆಂಟರ್ ಅನ್ನು ಕಾಲೇಜು ಕೇಂದ್ರದ ಎದುರು ನಿಲ್ಲಿಸಿ ಸಿಸಿ ಕ್ಯಾಮರಾ ಮೂಲಕ ದೃಶ್ಯಾವಳಿಗಳನ್ನು ಸೆರೆ ಹಿಡಿಯಲಾಯಿತು.

ಮತಗಟ್ಟೆ ಕೇಂದ್ರದ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕರು ಜಮಾಯಿಸುವುದನ್ನು ತಡೆಯಲಾಯಿತು ಹಾಗೂ ಮಾತೃ ಮಂಡಳಿ ಸರ್ಕಲ್, ಕೆಆರ್‌ಎಸ್ ರಸ್ತೆಯ ವಾಲ್ಮೀಕಿ ರಸ್ತೆ ಜಂಕ್ಷನ್, ಹುಣಸೂರು ರಸ್ತೆಯ ಕಲಾಮಂದಿರ ಜಂಕ್ಷನ್ ಹಾಗೂ ಸೆಂಟ್ ಜೋಸೆಫ್ ಕಾಲೇಜು ಜಂಕ್ಷನ್ ಬಳಿ ಬ್ಯಾರಿಕೇಡ್ ಅಳವಡಿಸಿ ಸಾರ್ವಜನಿಕ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿತ್ತು. ಪೊಲೀಸರ ಯಶಸ್ವಿ ಬಂದೋಬಸ್ತ್‌ನಿಂದಾಗಿ ಮೈಸೂರು ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯ ಸುವ್ಯವಸ್ಥಿತ ಹಾಗೂ ಶಾಂತಿಯುತವಾಗಿ ಮುಕ್ತಾಯಗೊಂಡಿತು.

ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಗೆದ್ದ ಅಭ್ಯರ್ಥಿಗಳ ಸುತ್ತುವರಿದು ಮತಗಟ್ಟೆ ಏಜೆಂಟರು ಹಾಗೂ ಕೆಲವೇ ಮಂದಿ ಬೆಂಬಲಿಗರು ಜಯಘೋಷ ಕೂಗಲೆತ್ನಿಸಿದರಾದರೂ, ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ಈ ಸ್ಥಳದಲ್ಲಿ ಕೂಗಾಡಬೇಡಿ ಎಂದು ಪೊಲೀಸರು ಮನವರಿಕೆ ಮಾಡಿಕೊಟ್ಟು ಕಳುಹಿಸುತ್ತಿದ್ದರು. ಅದರಿಂದಾಗಿ ಕೇಂದ್ರದ ಬಳಿ ಪಟಾಕಿ ಸಿಡಿಸುವುದಾಗಲೀ, ಜಯಕಾರ ಕೂಗುವುದಾಗಲೀ ಅಥವಾ ಗೆದ್ದ ಅಭ್ಯರ್ಥಿಗಳನ್ನು ಎತ್ತಿ ಸಂಭ್ರಮಿಸುವುದಾಗಲೀ ಅಷ್ಟಾಗಿ ಕಂಡು ಬರಲಿಲ್ಲ. ಇದರೊಟ್ಟಿಗೆ ಇಂದಿನ ಮತ ಎಣಿಕೆ ಪ್ರಕ್ರಿಯೆ ಸಾಂಗವಾಗಿ, ಸುವ್ಯವಸ್ಥಿತವಾಗಿ ಪೂರ್ಣಗೊಂಡಿತು.

ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಇವಿಎಂ ನೋಡಲ್ ಅಧಿಕಾರಿ ಜಿ.ಟಿ.ದಿನೇಶ್‌ಕುಮಾರ್, ಚುನಾವಣಾ ತಹಸೀಲ್ದಾರ್ ರಾಂಪ್ರಸಾದ್, ಎಲ್ಲಾ 11 ಕ್ಷೇತ್ರಗಳ ಚುನಾವಣಾಧಿಕಾರಿಗಳು ಬೆಳಗ್ಗೆಯಿಂದ ಸಂಜೆವರೆಗೂ ಶಿಸ್ತುಬದ್ಧವಾಗಿ ನಿಯಮಾನುಸಾರ ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ ಮತ ಎಣಿಕೆ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಆಯಾ ಸುತ್ತಿನ ಫಲಿತಾಂಶವನ್ನು ಮಾಧ್ಯಮ ಕೇಂದ್ರಕ್ಕೆ ಪೂರೈಸುವಲ್ಲಿ ವಾರ್ತಾ ಇಲಾಖೆ ಉಪನಿರ್ದೇಶಕ ಅಶೋಕ್, ಸಹಾಯಕ ನಿರ್ದೇಶಕ ಹರೀಶ್, ಮಾಹಿತಿ ಅಧಿಕಾರಿ ರಮೇಶ್ ಯಶಸ್ವಿಯಾದರು. ಮತ ಎಣಿಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಪ್ರತಿಯೊಬ್ಬ ಅಧಿಕಾರಿ ಹಾಗೂ ಸಿಬ್ಬಂದಿಗೆ ಸ್ಥಳದಲ್ಲಿಯೇ ಜಿಲ್ಲಾಡಳಿತದಿಂದ ತಿಂಡಿ, ಊಟ, ಟೀ, ಕಾಫಿ ವ್ಯವಸ್ಥೆಯನ್ನೂ ಮಾಡಲಾಗಿತ್ತು.



ಕೃಷ್ಣರಾಜ ಕ್ಷೇತ್ರದ ನೂತನ ಶಾಸಕರೂ ಆದ ಬಿಜೆಪಿ ಜಿಲ್ಲಾಧ್ಯಕ್ಷ ಟಿ.ಎಸ್.ಶ್ರೀವತ್ಸ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್‌ಗೌಡ ಅಭಿನಂದಿಸಿದರು. ಈ ಸಂದರ್ಭದಲ್ಲಿ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಶ್ರೀನಿವಾಸ್‌ಗೌಡ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಮಹೇಂದ್ರ, ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಮೈಸೂರು ನಗರ ವ್ಯಾಪಾರ ಪ್ರಕೋಷ್ಠ ಸಹಸಂಚಾಲಕ ಸೋಮಶೇಖರ್, ಚಾಮುಂಡೇಶ್ವರಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಈರೇಗೌಡ, ಓಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ಜೋಗಿ ಮಂಜು, ಮುಖಂಡರಾದ ಜಗದೀಶ್, ಪ್ರದೀಪ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಕ್ಷೇತ್ರದ ಜನರೇ ನನ್ನ ತಂದೆ–ತಾಯಿ

ಮೈಸೂರು, ಮೇ 13(ಎಂಕೆ)– ಕ್ಷೇತ್ರದ ಜನರೇ ನಮ್ಮ ತಂದೆ–ತಾಯಿಯಾಗಿದ್ದು, ಅವರ ಸೇವೆಯ ಮೂಲಕ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ನಂಜನಗೂಡು ವಿಧಾನಸಭಾ ಕ್ಷೇತ್ರದ ವಿಜೇತ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ ಹೇಳಿದರು.



ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ನಡೆದ ರಾಜ್ಯ ವಿಧಾನಸಭಾ ಚುನಾವಣಾ ಮತ ಎಣಿಕೆ ವೇಳೆ ಗೆಲುವಿನ ನಗೆ ಬೀರಿದ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಗೆಲುವಿಗೆ ನನ್ನ ತಂದೆ(ಆರ್.ಧ್ರುವನಾರಾಯಣ್) ಆಶೀರ್ವಾದ ಹಾಗೂ ಕ್ಷೇತ್ರದ ಮತದಾರರು, ಕಾರ್ಯಕರ್ತರ ಬೆಂಬಲ ಮುಖ್ಯ ಕಾರಣವಾಗಿದ್ದು, ಬೆಂಬಲಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ ಎಂದರು.

ನನ್ನ ತಂದೆಯವರ ಅಕಾಲಿಕ ನಿಧನದ ಬಳಿಕ ಕ್ಷೇತ್ರದ ಜನತೆಯ ಒತ್ತಾಸೆಯ ಮೇರೆಗೆ ಕಾಂಗ್ರೆಸ್ ಅವಕಾಶ ಮಾಡಿಕೊಟ್ಟಿತು. ಅಭ್ಯರ್ಥಿಯೆಂದು ಘೋಷಣೆಯಾದ ಕೂಡಲೇ ಕಾಂಗ್ರೆಸ್‌ನ ಹಿರಿಯ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಚರ್ಚಿಸಿ ಒಗ್ಗಟ್ಟಿನಿಂದ ಶ್ರಮಪಟ್ಟು ಕೆಲಸ ಮಾಡಿದ್ದು, ನನ್ನ ಬೂತ್ ನನ್ನ ಜವಾಬ್ದಾರಿ ಎಂಬ ನಿಟ್ಟಿನಲ್ಲಿ ಜವಾಬ್ದಾರಿ ವಹಿಸಿ ಕೆಲಸ ಮಾಡಿದ್ದರ ಫಲವಾಗಿ ಜಯಗಳಿಸಲು ಸಾಧ್ಯವಾಗಿದೆ ಎಂದು ನುಡಿದರು. ನಂಜನಗೂಡು ಕ್ಷೇತ್ರದ ಜನತೆಯೂ ಬದಲಾವಣೆ ಬಯಸಿದ್ದರು. ಹಾಗೆಯೇ ಬಿಜೆಪಿ ಸರ್ಕಾರ ಭ್ರಷ್ಟಾಚಾರದಿಂದಾಗಿ ಕಾಂಗ್ರೆಸ್ ಪರ ಅಲೆ ಇತ್ತು. ನಾನು ಒಬ್ಬ ವಕೀಲನಾಗಿ ಭ್ರಷ್ಟಾಚಾರದ ಬಗ್ಗೆ ಅಧ್ಯಯನ ಮಾಡಿದ್ದೇನೆ. ಭ್ರಷ್ಟಾಚಾರವನ್ನು ತಡೆಯುವುದು ಹೇಗೆ ಎಂಬುದನ್ನು ಅರಿತಿದ್ದೇನೆ. ಎಂಎಸ್‌ಸಿ ಪಬ್ಲಿಕ್ ಪಾಲಿಸಿ ಮಾಡಿರುವುದರಿಂದ ಜನಸೇವೆಯ ಜವಾಬ್ದಾರಿ ನಿರ್ವಹಿಸಲು ಅನುಕೂಲವಾಗಲಿದೆ ಎಂದರು.

ಎಂದಿಗೂ ಮರೆಯಲಾಗದ ನೋವು

“ನನ್ನ ಕುಟುಂಬಕ್ಕೆ ಆಗಿರುವ ನೋವು ಎಂದಿಗೂ ಕಡಿಮೆಯಾಗುವುದಿಲ್ಲ. ತಂದೆ–ತಾಯಿಯನ್ನು ನಾನು ಕಳೆದುಕೊಂಡಿದ್ದೇನೆ. ಒಬ್ಬ ಮನುಷ್ಯನಿಗೆ ತುಂಬಾ ಹತ್ತಿರವಿರುವ ಸಂಬಂಧ ಎಂದರೆ ತಂದೆ–ತಾಯಿ ಮಾತ್ರ. ನನಗೆ ಅವರಿಲ್ಲ. ಮುಂದಿನ ದಿನಗಳನ್ನು ನಮ್ಮ ತಂದೆ–ತಾಯಿಯನ್ನು ಕ್ಷೇತ್ರದ ಜನತೆಯಲ್ಲಿ ನೋಡುತ್ತಾ ಅವರ ಸೇವೆ ಮಾಡುತ್ತೇನೆ. –ದರ್ಶನ್ ಧ್ರುವನಾರಾಯಣ


ತಿಂಡಿ–ತಿನಿಸುಗಳ ವ್ಯಾಪಾರವೂ ಬಲು ಜೋರು



ಮೈಸೂರು, ಮೇ 13(ಎಂಕೆ)– ವಿಧಾನಸಭಾ ಚುನಾವಣಾ ಫಲಿತಾಂಶದ ಬಿಸಿಯ ನಡುವೆ ತಿಂಡಿ–ತಿನಿಸುಗಳ ವ್ಯಾಪಾರ ಜೋರಾಗಿತ್ತು. ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನಲ್ಲಿ ಜಿಲ್ಲೆಯ 11 ಕ್ಷೇತ್ರಗಳ ಮತ ಎಣಿಕೆ ಕಾರ್ಯ ನಡೆಯುತ್ತಿದ್ದರೆ, ಇತ್ತ ತಿಂಡಿ–ತಿನಿಸುಗಳ ವ್ಯಾಪಾರ ಜೋರಾಗಿ ನಡೆಯಿತು. ಪಡುವಾರಹಳ್ಳಿ ಜೋಡಿ ಮಾರಮ್ಮ ದೇವಸ್ಥಾನ ರಸ್ತೆ ಉದ್ದಕ್ಕೂ (ಮತ ಎಣಿಕೆ ಕೇಂದ್ರ ಹಿಂಭಾಗ) ತಳ್ಳುವ ಗಾಡಿಗಳನ್ನು ನಿಲ್ಲಿಸಿಕೊಂಡಿದ್ದ ಚುರುಮುರಿ, ಪಾನಿಪುರಿ, ಸೌತೆಕಾಯಿ, ಐಸ್‌ಕ್ರೀಂ ಇನ್ನಿತರೆ ತಿಂಡಿ–ತಿನಿಸುಗಳ ಮಾರಾಟಗಾರರು ಭರ್ಜರಿ ವ್ಯಾಪಾರ ನಡೆಸಿದರು. ತಮ್ಮ ಬೆಂಬಲಿತ ಅಭ್ಯರ್ಥಿಗಳ ವಿಜಯೋತ್ಸವ ಆಚರಿಸಲು ನೆರೆದಿದ್ದ ಸಾವಿರಾರು ಮಂದಿ ತಿಂಡಿ–ತಿನಿಸುಗಳ ರುಚಿ ಸವಿದರಲ್ಲದೆ, ಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು.

ಪ್ರಧಾನಿ ಮೋದಿಯವರ ಅಧಿಕಾರದ ಕೊನೆಗಾಲ ಕರ್ನಾಟಕದಿಂದ ಪ್ರಾರಂಭ

ಚುನಾವಣಾ ಫಲಿತಾಂಶದ ಬಳಿಕ ಎಂಎಲ್‌ಸಿ ವಿಶ್ವನಾಥ್ ಭವಿಷ್ಯ



ಮೈಸೂರು,ಮೇ 13(ಪಿಎಂ)–ಈ ನಾಡಿನ ಚುನಾವಣೆಯ ಫಲಿತಾಂಶವು 2024ರ ಏಪ್ರಿಲ್‌ನಲ್ಲಿ ನಡೆಯುವ ಲೋಕಸಭಾ ಚುನಾವಣೆಗೆ ದಿಕ್ಸೂಚಿಯಾಗಲಿದ್ದು, ಪ್ರಧಾನಿ ನರೇಂದ್ರ ಮೋದಿಯವರ ಅಧಿಕಾರದ ಕೊನೆಗಾಲ ಕರ್ನಾಟಕದಿಂದ ಪ್ರಾರಂಭವಾಗಿದೆ ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ತಿಳಿಸಿದರು.

ಮೈಸೂರಿನ ಟಿ.ಕೆ. ಬಡಾವಣೆಯಲ್ಲಿರುವ ಮಾಜಿ ಸಿಎಂ ಸಿದ್ದರಾಮಯ್ಯ ಅವರ ನಿವಾಸದ ಆವರಣದಲ್ಲಿ ಶನಿವಾರ ಫಲಿತಾಂಶದ ಬಳಿಕ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಮುಂಬರುವ ಲೋಕಸಭಾ ಚುನಾವಣೆಗೆ ಈ ಫಲಿತಾಂಶ ದಿಕ್ಸೂಚಿ ಆಗಲಿದೆ. ಮೋದಿಯವರು ಪ್ರಚಾರಕ್ಕೆ ಬಂದಿದ್ದೇ ಬಿಜೆಪಿಗೆ ಸಮಸ್ಯೆಯಾಯಿತು. ಮೋದಿಯವರು ಇಲ್ಲಿ ಬಂದು ಏನನ್ನೂ ಹೇಳಲಿಲ್ಲ. ಸುಮ್ಮನೆ ರೋಡ್ ಶೋ ಮಾಡಿ, ಹೂ ಎರಚಿಸಿಕೊಂಡು ಹೋದರು ಎಂದು ಲೇವಡಿ ಮಾಡಿದರು.

ಕರ್ನಾಟಕದ ಮತದಾರರು ಬಿಜೆಪಿಯ ಜನದ್ರೋಹಿ ಕೆಲಸದ ವಿರುದ್ಧ ಬಹುಮತವನ್ನು ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ತ್ರಿಮೂರ್ತಿ ನಾಯಕತ್ವದಲ್ಲಿ ನಾಡಿನ ಜನತೆ ನಂಬಿಕೆ ಇಟ್ಟು ಬಹುಮತ ನೀಡಿ ಸರ್ಕಾರ ರಚನೆಗೆ ಅವಕಾಶ ಕೊಟ್ಟಿದ್ದಾರೆ. ಇಡೀ ನಾಡು ಸಂತೋಷಪಟ್ಟಿದೆ. ಸರ್ಕಾರ ರಚನೆ ನಂತರ ಜನರಿಗೆ ಕೊಟ್ಟ ವಚನಕ್ಕೆ ಕಟಿಬದ್ಧರಾಗಬೇಕಿರುವುದು ನಮ್ಮ ಮುಂದಿದೆ ಎಂದರು.


ನಿಮ್ಮ ಬಾಂಬೆ ಟೀಂನಲ್ಲಿದ್ದ ಕೆಲವರು ಸೋತಿದ್ದಾರೆ ಎಂಬ ಬಗ್ಗೆ ಪ್ರತಿಕ್ರಿಯಿಸಿ, ಡಾ.ಕೆ.ಸುಧಾಕರ್ ದುರಹಂಕಾರಿ. ಅವರ ಪಾಳೇಗಾರಿಕೆಗೆ ಜನ ತಕ್ಕ ಉತ್ತರ ಕೊಟ್ಟಿದ್ದಾರೆ ಎಂದು ಹೇಳಿದರು.

ಮುಖ್ಯಮಂತ್ರಿ ಸ್ಥಾನ ಕಾಂಗ್ರೆಸ್ ಹೈಕಮಾಂಡ್‌ಗೆ ಬಿಟ್ಟ ನಿರ್ಧಾರ. ನಮ್ಮದೇ ರಾಜ್ಯದವರಾದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅನುಭವಿಗಳಿದ್ದಾರೆ. ಅವರೂ ಸೇರಿದಂತೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ರಣದೀಪ್‌ಸಿಂಗ್ ಸುರ್ಜೇವಾಲ, ರಾಹುಲ್‌ಗಾಂಧಿ ಸೇರಿದಂತೆ ವರಿಷ್ಠರು ತೀರ್ಮಾನಿಸುತ್ತಾರೆ. ಅದೇನೂ ದೊಡ್ಡ ವಿಚಾರವಲ್ಲ ಎಂದು ವಿಶ್ವನಾಥ್ ತಿಳಿಸಿದರು.

“ದೇಶದ ಅಧಿಕಾರದ ಚುಕ್ಕಾಣಿ ಹಿಡಿದು ಯಾವುದೇ ಕೆಲಸ ಕಾರ್ಯಗಳನ್ನು ಮಾಡದೇ ಬರೀ ಮಾತುಗಳಲ್ಲೇ ಜನತೆ ನಂಬಿಸಲು ಬಿಜೆಪಿಯವರು ಪ್ರಯತ್ನಿಸಿದರು. ಜಿಎಸ್‌ಟಿ, ಬೆಲೆ ಏರಿಕೆ ವಿರುದ್ಧ ಜನ ತಕ್ಕ ಉತ್ತರ ಕೊಟ್ಟಿದ್ದಾರೆ. ಕೊಡಗು ಜಿಲ್ಲೆಯ ಎರಡೂ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲುವು ಸಾಧಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ಜನ ಬದಲಾವಣೆ ಬಯಸಿದ್ದರು. ಅಂತೆಯೇ ಬದಲಾವಣೆ ಮಾಡಿದ್ದಾರೆ.


–ಎ.ಹೆಚ್.ವಿಶ್ವನಾಥ್

ಸಹೋದರರ ಸವಾಲ್



ಶಿವಮೊಗ್ಗ ಜಿಲ್ಲೆ ಸೊರಬ ಕ್ಷೇತ್ರದಲ್ಲಿ ಮಾಜಿ ಸಿಎಂ ದಿವಂಗತ ಬಂಗಾರಪ್ಪ ಪುತ್ರರ ನಡುವಿನ ಜಿದ್ದಾಜಿದ್ದಿಯಲ್ಲಿ ಈ ಬಾರಿ ಬಿಜೆಪಿಯ ಕುಮಾರ್ ಬಂಗಾರಪ್ಪ ಅವರನ್ನು ಮಣಿಸುವಲ್ಲಿ ಕಾಂಗ್ರೆಸ್‌ನ ಮಧು ಬಂಗಾರಪ್ಪ ಯಶಸ್ವಿಯಾಗಿದ್ದಾರೆ. ಯಮಕನಮರಡಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಸತೀಶ್ ಜಾರಕಿಹೊಳಿ ಅವರ ಸಹೋದರ ಬಿಜೆಪಿ ಅಭ್ಯರ್ಥಿ ರಮೇಶ್ ಜಾರಕಿಹೊಳಿ ಗೋಕಾಕ್‌ನಲ್ಲಿ ಹಾಗೂ ಮತ್ತೋರ್ವ ಸೋದರ ಬಾಲಚಂದ್ರ ಜಾರಕಿಹೊಳಿ ಅರಬಾವಿಯಲ್ಲಿ ಗೆಲುವು ಸಾಧಿಸಿದ್ದಾರೆ. ಹೀಗೆಯೇ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಚನ್ನಪಟ್ಟಣ ಹಾಗೂ ಅವರ ಸಹೋದರ ಹೆಚ್.ಡಿ. ರೇವಣ್ಣ ಹೊಳೆನರಸೀಪುರ ಕ್ಷೇತ್ರದಿಂದ ವಿಜಯಶಾಲಿಗಳಾಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.5.2023 ಭಾನುವಾರ, ಮಳೆ ನಕ್ಷತ್ರ: ಕೃತ್ತಿಕ, 11.05.2023 ರಿಂದ 24.05.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಶತಭಿಷ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಸುರಭಿ ಗಾನಕಲಾಮಂದಿರ ಚಾರಿಟೆಬಲ್ ಟ್ರಸ್ಟ್ :** ಸಂಗೀತಾಮೃತ ವರ್ಷಿಣಿ ರಾಗಾಧಾರಿತ–ಮನೋಧರ್ಮ ಸಂಗೀತ ಶಿಬಿರ, ಸ್ಥಳ: ಸುರಭಿ ಗಾನಕಲಾಮಂದಿರ, ಗೋಕುಲಂ 3ನೇ ಹಂತ, ಸಂಜೆ 4.30ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸಮಿತಿ :** ಪಂಡಿತ್ ನರಸಿಂಹಾಚಾರ್ಯ ಘೋಟೆ ಅವರಿಂದ ಭಗವದ್ಗೀತೆ 8ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀರಾಮಕೃಷ್ಣ ವಚನವೇದ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಗಾನಭಾರತೀ :** ವಿದ್ವಾನ್ ಟಿ.ಎಂ. ಕೃಷ್ಣ ಅವರಿಂದ ಗಾಯನ, ವಿದ್ವಾನ್ ಎಚ್.ಎನ್. ಭಾಸ್ಕರ್–ಪಿಟೀಲು, ವಿದ್ವಾನ್ ಅರುಣ್ ಪ್ರಕಾಶ್–ಮೃದಂಗ, ವಿದ್ವಾನ್ ಗಿರಿಧರ ಉಡುಪ–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶ್ರೀ ಭಗವದ್ಗೀತಾ ಅಭಿಯಾನ, ಪಂಡಿತ್ ನರಸಿಂಹಾಚಾರ್ಯ ಘೋಟೆ ಅವರಿಂದ ಭಗವದ್ಗೀತೆ 8ನೇ ಅಧ್ಯಾಯದ ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ –ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ. ಚಂದ್ರಶೇಖರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ–ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, ಪ್ರಸ್ತುತಿ–ಪರಮೇಶ್ವರ ವಿ.ಭಟ್, 7.15 ಭಾವಗೀತೆಗಳು–ಮಂಜುಳಾ ಗುರುರಾಜ್, 8.30 ಹಾದಿಯಲ್ಲಿ ಕಂಡ ಮುಖ– ಮೂರು ದಶಕಗಳ ಕಾಲ ರೇಲ್ವೆ ಚಾಲಕರಾಗಿದ್ದ ಜಿ.ಕೆ.ಅನಂತ ಅವರೊಂದಿಗೆ ಮಾತುಕತೆ, 9.45 ನಮ್ಮ ಆರೋಗ್ಯ–ಯುವ ಜನರಲ್ಲಿ ಆನ್‌ಲೈನ್ ಬಳಕೆ ಹಾಗೂ ಮೊಬೈಲ್ ಬಳಕೆಯ ಗೀಳು ಮತ್ತು ಪರಿಹಾರ ಕುರಿತು ಡಾ.ರವೀಶ್ ಬಿ.ಎನ್.ಅವರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ–ಕಥೆ ಹೇಳುತ್ತಾರೆ–ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ–ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00 ಸಾಲಿಟ್ಟುಹಣತೆ ಬೆಳಗೀವು. **ಮಧ್ಯಾಹ್ನ:** 12.30 ದೇವರನಾಮ–ಬಾಂಬೆ ಸಹೋದರಿಯರು, 12.45 ಜನಪದ ಸಂಗೀತ–ಸಿ.ಎಂ.ನರಸಿಂಹಮೂರ್ತಿ, 1.20 ಭಾವಗೀತೆಗಳು–ರೇಣುಕಾ ನಾಕೋಡ್, 3.45 ಯಕ್ಷಗಾನ ತಾಳ ಮದ್ದಲೆ–ಪ್ರಸಂಗ–ಮೋಕ್ಷ ಸಂಗ್ರಾಮ ಪ್ರಸ್ತುತಿ–ಧರ್ಮಸ್ಥಳದ ಬಿ.ಭುಜಬಲಿ ಮತ್ತು ಬಳಗದವರು 5.05 ಮಿಶ್ರ ಮಾಧುರ್ಯ 6.50 ಕೃಷಿರಂಗ–ಸಮಗ್ರ ಕೃಷಿಯಲ್ಲಿ ತಂತ್ರಜ್ಞಾನದ ಬಳಕೆ ಕುರಿತು ಕೆ.ಪ್ರಶಾಂತ್‌ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎಸ್.ಸುಬ್ರಹ್ಮಣ್ಯ 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಸಂಗೀತ ಪರಿಚಾರಕ ಸಿ.ಆರ್.ಹಿಮಾಂಶು 9.15 ರಂಗಗೀತೆಗಳು–ಎಂ.ಪಿ.ನಾಗಲಿಂಗಾಚಾರ್, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ ರಾಜೇಂದ್ರ ದೇಶ್ ಮುಖ್– ಗಾಯನ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 14 ಭಾನುವಾರ 2023

ಸಂಪುಟ: 44 | ಸಂಚಿಕೆ: 28 | ಪುಟಗಳು: 12+IV

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕರ್ನಾಟಕ ವಶ

ಬಿಜೆಪಿ, ಜೆಡಿಎಸ್ ಧೂಳೀಪಟ ಮಾಡಿದ ಕಾಂಗ್ರೆಸ್ ಗ್ಯಾರಂಟಿ

ಉತ್ತರ ಕರ್ನಾಟಕದಲ್ಲಿ ಬಿಜೆಪಿ, ದಕ್ಷಿಣ ಕರ್ನಾಟಕದಲ್ಲಿ ಜೆಡಿಎಸ್ ಕಿವುಚಿದ ಕೈ



135 | 66 | 19 | 4 ಇತರರು

ಬೆಂಗಳೂರು, ಮೇ 13(ಕೆಎಂಶಿ)–ಕಾಂಗ್ರೆಸ್‌ನ ಗ್ಯಾರಂಟಿ ಭರವಸೆಗಳು ಆಡಳಿತಾರೂಢ ಬಿಜೆಪಿ ಹಾಗೂ ಜೆಡಿಎಸ್ ಪಕ್ಷವನ್ನು ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಧೂಳೀಪಟ ಮಾಡಿವೆ.


ಮೇ 10ರಂದು ರಾಜ್ಯ ವಿಧಾನಸಭೆಗೆ ನಡೆದ ಚುನಾವಣೆಯ ಫಲಿತಾಂಶ ಇಂದು ಪ್ರಕಟವಾಗಿದ್ದು, ಕಾಂಗ್ರೆಸ್ 135 ಸ್ಥಾನ ಗಳಿಸಿ ಅಧಿಕಾರದ ಚುಕ್ಕಾಣಿ ಹಿಡಿದಿದ್ದರೆ, ಆಡಳಿತಾರೂಢ ಬಿಜೆಪಿ ಕೇವಲ 66 ಸ್ಥಾನ ಪಡೆದು ಅಧಿಕಾರ ಕಳೆದುಕೊಂಡಿದೆ. ಅತಂತ್ರ ವಿಧಾನಸಭೆ ನಿರ್ಮಾಣವಾಗಿ ಅಧಿಕಾರ ಹಿಡಿಯಬೇಕೆಂದು ಕನಸು ಕಂಡಿದ್ದ ಜೆಡಿಎಸ್‌ಗೆ ಹಳೇ ಮೈಸೂರು ಭಾಗದಲ್ಲೇ ಮರ್ಮಾಘಾತವಾಗಿದೆ. ಆ ಪಕ್ಷ ಕೇವಲ 19 ಸ್ಥಾನ ಗಳಿಸಿದರೆ ಪಕ್ಷೇತರರು ನಾಲ್ಕು ಮಂದಿ ಆಯ್ಕೆಗೊಂಡಿದ್ದಾರೆ. ಸರ್ಕಾರದ ಮೇಲೆ ಬಂದ ಭ್ರಷ್ಟಾಚಾರ ಆರೋಪದಿಂದ ಬಸವರಾಜ ಬೊಮ್ಮಾಯಿ ಸಂಪುಟದ 12ಕ್ಕೂ ಹೆಚ್ಚು ಸಚಿವರನ್ನು ಮತದಾರರು ಮನೆಗೆ ಕಳುಹಿಸಿದ್ದಾರೆ. ಕರಾವಳಿ ತೀರ ಹೊರತುಪಡಿಸಿದರೆ, ಹಳೇ ಮೈಸೂರು, ಕಲ್ಯಾಣ, ಮುಂಬೈ ಕರ್ನಾಟಕದಲ್ಲಿ ಕಾಂಗ್ರೆಸ್ ಜಯಭೇರಿ ಭಾರಿಸಿದೆ. ಬೆಂಗಳೂರು ನಗರದಲ್ಲಿ ಮಾತ್ರ 28 ಕ್ಷೇತ್ರಗಳನ್ನು ಸಮನಾಗಿ ಕಾಂಗ್ರೆಸ್–ಬಿಜೆಪಿ ಹಂಚಿಕೊಂಡಿವೆ. ಇನ್ನುಳಿದಂತೆ ಬೇರೆ ಜಿಲ್ಲೆಗಳಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ಗೆ ಕೆಲವು ಸ್ಥಾನಗಳನ್ನು ನೀಡಿ, ಉಳಿದವುಗಳನ್ನು ಬಾಚಿಕೊಂಡಿದೆ. ● 10ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲೂ ಕಾಂಗ್ರೆಸ್ ಮೇಲುಗೈ

● ಒಟ್ಟು 11 ಕ್ಷೇತ್ರದಲ್ಲಿ 8 'ಕೈ' ವಶ; ಜೆಡಿಎಸ್ 2, ಬಿಜೆಪಿ 1 ● ರಾಜ್ಯದ ಅತೀ ಹೈವೋಲ್ಟೇಜ್ ಕ್ಷೇತ್ರ ವರುಣದಲ್ಲಿ ಸಿದ್ದರಾಮಯ್ಯ ಜಯಭೇರಿ

ಮೈಸೂರು, ಮೇ 13 (ಆರ್‌ಕೆ)–ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣಾ ಫಲಿತಾಂಶ ಹೊರಬಿದ್ದಿದ್ದು, ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್ 8 ಸ್ಥಾನ ಪಡೆಯುವ ಮೂಲಕ ಮತ್ತೆ ಮೇಲುಗೈ ಸಾಧಿಸಿದೆ.

ಜಿಲ್ಲೆಯ 11 ಕ್ಷೇತ್ರಗಳಲ್ಲಿ 8 ಮಂದಿ ಕಾಂಗ್ರೆಸ್ ಅಭ್ಯರ್ಥಿಗಳು ಜಯ ಗಳಿಸಿದ್ದು, ಅತೀ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದೆ ಉಳಿದಂತೆ ಜೆಡಿಎಸ್‌ನ 2 ಹಾಗೂ ಬಿಜೆಪಿ 1 ಸ್ಥಾನಕ್ಕೆ ತೃಪ್ತಿಪಡಬೇಕಾಯಿತು. ಭಾರೀ ಜಿದ್ದಾಜಿದ್ದಿ ಕಣವಾಗಿದ್ದ ಹೈವೋಲ್ಟೇಜ್ ಕ್ಷೇತ್ರ ವರುಣದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ● 10ನೇ ಪುಟಕ್ಕೆ



ಸಿದ್ದರಾಮಯ್ಯ | ಜಿ.ಟಿ.ದೇವೇಗೌಡ | ಮಹದೇವಪ್ಪ | ತನ್ವೀರ್‌ಸೇಠ್ | ವೆಂಕಟೇಶ್ | ಅನಿಲ್

ಜಿ.ಡಿ.ಹರೀಶ್‌ಗೌಡ | ಶ್ರೀವತ್ಸ | ಕೆ.ಹರೀಶ್‌ಗೌಡ | ರವಿಶಂಕರ್ | ದರ್ಶನ್

ನಕ್ಕರೆ ಅದೇ ಸ್ವರ್ಗ

ಟೀಚರ್ : "ಮಕ್ಕಳೇ, ಸಂಜೆ ಮನೆಗೆ ಹೋದ ಮೇಲೆ ಏನ್ ಮಾಡ್ತೀರಾ?"
ಪುಟ್ಟ : (ತಕ್ಷಣ ಎದ್ದು ನಿಂತು) "ಒಂದು ಗಂಟೆ ಆಟ ಆಡ್ತೀನಿ. ಆಮೇಲೆ ಬುಕ್ ಓಪನ್ ಮಾಡ್ತೀನಿ ಟೀಚರ್"
ಟೀಚರ್ : "ವೆರಿ ಗುಡ್, ಯಾವ ಬುಕ್ ಓಪನ್ ಮಾಡ್ತೀಯಾ?
ಪುಟ್ಟ : "ಫೇಸ್‌ಬುಕ್ ಟೀಚರ್...!"

ಮೈಸೂರು ಮಿತ್ರ

ಭಾನುವಾರ, 14 ಮೇ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಒಳ್ಳೆಯದನ್ನು ಮಾಡುವುದಷ್ಟೇ ಅಲ್ಲ, ಅದನ್ನು ಒಳ್ಳೆಯ ರೀತಿ ಮಾಡಬೇಕು–ಚಾಣಕ್ಯ

ವೇದ ಸುಳ್ಳಾದರೂ { ಅಲ್ಪನ ಮುಂದೆ ಹಲ್ಲು ಕಿರೀಬೇಡ, ದುಷ್ಟನ ಮುಂದೆ ಕಾಲು ಕೆರೀಬೇಡ

ನಿಮ್ಮ ಪತ್ರಗಳು

ಹುಲಿ ಸಂತತಿ ಹೆಚ್ಚಳ ಸ್ವಾಗತಾರ್ಹ

ಮಾನ್ಯರೆ,

"ಗಂಧದ ಬೀಡು ಕರುನಾಡು ಹುಲಿಗಳ ನಾಡು ಕರುನಾಡ" ಎಂಬ ಮಾತಿನಂತೆ ಕರ್ನಾಟಕದಲ್ಲಿ ಪ್ರಸ್ತುತ ಹುಲಿಗಳ ಸಂಖ್ಯೆ ಹೆಚ್ಚಾಗಿರುವುದು ಸಂತಸದ ಸಂಗತಿಯಾಗಿದೆ. ಜೊತೆಗೆ ನೈಸರ್ಗಿಕ ಸಮತೋಲಕ್ಕೆ ಅನುಕೂಲಕರವಾಗಿದೆ. ಭಾರತ ಸರ್ಕಾರದ ಹುಲಿ ಸಂರಕ್ಷಣಾ ಯೋಜನೆಯ 50 ವರ್ಷಗಳ ಸಂಭ್ರಮದ ಪ್ರಯುಕ್ತ ನಡೆಸಿದ ಸಮೀಕ್ಷೆಯ ಪ್ರಕಾರ ಕರ್ನಾಟಕ 524 ಹುಲಿಗಳನ್ನು ಹೊಂದಿದೆ. 526 ಹುಲಿಗಳನ್ನು ಹೊಂದಿರುವ ಮಧ್ಯಪ್ರದೇಶ ರಾಜ್ಯ ಮೊದಲ ಸ್ಥಾನದಲ್ಲಿದ್ದು, ಕರ್ನಾಟಕ ರಾಜ್ಯ ಎರಡನೇ ಸ್ಥಾನದಲ್ಲಿದೆ.

2018ರ ಮಾಹಿತಿಯಂತೆ 2967 ಹುಲಿಗಳು ಭಾರತ ದೇಶದಲ್ಲಿತ್ತು. ಆದರೆ ಪ್ರಸ್ತುತ 3500 ಸಾವಿರಕ್ಕೂ ಹೆಚ್ಚು ಹುಲಿಗಳಿರುವುದು ಉತ್ತಮ ಬೆಳವಣಿಗೆ. ಪ್ರಾಕೃತಿಕ ಸಮತೋಲನಕ್ಕೆ ಹುಲಿಗಳು ಬಹಳ ಮುಖ್ಯವಾಗಿದೆ. ಜಿಂಕೆ, ಕಡವೆ, ಕೃಷ್ಣಮೃಗ, ಕಾಡೆಮ್ಮೆ ಮುಂತಾದ ಪ್ರಾಣಿಗಳನ್ನು ಬೇಟೆಯಾಡುವ ಮೂಲಕ ಹುಲಿಗಳು ಈ ಪ್ರಾಣಿಗಳ ಸಂಖ್ಯೆ ಹೆಚ್ಚಾಗದಂತೆ ನೋಡಿಕೊಳ್ಳುತ್ತದೆ ಮತ್ತು ಈ ಪ್ರಾಣಿಗಳ ಸಂಖ್ಯೆ ಹೆಚ್ಚಾದರೆ ಮೇವಿಗಾಗಿ ಪ್ರಾಣಿಗಳು ಜನವಸತಿ ಪ್ರದೇಶಗಳಿಗೆ ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದ್ದರಿಂದ ಹುಲಿಗಳು ತುಂಬಾ ಪ್ರಾಮುಖ್ಯತೆಯನ್ನು ಹೊಂದಿದೆ.

ಹುಲಿಗಳ ಇತಿಹಾಸ ಗಮನಿಸಿದರೆ 19ನೇ ಶತಮಾನದಲ್ಲಿ 40,000ದಷ್ಟಿದ್ದ ಹುಲಿಗಳ ಸಂಖ್ಯೆ ಬ್ರಿಟಿಷ್‌ರ ಕಾಲದಲ್ಲಿ ರಾಜಮಹಾರಾಜರು ಬಂದೂಕು ಬಳಸಿ ಹುಲಿಗಳನ್ನು ಬೇಟೆಯಾಡುವುದು ಹವ್ಯಾಸವಾಗಿ ಮಾಡಿಕೊಂಡ ಪರಿಣಾಮ ಸ್ವಾತಂತ್ರ್ಯ ನಂತರ ಹುಲಿಗಳ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಇಳಿಕೆ ಕಂಡು ಬಂದಿತು. ಸ್ವಾತಂತ್ರ್ಯ ನಂತರ ಹುಲಿಗಳನ್ನು ಅದರ ಚರ್ಮ, ಹಲ್ಲಿಗಾಗಿ, ಅಕ್ರಮವಾಗಿ ಬೇಟೆಯಾಡಲಾಗುತ್ತಿತ್ತು. ಇವೆಲ್ಲದರ ಪರಿಣಾಮವಾಗಿ 1972 ರಲ್ಲಿ ಹುಲಿಗಳ ಸಂಖ್ಯೆ ಕೇವಲ 1827ಕ್ಕೆ ಇಳಿದು ಅಳಿವಿನಂಚಿಗೆ ತಲುಪಿತು. ಇದನ್ನು ಮನಗಂಡ ಅಂದಿನ ಕೇಂದ್ರ ಸರ್ಕಾರ 1973 ರಲ್ಲಿ ಹುಲಿ ಯೋಜನೆಯನ್ನು ಜಾರಿಗೊಳಿಸಿ ಹುಲಿಗಳ ಸಂತತಿಯನ್ನು ಉಳಿಸುವ ಮತ್ತು ಬೆಳೆಸುವ ಯೋಜನೆಯನ್ನು ರೂಪಿಸಿತು.

ಈ ಹುಲಿ ಯೋಜನೆಯ ಪರಿಣಾಮ ಹಾಗೂ 1972ರ ವನ್ಯಜೀವಿ ಕಾಯ್ದೆಯ ಕಟ್ಟುನಿಟ್ಟಿನ ಅನುಷ್ಠಾನ ಕೂಡ ಹುಲಿಗಳ ಹೆಚ್ಚಳಕ್ಕೆ ಕಾರಣವಾಗಿದೆ. ಅಂಕಿ ಅಂಶಗಳ ಪ್ರಕಾರ ಶೇ.55ರಷ್ಟು ಹುಲಿಗಳು ಸಹಜವಾಗಿ ಮರಣ ಹೊಂದಿದರೆ, ಬೇಟೆ ಮತ್ತು ಮಾರಾಟದ ಉದ್ದೇಶಕ್ಕಾಗಿ ಶೇ.38ರಷ್ಟನ್ನು ಕೊಲ್ಲಲಾಗುತ್ತಿತ್ತು ಮತ್ತು 4% ಅಪಘಾತದಲ್ಲಿ ಮರಣ ಹೊಂದುತ್ತಿತ್ತು. ಇವೆಲ್ಲವನ್ನು ಮೀರಿ ಸರ್ಕಾರದ ಹುಲಿ ಯೋಜನೆಯ ಪರಿಣಾಮ ಹುಲಿಗಳ ಸಂಖ್ಯೆಯಲ್ಲಿ ವೃದ್ಧಿಯಾಗಿರುವುದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಎಲ್ಲಾ ಭಾರತೀಯರ ಪರವಾಗಿ ಅಭಿನಂದನೆಗಳು.

–ರಾಸುಮ ಭಟ್, ಚಿಕ್ಕಮಗಳೂರು.

ಕನ್ನಡಿಗರ ಅಸ್ಮಿತೆಗೆ ಧಕ್ಕೆ

ಮಾನ್ಯರೆ.

ಗಡಿ ವಿಚಾರದಲ್ಲಿ ಮಹಾರಾಷ್ಟ್ರ ಕರ್ನಾಟಕದ ಜೊತೆ ಆಗಾಗ ತಂಟೆ ತೆಗೆಯುವ ಕೆಲಸ ಮಾಡುತ್ತ ಬಂದಿದೆ. ಕರ್ನಾಟಕದ ವ್ಯಾಪ್ತಿಗೆ ಸೇರಿದ ಸುಮಾರು 865 ಹಳ್ಳಿಗಳಲ್ಲಿ ಆರೋಗ್ಯ ವಿಮಾ ಯೋಜನೆ ಜಾರಿಗೊಳಿಸುವ ಮೂಲಕ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಉಂಟು ಮಾಡಿದೆ.

ಗಡಿ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ಇದ್ದರೂ ಮಹಾರಾಷ್ಟ್ರ ಕ್ಯಾತೆ ತೆಗೆದಿದೆ. ಆಯಾ ರಾಜ್ಯಗಳು ಅವುಗಳದೇ ಆದ ಯೋಜನೆಗಳನ್ನು ಹೊಂದಿ ಸರ್ಕಾರ ನಡೆಸುತ್ತಿರುವಾಗ ತನ್ನ ವ್ಯಾಪ್ತಿ ಮೀರಿ ಬೇರೆ ರಾಜ್ಯದೊಳಗೆ ತನ್ನ ಯೋಜನೆಯನ್ನು ಘೋಷಿಸಿ ತನ್ನ ಉದ್ಧಟತನ ತೋರಿಸುವುದು ಸರಿಯಲ್ಲ.

ಕರ್ನಾಟಕ ಸರ್ಕಾರವು ಗಡಿಭಾಗದ ಜನರ ಸಂಕಷ್ಟವನ್ನು ತಿಳಿಯಬೇಕು. ಸ್ಥಳೀಯ ರಾಜಕಾರಣಿಗಳು ಹಾಗೂ ಜನಪ್ರತಿನಿಧಿಗಳು ಅಲ್ಲಿನ ಜೀವಂತ ಸಮಸ್ಯೆಗಳನ್ನು ತಿಳಿಯಬೇಕು. ಅವರ ಸಂಕಷ್ಟ ಅರಿಯದೆ ಅವರಿಗೆ ಸ್ಪಂದಿಸದೇ ಇರುವುದರಿಂದಲೇ ವಿಮೆಯ ಯೋಜನೆ ನುಸುಳಿತೆ!? ಗಡಿಭಾಗದ ವಾಸ್ತವತೆಯ ಸಮಸ್ಯೆ ಅರಿತು ಅವರಿಗೆ ಆದಾಯ ಯೋಜನೆಯನ್ನು ರೂಪಿಸಿಕೊಡಬೇಕಾಗುತ್ತದೆ. ಅಲ್ಲಿನ ಭಾವನಾತ್ಮಕ ವಿಷಯಗಳಿಗೆ ಸ್ಪಂದಿಸಬೇಕು. ಅವರ ಮನೋಬಲವನ್ನು ಹೆಚ್ಚಿಸಬೇಕು. ಮಾನಸಿಕವಾಗಿ ಸರ್ಕಾರ ಅವರ ಜೊತೆ ನಿಲ್ಲಬೇಕು. ಆಗ ಅಲ್ಲಿನ ಕನ್ನಡಿಗರೆ ಇಂತಹ ಯೋಜನೆಗಳ ವಿರುದ್ಧ ತಿರುಗಿ ಬೀಳಬಹುದು. ಏನೇ ಆಗಲಿ ಈ ವಿಮೆ ಯೋಜನೆ ಜಾರಿಗೊಳಿಸಿರುವ ಮಹಾರಾಷ್ಟ್ರ ಸರ್ಕಾರ, ಕನ್ನಡಿಗರ ಅಸ್ಮಿತೆಗೆ ಧಕ್ಕೆ ಉಂಟು ಮಾಡಿದೆ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು

ಕುವೆಂಪುನಗರ ಕೆಹೆಚ್‌ಬಿ ಕಾಲೋನಿ ಸುತ್ತಮುತ್ತ ನೀರಿನ ಸಮಸ್ಯೆ

ಮಾನ್ಯರೆ,

ಮೈಸೂರಿನ ಕುವೆಂಪುನಗರ ಕೆಹೆಚ್‌ಬಿ ಕಾಲೋನಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾರದಿಂದ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಉಲ್ಬಣಿಸಿದೆ. ಕೆಲವು ದಿನಗಳಿಂದ ನೀರು ಬಾರದೆ ಕೆಲಸಕ್ಕೆ ಹೋಗುವವರಿಗೆ ತುಂಬಾ ತೊಂದರೆ ಆಗಿದೆ. ಸಂಬಂಧಿಸಿದ ಅಧಿಕಾರಿಗಳಿಗೆ ಸಂಪರ್ಕಿಸಿದರೆ ಅವರು ಇನ್ನೊಬ್ಬರನ್ನು ಸಂಪರ್ಕಿಸಿ ಎಂದು ಹೇಳುತ್ತಾರೆ. ಮತ್ತೆ ಕೆಲವರ ಫೋನ್ ಸ್ವಿಚ್ ಆಫ್ ಆಗಿರುತ್ತದೆ. ಕೆಲವು ಅಧಿಕಾರಿಗಳು ಬಾಡಿಗೆ ಮನೆಯಲ್ಲಿರುವವರಿಗೆ ಸಂಪ್ ಮಾಡಿಸಿಕೊಳ್ಳದೇ ಇರುವುದು ನಿಮ್ಮ ಸಮಸ್ಯೆ ಎಂದು ಹೇಳುತ್ತಾರೆ. ಇದು ಸಾಧ್ಯವೇ? ಬಾಡಿಗೆ ಕಟ್ಟುವುದೇ ಈ ಕಾಲದಲ್ಲಿ ಕಷ್ಟವಾಗಿರುವಾಗ ಬಾಡಿಗೆದಾರರು ಸಂಪ್ ಮಾಡಿಸಿಕೊಳ್ಳಲು ಹೇಗೆ ಸಾಧ್ಯ. ಸಂಬಂಧಪಟ್ಟವರು ಇತ್ತ ಕಡೆ ಗಮನಹರಿಸಿ ಸಮಸ್ಯೆಯನ್ನು ಬಗೆಹರಿಸಬೇಕಾಗಿ ಮನವಿ. –ವಸಂತಕುಮಾರ್ ವಕೀಲರು,ಕುವೆಂಪುನಗರ. ಮೈಸೂರು

ವಿಷ–ರಸ!

ಮಾನ್ಯರೆ,

ರಾಜಕಾರಣಿಯೊಬ್ಬರು ಸೋನಿಯಾ ಗಾಂಧಿಯವರನ್ನು 'ವಿಷಕನ್ಯೆ' ಎಂದು ಕರೆದದ್ದು ಶುದ್ಧ ತಪ್ಪು. 'ವಿಷ' ಎನ್ನುವುದು ಮೊದಲನೆಯ ತಪ್ಪು; 'ಕನ್ಯೆ' ಎನ್ನುವುದು ಎರಡನೆಯ, ಅದಕ್ಕಿಂದ ದೊಡ್ಡ ತಪ್ಪು!

ವಾಸ್ತವವಾಗಿ, ಪ್ರತಿಯೊಬ್ಬರೂ 'ಅಮೃತ ಪುತ್ರರು' ಪುತ್ರಿಯರು ಕೂಡ. ("ಶ್ರಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ" – ಉಪನಿಷತ್ತು). ಇನ್ನು, ವಿಷದ ವಿಷಯ ಬೇಡವೇ ಬೇಡ; ರಸದ ಮಾತು ಮಾತ್ರ ಅಗತ್ಯ, ಮುಖ್ಯ ("ರಸೋ ವೈಸಃ")! 'ಸರ್ಪ' ಎಂಬ ಬೈಗುಳವನ್ನು ಸರ್ಪಭೂಷಣ ಕ್ಷಮಿಸಲಿ, ಭಾಷಣಗಳು ಶಿವಶಂಕರವಾಗಿರಲಿ!

–ಸಿಪಿಕೆ, ಪಂಪ ಪ್ರಶಸ್ತಿ ಪುರಸ್ಕೃತರು, ಮೈಸೂರು.



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ಸಕಾಲಿಕ

ಯಾರು ಹಿತವರು ಈ ತ್ರಿಮೂರ್ತಿಗಳಲ್ಲಿ; ಸಿದ್ದು–ಡಿಕೆಶಿ–ಖರ್ಗೆ

> ರಾಜ್ಯದಲ್ಲಿ ಬಿಜೆಪಿ ಸೋಲು ಈ ಪಕ್ಷದ ಹೈಕಮಾಂಡ್‌ಗೆ ಪರಮಾಶ್ಚರ್ಯ ತಂದಿದೆ. ಪಕ್ಷದ ವರ್ಚಸ್ಸು ಇಷ್ಟು ಕೆಳ ಮಟ್ಟಕ್ಕೆ ಕುಸಿದಿದೆ ಎಂಬ ಅಂದಾಜು ಅವರಿಗಿದ್ದಂತಿಲ್ಲ. ಗುಜರಾತ್ ಮಾದರಿಯಲ್ಲಿ ಕರ್ನಾಟಕ ಗೆಲ್ಲಬಹುದೆಂಬ ವರಿಷ್ಠರ ನಿರೀಕ್ಷೆ ಬರೀ 'ಭ್ರಮೆ' ಆಗಿದೆ. ತಾವು ಆಡಿದ್ದೇ ಆಟ, ರಾಜ್ಯ ನಾಯಕರೆಲ್ಲಾ 'ಕೈಗೊಂಬೆಗಳು' ಎಂಬ ಬಿಜೆಪಿ ವರಿಷ್ಠರ ಅನಿಸಿಕೆ ತಪ್ಪಾಗಿದೆ. ರಾಜ್ಯದ ಫಲಿತಾಂಶ ವರಿಷ್ಠರಿಗೂ ಎಚ್ಚರಿಕೆ ಗಂಟೆಯಾಗಿದೆ. ಅಲ್ಲದೆ ಅವರ ಆಸೆಯೂ ಭಗ್ನವಾಗಿದೆ. ಇತ್ತ ಯಾರೇ ಕೂಗಾಡಲಿ, ತಾವೇ ಮುಂದಿನ ಮುಖ್ಯಮಂತ್ರಿ ಎಂದು ಬೀಗುತ್ತಿದ್ದ ಕುಮಾರಸ್ವಾಮಿ ಆಸೆಯೂ ನುಚ್ಚು ನೂರಾಗಿದೆ. ತಂದೆ ಹೆಚ್.ಡಿ. ದೇವೇಗೌಡರು ಮಾಡಿದ ಪೂಜೆ–ಪುನಸ್ಕಾರಗಳಿಗೆ ದೇವರು ಒಲಿದಿಲ್ಲ.



ರಾಜ್ಯ ವಿಧಾನಸಭಾ ಚುನಾವಣೆಯೆಂಬ ಮಹಾಯುದ್ಧ ಮುಗಿಯಿತು. ನಿರೀಕ್ಷೆಗಳಿಗೆ ಮೀರಿ ರಾಜ್ಯದ ಜನತೆ ಕಾಂಗ್ರೆಸ್‌ಗೆ ಅಭೂತಪೂರ್ವ ಬೆಂಬಲ ನೀಡಿದ್ದಾರೆ. ಇದೊಂದು ಇತಿಹಾಸ ನಿರ್ಮಿಸುವಂತಹ ಫಲಿತಾಂಶ. ಕಾಂಗ್ರೆಸ್ ಪಾಲಿಗೆ ಈಗಲೂ ಗಾದಿ–ಗಾದಿ ಪೈಪೋಟಿ ಅಂದರೆ ಬಯಲಾಟ ಆರಂಭವಾಗಿದೆ.

ಚುನಾವಣಾ ಸಮೀಕ್ಷೆಗಳ ಫಲಿತಾಂಶವನ್ನು ಸುಳ್ಳು ಮಾಡುವಂತೆ ಮತದಾರರು ಏಕ ಪಕ್ಷದ ಸರ್ಕಾರಕ್ಕೆ 'ಜೈ' ಎಂದಿದ್ದಾರೆ. ಜನ–ಮನದ ಆಸೆಯೂ ಏಕ ಪಕ್ಷದ ಸರ್ಕಾರವೇ ಹೊರತು 'ಸಮ್ಮಿಶ್ರ' ಸರ್ಕಾರದ ವಿರುದ್ಧವಾಗಿತ್ತು. ಆದರೆ ಏಕ ಪಕ್ಷವೆಂದರೆ ಕಾಂಗ್ರೆಸ್ಸೋ–ಬಿಜೆಪಿಯೋ ಎಂಬುದು ಯಕ್ಷ ಪ್ರಶ್ನೆಯಾಗಿತ್ತು. ಪ್ರಶ್ನೆಗೆ ಈಗ ಸ್ಪಷ್ಟ ಉತ್ತರ ಸಿಕ್ಕಿದೆ. ಮತದಾರರು ತನ್ನ ಜಾಣ್ಮೆಯ ಪ್ರದರ್ಶನ ಮಾಡಿ ರಾಷ್ಟ್ರೀಯ ಕಾಂಗ್ರೆಸ್ 'ಕೈ' ಎತ್ತಿದ್ದಾರೆ.

ಕಾಂಗ್ರೆಸ್ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿಯುವ ಸೂಚನೆ ಕಾಣುತ್ತಿದ್ದರೂ, ಅದು ಅಗೋಚರವಾಗಿತ್ತು. ಚುನಾವಣಾ ಪ್ರಚಾರದ ಅಬ್ಬರ, ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ನಾಯಕರ ಸಮರ–ಸರಸ ಜನಸಾಮಾನ್ಯರನ್ನು ಮೂಕಪ್ರೇಕ್ಷಕರನ್ನಾಗಿ ಮಾಡಿತ್ತು. ಬಿಜೆಪಿಯ ಆರ್ಭಟದ ನಡುವೆಯೂ 'ಕೈ' ನಾಯಕರು ಸರ್ವವನ್ನು ಸವಾಲಾಗಿ ಸ್ವೀಕರಿಸಿ ನೋವನ್ನು ನುಂಗಿಕೊಂಡು ಮೌನಿಗಳಾಗಿದ್ದರು.

ಕಾಂಗ್ರೆಸ್‌ನ **'Landslide victory'** (ಸ್ಪಷ್ಟ ಬಹುಮತ)ಕಾಂಗ್ರೆಸ್ಸಿಗರನ್ನು ನಿದ್ದೆಯಿಂದ ಬಡಿದೆಬ್ಬಿಸಿದಂತೆ ಮಾಡಿದೆ. ಅವರಿಗೇ ಅಚ್ಚರಿ ಮೂಡಿಸುವಂತಹ ಫಲಿತಾಂಶ ಬಂದಿದೆ.

ತ್ರಿಶಂಕು ಸ್ಥಿತಿ ಬರಬಹುದೆಂಬ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್ಸಿಗರಿಗೆ ಅಭೂತಪೂರ್ವ ಜನ ಬೆಂಬಲ ಅವರ ಆಸೆಯನ್ನು ಇಮ್ಮಡಿಗೊಳಿಸಿದೆ. ಈ ಫಲಿತಾಂಶಕ್ಕೆ ಪ್ರಮುಖ ಕಾರಣರಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಎಐಸಿಸಿ ಅಧ್ಯಕ್ಷರಾದ ಖರ್ಗೆ ಅವರನ್ನು ತುದಿಗಾಲಲ್ಲಿ ನಿಲ್ಲಿಸಿದೆ. ಅಂದರೆ ಮುಂದೇನು? ಎಂಬುದು ಪ್ರಶ್ನಾರ್ಥಕವಾಗಿದೆ.

ಇದುವರೆಗೆ 3 ಪಕ್ಷಗಳಲ್ಲಿ ಯಾವುದು ಅಧಿಕಾರ ಹಿಡಿಯಲಿದೆ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಸಿಕ್ಕಿದೆ. ಈಗ ಮುಂದಿನ ಮುಖ್ಯಮಂತ್ರಿ ಯಾರು? ಅಂದರೆ ತ್ರಿಮೂರ್ತಿಗಳಾದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಹಾಗೂ ಖರ್ಗೆ ಪ್ರಬಲ ಪೈಪೋಟಿಯಲ್ಲಿದ್ದಾರೆ. ಸಿದ್ದು ಜನ–ಮನಗಳ ಪ್ರಬಲ ನಾಯಕರಾಗಿ ಹೊರಹೊಮ್ಮಿದ್ದಾರೆ. ಡಿ.ಕೆ.ಶಿವಕುಮಾರ್ ಕನಕಪುರದ 'ಬಂಡೆ'ಯಂತೆ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸಬಲ್ಲ ಸಮರ್ಥನಾಯಕ ಎಂದು ಸಾಧಿಸಿ, ಸಾಬೀತು ಮಾಡಿದ್ದಾರೆ. ಇಂದು ವಿಧಾನಸಭಾ ಚುನಾವಣೆ ವಿಷಯದಲ್ಲಿ ಒಂದು ಲಕ್ಷಕ್ಕಿಂತ ಅಧಿಕ ಮತಗಳ ಅಂತರದಿಂದ ಗೆದ್ದಂತಹ ಏಕೈಕ ನಾಯಕ ಎಂದರೆ ಅತಿಶಯೋಕ್ತಿಯಲ್ಲ. ಅಂಥ 'ಬಂಡೆ' ಡಿ.ಕೆ.ಶಿವಕುಮಾರ್.

ಇನ್ನು ಕಾಂಗ್ರೆಸ್ ರಕ್ತವನ್ನು ಹಂಚಿಕೊಂಡಂತೆ ಪಕ್ಷವನ್ನೇ ಉಸಿರಾಗಿಸಿಕೊಂಡಿರುವ ಖರ್ಗೆ ಕೂಡ ಕಪ್ಪುಚುಕ್ಕೆ ಇಲ್ಲದ ಸಮರ್ಥ ನಾಯಕ. ಆದರೆ ಈ ತ್ರಿಮೂರ್ತಿಗಳಲ್ಲಿ ಯಾರ ಪಾಲಿಗೆ ಮುಖ್ಯಮಂತ್ರಿ ಗಾದಿ ಎಂಬುದನ್ನು ಕಾದು ನೋಡಬೇಕು. ಮುಖ್ಯಮಂತ್ರಿ ಕುರ್ಚಿ ಮೇಲೆ ಕಣ್ಣಿಟ್ಟಿರುವವರ ಸರತಿಯ ಸಾಲೇ ಇದೆ. ಮಾಜಿ ಡಿಸಿಎಂ ಡಾ. ಜಿ.ಪರಮೇಶ್ವರ್, ಎಂ.ಬಿ. ಪಾಟೀಲ್... ಹೀಗೆ ದೊಡ್ಡ ದೊಡ್ಡ 'ಕ್ಯೂ' ಇದೆ.



ಯಾರ ಕೊರಳಿಗೆ 'ಹೂಮಾಲೆ' ಎಂಬುದನ್ನು ಕಾದು ನೋಡಬೇಕು. ಇಲ್ಲವೆ ಸಿಎಂ+ ಡಿಸಿಎಂಗಳ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಮಂತ್ರಿ ಮಂಡಲ ರಚನೆ, ಜಾತಿ ವಿಶ್ವಾಸ, ಖಾತೆಗಳ ಹಂಚಿಕೆ ದೊಡ್ಡ ಸವಾಲಾಗಿದೆ.

ಇನ್ನು ಎಲ್ಲರ ನಿರೀಕ್ಷೆಗೂ ಮೀರಿ ಹೀನಾಯವಾಗಿ ಸೋತ ರಾಜ್ಯ ಬಿಜೆಪಿ ನಾಯಕರ ಮಾನ–ಮರ್ಯಾದೆ ನೀರು ಪಾಲಾಗಿದೆ. ಬ್ರಹ್ಮಾಂಡ ಭ್ರಷ್ಟಾಚಾರದ ಜತೆಗೆ 40% ಕಮಿಷನ್ ಸರ್ಕಾರ ಎಂಬ ಕೀರ್ತಿಗೆ ಅನ್ವರ್ಥವಾಗಿಯೇ ಸೋತಿದೆ.

ರಾಜ್ಯದಲ್ಲಿ ಬಿಜೆಪಿ ಸೋಲು ಈ ಪಕ್ಷದ ಹೈಕಮಾಂಡ್‌ಗೆ ಪರಮಾಶ್ಚರ್ಯ ತಂದಿದೆ. ಪಕ್ಷದ ವರ್ಚಸ್ಸು ಇಷ್ಟು ಕೆಳಮಟ್ಟಕ್ಕೆ ಕುಸಿದಿದೆ ಎಂಬ ಅಂದಾಜು ಅವರಿಗಿದ್ದಂತಿಲ್ಲ. ಗುಜರಾತ್ ಮಾದರಿಯಲ್ಲಿ ಕರ್ನಾಟಕ ಗೆಲ್ಲಬಹುದೆಂಬ ವರಿಷ್ಠರ ನಿರೀಕ್ಷೆ ಬರೀ 'ಭ್ರಮೆ' ಆಗಿದೆ.

ತಾವು ಆಡಿದ್ದೇ ಆಟ, ರಾಜ್ಯ ನಾಯಕರೆಲ್ಲಾ 'ಕೈಗೊಂಬೆಗಳು' ಎಂಬ ಬಿಜೆಪಿ ವರಿಷ್ಠರ ಅನಿಸಿಕೆ ತಪ್ಪಾಗಿದೆ. ರಾಜ್ಯದ ಫಲಿತಾಂಶ ವರಿಷ್ಠರಿಗೂ ಎಚ್ಚರಿಕೆ ಗಂಟೆಯಾಗಿದೆ. ಅಲ್ಲದೆ ಅವರ ಆಸೆಯೂ ಭಗ್ನವಾಗಿದೆ. ಇತ್ತ ಯಾರೇ ಕೂಗಾಡಲಿ, ತಾವೇ ಮುಂದಿನ ಮುಖ್ಯಮಂತ್ರಿ ಎಂದು ಬೀಗುತ್ತಿದ್ದ ಕುಮಾರಸ್ವಾಮಿ ಆಸೆಯೂ ನುಚ್ಚು ನೂರಾಗಿದೆ. ತಂದೆ ಹೆಚ್.ಡಿ. ದೇವೇಗೌಡರು ಮಾಡಿದ ಪೂಜೆ–ಪುನಸ್ಕಾರಗಳಿಗೆ ದೇವರು ಒಲಿದಿಲ್ಲ.

ಈ ಸಾರಿಯ ಚುನಾವಣೆ ಹಲವು ಘಟಾನುಘಟಿಗಳಿಗೆ 'ತಕ್ಕ ಪಾಠ' ಕಲಿಸಿದೆ. ಇವರು ಇನ್ನು ಕೆಲವು ಕಾಲ ಬೀದಿಯಲ್ಲಿ ತಲೆ ಎತ್ತಿ ತಿರುಗುವಂತಿಲ್ಲ. ಆದರೂ ರಾಜಕಾರಣಿಗಳು ಮೂರನ್ನೂ ಬಿಟ್ಟವರು ಎಂಬ ಮಾತಿದೆ. ಅದರಂತೆ ಕೆಲ ಕಾಲ ಮೌನವಾಗಿದ್ದು, ಮತ್ತೆ ಸಕ್ರಿಯ ರಾಜಕಾರಣಕ್ಕೆ ಬಂದರೂ ಬರಬಹುದು.

ರಾಜ್ಯದ ಜನತೆಯ ತೀರ್ಮಾನ ಕಾಂಗ್ರೆಸ್ 135, ಬಿಜೆಪಿ ಅದರ ಅರ್ಧ ಅಂದರೆ 66, ಜೆಡಿಎಸ್ ಕನಸಿನ 123 ಹೋಗಿ 19ಕ್ಕೆ ಕುಸಿದಿದೆ. ಅಲ್ಲಿ–ಇಲ್ಲಿ ಪಕ್ಷದಿಂದ ಪಕ್ಷಕ್ಕೆ ಹಾರಿದ ಪಕ್ಷೇತರರು–ನಾಲ್ಕು ಮಂದಿ. ಇದು ಈ ಚುನಾವಣಾ 'ಭವಿಷ್ಯ'.

ಕಾಂಗ್ರೆಸ್‌ಗೆ ಸಿಎಂ ಸವಾಲು, ಬಿಜೆಪಿಗೆ ಮುಖಭಂಗ, ಜೆಡಿಎಸ್‌ಗೆ ಆಸೆ ಭಗ್ನ.

ಮೈಸೂರು ಜಿಲ್ಲೆಯಿಂದ ಹೊಸದಾಗಿ ಆಯ್ಕೆಯಾಗಿರುವ ಐವರು ಪದವೀಧರರು


ಜಿ.ಡಿ.ಹರೀಶ್‌ಗೌಡ


ಶ್ರೀವತ್ಸ


ಕೆ.ಹರೀಶ್‌ಗೌಡ


ರವಿಶಂಕರ್


ದರ್ಶನ್

ಮೈಸೂರು, ಮೇ 13(ಎಸ್‌ಬಿಡಿ)– ಮೈಸೂರು ಜಿಲ್ಲೆಯ ಒಟ್ಟು 11 ಕ್ಷೇತ್ರದ ಪೈಕಿ ಐದು ಕ್ಷೇತ್ರಗಳಲ್ಲಿ ಹೊಸಬರು ಶಾಸಕರಾಗಿ ಆಯ್ಕೆಯಾಗಿದ್ದು, ಇವರಲ್ಲಿ ಬಹುತೇಕರು ಪದವೀಧರರಾಗಿರುವುದು ವಿಶೇಷ.

ನಂಜನಗೂಡಲ್ಲಿ ದರ್ಶನ್ ಧ್ರುವನಾರಾಯಣ್, ಹುಣಸೂರಲ್ಲಿ ಜಿ.ಡಿ.ಹರೀಶ್‌ಗೌಡ, ಕೃಷ್ಣರಾಜದಲ್ಲಿ ಟಿ.ಎಸ್.ಶ್ರೀವತ್ಸ, ಚಾಮರಾಜದಲ್ಲಿ ಕೆ.ಹರೀಶ್‌ಗೌಡ ಹಾಗೂ ಕೆ.ಆರ್.ನಗರದಲ್ಲಿ ಡಿ.ರವಿಶಂಕರ್ ಕ್ಷೇತ್ರಗಳಲ್ಲಿ ಹೊಸಬರು ಜಯಭೇರಿ ಭಾರಿಸಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಜಿ.ಟಿ.ದೇವೇಗೌಡರು, ನರಸಿಂಹರಾಜ ಕ್ಷೇತ್ರದ ತನ್ವೀರ್ ಸೇಠ್, ಹೆಚ್.ಡಿ.ಕೋಟೆ ಅನಿಲ್ ಚಿಕ್ಕಮಾದು ಪುನರಾಯ್ಕೆಯಾಗಿದ್ದಾರೆ. ಕಳೆದ ಬಾರಿ ತಮ್ಮ ಪುತ್ರ ಡಾ.ಯತೀಂದ್ರ ಅವರಿಗೆ ಬಿಟ್ಟುಕೊಟ್ಟಿದ್ದ ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಗೆದ್ದಿದ್ದಾರೆ. ಕಳೆದ ಬಾರಿ ತಿ.ನರಸೀಪುರದಲ್ಲಿ ಸೋತಿದ್ದ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಪಿರಿಯಾಪಟ್ಟಣದಲ್ಲಿ ಸೋತಿದ್ದ ಕೆ.ವೆಂಕಟೇಶ್ ಈ ಬಾರಿ ಗೆದ್ದು ಬೀಗಿದ್ದಾರೆ.

ದರ್ಶನ್ ಕೈಬಿಡದ ಜನ: ದಿವಂಗತ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಧ್ರುವನಾರಾಯಣ್(28 ವರ್ಷ) ನಂಜನಗೂಡಿನಲ್ಲಿ 1,09,125(ಶೇ.62.05) ಮತ ಗಳಿಸಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಹಾಲಿ ಶಾಸಕರಾಗಿದ್ದ ಬಿಜೆಪಿಯ ಬಿ.ಹರ್ಷವರ್ಧನ್(61518–ಶೇ.34.98) ವಿರುದ್ಧ 47,607 ಮತಗಳ ಅಂತರದಲ್ಲಿ ಗೆದ್ದು, ಅತ್ಯಂತ ಕಿರಿಯ ಶಾಸಕರೆನಿಸಿದ್ದಾರೆ. ತಂದೆಯ ಅಕಾಲಿಕ ನಿಧನದ ಬೆನ್ನಲ್ಲೇ ತಾಯಿಯನ್ನೂ ಕಳೆದುಕೊಂಡ ದರ್ಶನ್ ಅವರಿಗೆ ಕ್ಷೇತ್ರದ ಜನ ಆಶೀರ್ವದಿಸಿದ್ದಾರೆ. ದರ್ಶನ್, ಸಾರ್ವಜನಿಕ ನೀತಿ ವಿಷಯದಲ್ಲಿ ಎಂ.ಎಸ್ಸಿ, ಬಿ.ಎ, ಎಲ್‌ಎಲ್‌ಬಿ ಪದವಿ ಪಡೆದಿದ್ದಾರೆ.

ಹ್ಯಾಟ್ರಿಕ್ ಶಾಸಕರ ಮಣಿಸಿದ ಯುವಕ: ಹುಣಸೂರು ಕ್ಷೇತ್ರದಲ್ಲಿ ಹ್ಯಾಟ್ರಿಕ್ ಶಾಸಕ ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್ ಅವರನ್ನು ಜೆಡಿಎಸ್‌ನ ಯುವ ಮುಖಂಡ ಜಿ.ಡಿ. ಹರೀಶ್ ಗೌಡ(36) ಮಣಿಸಿದ್ದಾರೆ. ಮೊದಲ ಸ್ಪರ್ಧೆಯಲ್ಲೇ 94,666 (ಶೇ.47.11) ಮತ ಪಡೆದ ಜಿ.ಡಿ.ಹರೀಶ್‌ಗೌಡ, ಪ್ರತಿಸ್ಪರ್ಧಿ ಹೆಚ್.ಪಿ.ಮಂಜುನಾಥ್(92,254–ಶೇ.45.91) ವಿರುದ್ಧ 2412 ಮತಗಳ ಅಂತರದ ಗೆಲುವು ಸಾಧಿಸಿದ್ದಾರೆ. ಇವರು ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ (ಎನ್‌ಐಇ) ಕಾಲೇಜಿನಲ್ಲಿ ಬಿ.ಇ ಪದವಿ ಪಡೆದಿದ್ದಾರೆ.

3ನೇ ಪ್ರಯತ್ನದಲ್ಲಿ ಗೆಲುವು: ಕೆ.ಆರ್.ನಗರದಲ್ಲಿ ಸತತ 2 ಬಾರಿ ಜೆಡಿಎಸ್‌ನ ಸಾ.ರಾ.ಮಹೇಶ್ ವಿರುದ್ಧ ಸೋತಿದ್ದ ಕಾಂಗ್ರೆಸ್ ಡಿ.ರವಿಶಂಕರ್ (47) ಮೂರನೇ ಪ್ರಯತ್ನದಲ್ಲಿ ಗೆಲುವಿನ ಸಿಹಿ ಸವಿದಿದ್ದಾರೆ. ಕಳೆದ ಬಾರಿ 1779 ಮತಗಳಿಂದ ಸೋತಿದ್ದ ಇವರು, ಈ ಬಾರಿ 25 ಸಾವಿರಕ್ಕೂ ಅಧಿಕ ಮತಗಳ ಅಂತರದ ಗೆಲುವು ದಾಖಲಿಸಿದ್ದಾರೆ. ಡಿ.ರವಿಶಂಕರ್ 1,04,502 (ಶೇ.55.34) ಹಾಗೂ ಪ್ರತಿಸ್ಪರ್ಧಿ ಸಾ.ರಾ. ಮಹೇಶ್ 78,863 (ಶೇ.41.76) ಮತ ಪಡೆದಿದ್ದಾರೆ. ಡಿ.ರವಿಶಂಕರ್ ಬೆಂಗಳೂರಿನ ಕೆಎಲ್‌ಇ ಕಾಲೇಜಿನಲ್ಲಿ ಬಿ.ಎ, ಎಲ್‌ಎಲ್‌ಬಿ ಪದವಿ ಪಡೆದಿದ್ದಾರೆ.

ಚುನಾವಣೆ ಗೆದ್ದ ಪೈಲ್ವಾನ್: ಚಾಮರಾಜ ಕ್ಷೇತ್ರದಲ್ಲಿ ಕಳೆದ ಬಾರಿ ಪಕ್ಷೇತರರಾಗಿ ನಿಂತು, ಸೋತಿದ್ದ ಕೆ.ಹರೀಶ್‌ಗೌಡ(50 ವರ್ಷ) ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದಿದ್ದಾರೆ. ಇವರು 72,931(ಶೇ.48.42) ಮತಗಳೊಂದಿಗೆ ಹಾಲಿ ಶಾಸಕರಾಗಿದ್ದ ಎಲ್.ನಾಗೇಂದ್ರ (68,837–ಶೇ.45.7) ಅವರನ್ನು 4,094 ಮತಗಳಿಂದ ಮಣಿಸಿದ್ದಾರೆ. ಕೆ.ಹರೀಶ್‌ಗೌಡ ಮಹಾರಾಜ ಕಾಲೇಜಿನಲ್ಲಿ ಬಿ.ಎ ವ್ಯಾಸಂಗ ಮಾಡಿದ್ದಾರೆ.

ಕ್ಷೇತ್ರ ಉಳಿಸಿದ ಕಾರ್ಯಕರ್ತ: ಕೃಷ್ಣರಾಜ ಕ್ಷೇತ್ರವನ್ನು ಮಾತ್ರ ಬಿಜೆಪಿ ಉಳಿಸಿಕೊಂಡಿದೆ. ಸಾಮಾನ್ಯ ಕಾರ್ಯಕರ್ತರಾಗಿ ಕೆಲಸ ಮಾಡಿದ ಟಿ.ಎಸ್.ಶ್ರೀವತ್ಸ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಮೊದಲ ಸ್ಪರ್ಧೆಯಲ್ಲೇ 73,670(ಶೇ.49.01) ಮತ ಪಡೆದು ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಎಂ.ಕೆ.ಸೋಮಶೇಖರ್ (66,457–ಶೇ.44.21) 7213 ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಇವರು ಬಿ.ಕಾಂ ಪದವಿ ಪಡೆದಿದ್ದಾರೆ.

ರೈತ ಮುಖಂಡನೀಗ ಶಾಸಕ: ನೆರೆ ಜಿಲ್ಲೆ ಮಂಡ್ಯದ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ರೈತ ನಾಯಕ ದಿವಂಗತ ಕೆ.ಎಸ್.ಪುಟ್ಟಣ್ಣಯ್ಯ ಅವರ ಪುತ್ರ ದರ್ಶನ್ ಪುಟ್ಟಣ್ಣಯ್ಯ(46 ವರ್ಷ) ಗೆಲುವು ಸಾಧಿಸಿದ್ದಾರೆ. ಸರ್ವೋದಯ ಕರ್ನಾಟಕ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಇವರಿಗೆ ಕಾಂಗ್ರೆಸ್, ರೈತಸಂಘ, ಇನ್ನಿತರ ಸಂಘಟನೆಗಳು ಬೆಂಬಲ ನೀಡಿದ್ದವು. ಇವರು 91151(ಶೇ.49.57) ಮತಗಳನ್ನು ಪಡೆದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು(80289–ಶೇ. 43.66) ಅವರನ್ನು 10,862 ಮತಗಳ ಅಂತರದಲ್ಲಿ ಮಣಿಸಿದ್ದಾರೆ. ಇವರು ಮೈಸೂರಿನ ಜೆಸಿಇ ಕಾಲೇಜಿನಲ್ಲಿ ಬಿಇ ಪದವಿ ಪಡೆದಿದ್ದು, ತಂದೆಯ ಅಗಲಿಕೆ ಬಳಿಕ ರೈತ ಹೋರಾಟದಲ್ಲಿ ಸಕ್ರಿಯರಾಗಿದ್ದಾರೆ.

> ಪ್ರತಿಷ್ಠಿತ ಕಣವಾಗಿದ್ದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸೆಣಸಾಡಿದ ವಿ.ಕವೀಶ್ ಗೌಡ(40 ವರ್ಷ), 51,318(ಶೇ.20.77) ಮತಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ. ಚಾಮರಾಜ ಕ್ಷೇತ್ರದ ಮಾಜಿ ಶಾಸಕ ವಾಸು ಅವರ ಪುತ್ರ ಕವೀಶ್ ಗೌಡ ಅವರಿಗೆ ಟಿಕೆಟ್ ಘೋಷಣೆಯಾಗುತ್ತಿದ್ದಂತೆ ಕ್ಷೇತ್ರದೆಲ್ಲೆಡೆ ಪ್ರವಾಸ ಮಾಡಿ, ಸಂಘಟಿಸಿದ್ದರ ಫಲವಾಗಿ ಅಧಿಕ ಮತಗಳನ್ನು ಗಳಿಸಿದ್ದಾರೆ. ಇವರು ವಿಶ್ವೇಶ್ವರಯ್ಯ ತಾಂತ್ರಿಕ ವಿವಿ(ವಿಟಿಯು)ಯಲ್ಲಿ ಬಿಇ, ಕರ್ನಾಟಕ ರಾಜ್ಯ ಕಾನೂನು ವಿವಿಯಲ್ಲಿ ಎಲ್‌ಎಲ್‌ಬಿ, ಯುಕೆಯ ಕಾರ್ಡಿಫ್ ಯೂನಿವರ್ಸಿಟಿಯಲ್ಲಿ ಮಾಸ್ಟರ್ ಆಫ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಪದವಿ ಪಡೆದಿದ್ದಾರೆ.

ಒಗ್ಗಟ್ಟಿನ ಪರಿಶ್ರಮದ ಫಲವೇ ಈ ಗೆಲುವು



ಬೆಂಗಳೂರು, ಮೇ 13(ಕೆಎಂಶಿ)– ಪಕ್ಷದ ಕಾರ್ಯಕರ್ತರು, ನಾಯಕರ ಒಗ್ಗಟ್ಟಿನ ಪರಿಶ್ರಮದಿಂದ ಈ ಗೆಲುವು ಸಾಧ್ಯವಾಗಿದೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಪಕ್ಷ ಸ್ವಂತ ಬಲದ ಮೇಲೆ ಅಧಿಕಾರ ಹಿಡಿಯುವ ಮ್ಯಾಜಿಕ್ ಸಂಖ್ಯೆ ದಾಟಿ ಬಹುಮತ ಗಳಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಪಕ್ಷದ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ಮೊದಲ ದಿನವೇ ಹೇಳಿದ್ದೆ, ಜತೆಗೂಡುವುದು ಆರಂಭ, ಜತೆಗೂಡಿ ಯೋಚಿಸುವುದು ಪ್ರಗತಿ, ಜತೆಗೂಡಿ ಕೆಲಸ ಮಾಡುವುದು ಯಶಸ್ಸು ಎಂದು. ಅದೇ ರೀತಿ ನಮ್ಮ ನಾಯಕರು ಹಾಗೂ ಕಾರ್ಯಕರ್ತರ ಒಗ್ಗಟ್ಟಿನ ಪರಿಶ್ರಮದಿಂದ ಪಕ್ಷಕ್ಕೆ ಈ ಯಶಸ್ಸು ಸಿಕ್ಕಿದೆ.

ಸೋನಿಯಾ, ರಾಹುಲ್, ಪ್ರಿಯಾಂಕಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕೊಟ್ಟ ಮಾತಿನಂತೆ ನಾನು ಪಕ್ಷವನ್ನು ಗೆಲುವಿನ ದಡ ಸೇರಿಸಿದ್ದೇನೆ. ನನ್ನ ಮೇಲೆ ಬಿಜೆಪಿ ಷಡ್ಯಂತ್ರ ರೂಪಿಸಿ ಬಿಜೆಪಿ ಸೇರಬೇಕು ಅಥವಾ ಜೈಲಿಗೆ ಹೋಗಬೇಕು ಎಂಬ ಆಯ್ಕೆ ಇಟ್ಟಾಗ ನಾನು ಜೈಲಿಗೆ ಹೋಗುವುದನ್ನು ಆರಿಸಿಕೊಂಡೆ. ಆಗ ಸೋನಿಯಾ ಗಾಂಧಿ ಅವರು ತಿಹಾರ್ ಜೈಲಿಗೆ ಬಂದು ನನ್ನನ್ನು ಭೇಟಿ ಮಾಡಿದ್ದರು. ಅವರು ನನ್ನ ಮೇಲೆ ಅಷ್ಟು ನಂಬಿಕೆ ಇಟ್ಟಿದ್ದರು.

ಇದು ಒಬ್ಬನಿಂದ ಬಂದಿರುವ ಯಶಸ್ಸಲ್ಲ. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಸೇರಿದಂತೆ ಕಾಂಗ್ರೆಸ್ ಶಾಸಕರುಗಳು, ಎಐಸಿಸಿ ಪದಾಧಿಕಾರಿಗಳು, ಉಸ್ತುವಾರಿಗಳು, ರಾಜ್ಯದ ನಾಯಕರುಗಳು, ಪಕ್ಷದ ಪದಾಧಿಕಾರಿಗಳು, ಬೂತ್ ಮಟ್ಟದಲ್ಲಿ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಿರುವ ಎಲ್ಲಾ ಕಾರ್ಯಕರ್ತರಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಈಗ ಹೆಚ್ಚಾಗಿ ಏನೂ ಮಾತನಾಡುವುದಿಲ್ಲ ಕಾರ್ಯಕರ್ತರು ಉತ್ಸಾಹದಿಂದ ಗಲಾಟೆ ಮಾಡುತ್ತಿದ್ದಾರೆ ಎಂದು ನನ್ನ ಚುನಾವಣಾ ಪ್ರಮಾಣಪತ್ರ ಪಡೆಯಲು ನಾನೇ ಹೋಗಬೇಕು ಎಂದು ರಾಮನಗರ ಜಿಲ್ಲಾಧಿಕಾರಿಗಳು ಹೇಳುತ್ತಿದ್ದಾರೆ. ಹೀಗಾಗಿ ನಾನು ಅಲ್ಲಿಗೆ ಹೋಗುತ್ತಿದ್ದು, ಅಲ್ಲಿಂದ ಬಂದ ನಂತರ ನನ್ನ ದೇವಾಲಯ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಮಾತನಾಡುತ್ತೇನೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಸಕ್ಕರೆ ನಾಡಲ್ಲಿ ಕಮಾಲ್ ಮಾಡಿದ ಕಾಂಗ್ರೆಸ್

● ಕಾಂಗ್ರೆಸ್– 5, ಜೆಡಿಎಸ್– 1, ಎಸ್‌ಕೆಪಿ– 1 ● ಮೇಲುಕೋಟೆಯಲ್ಲಿ ಕೈ ಹಿಡಿಯದ ಅಭಿವೃದ್ಧಿ

ಮಂಡ್ಯ, ಮೇ 13– ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯ ಏಳು ಕ್ಷೇತ್ರಗಳ ಪೈಕಿ ಐದರಲ್ಲಿ ಕಾಂಗ್ರೆಸ್, ಒಂದರಲ್ಲಿ ಜೆಡಿಎಸ್, ಮತ್ತೊಂದು ಕ್ಷೇತ್ರದಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ.

2018ರ ಚುನಾವಣೆಯಲ್ಲಿ ಏಳಕ್ಕೆ ಏಳು ಕ್ಷೇತ್ರವನ್ನು ಗೆಲ್ಲುವ ಮೂಲಕ ಮಂಡ್ಯ ಜಿಲ್ಲೆಯಲ್ಲಿ ಇತಿಹಾಸ ಸೃಷ್ಟಿಸಿದ್ದ ಜೆಡಿಎಸ್, ಈ ಬಾರಿ ಏಳರ ಪೈಕಿ ಆರು ಕ್ಷೇತ್ರಗಳಲ್ಲಿ ಸೋಲನ್ನಪ್ಪಿದ್ದು, ಕೆ.ಆರ್.ಪೇಟೆಯಲ್ಲಿ ಮಾತ್ರ ಗೆದ್ದಿದೆ.

ಮೇಲುಕೋಟೆಯಲ್ಲಿ ಅಭಿವೃದ್ಧಿಗೆ ಮನ್ನಣೆ ನೀಡದ ಮತದಾರ: ಜಿಲ್ಲೆಯ ಹೈವೋಲ್ಟೇಜ್ ಕ್ಷೇತ್ರ ಮೇಲುಕೋಟೆಯಲ್ಲಿ ಹಾಲಿ ಜೆಡಿಎಸ್ ಶಾಸಕ ಸಿ.ಎಸ್.ಪುಟ್ಟರಾಜು ಅವರಿಗೆ ಅನಿರೀಕ್ಷಿತ ಸೋಲುಂಟಾಗಿದೆ. ಶಾಸಕರಾಗಿ, ಸಚಿವರಾಗಿ ಕ್ಷೇತ್ರಕ್ಕೆ ಬಹಳಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದ ಅವರು, ಕಾಂಗ್ರೆಸ್ ಬೆಂಬಲಿತ ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ವಿರುದ್ಧ ಆಘಾತಕಾರಿ ಸೋಲು ಕಂಡಿದ್ದಾರೆ.

ದರ್ಶನ್ 91,151 ಮತ ಪಡೆದರೆ, ಪುಟ್ಟರಾಜು 80,289 ಮತ ಪಡೆದರು. ಈ ಮೂಲಕ ದರ್ಶನ್ 10,862 ಮತಗಳ ಅಂತರದಿಂದ ಜಯಭೇರಿ ಭಾರಿಸಿದರು.

ಹಾವು ಏಣಿ ಆಟದಲ್ಲಿ ಗಣಿಗಗೆ ಒಲಿದ ಗೆಲುವು: ಮೇಲುಕೋಟೆ ಬಿಟ್ಟರೆ ತೀವ್ರ ಕುತೂಹಲ ಕೆರಳಿಸಿದ್ದ ಮಂಡ್ಯ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶ ಮಧ್ಯಾಹ್ನ 2ರವರೆಗೂ ಕಾದು ಕುಳಿತುಕೊಳ್ಳುವಂತೆ ಮಾಡಿತ್ತು. ಜೆಡಿಎಸ್‌ನ ರಾಮಚಂದ್ರ, ಕಾಂಗ್ರೆಸ್‌ನ ಗಣಿಗ ರವಿಕುಮಾರ್, ಬಿಜೆಪಿ ಅಶೋಕ್ ಜಯರಾಂ ಹಾಗೂ ಪಕ್ಷೇತರ ಅಭ್ಯರ್ಥಿ ವಿಜಯಾನಂದ ನಡುವಿನ ಕಾದಾಟದಲ್ಲಿ ರಾಮಚಂದ್ರ ಹಾಗೂ ರವಿಕುಮಾರ್ ನಡುವೆ ತೀವ್ರ ಸೆಣಸಾಟ ನಡೆಯಿತು. ಅಂತಿಮವಾಗಿ ಗಣಿಗ ರವಿಕುಮಾರ್ ಗೆಲುವಿನ ನಗೆ ಬೀರಿದರು.

ರವಿಕುಮಾರ್ 61,411 ಮತ ಪಡೆದರೆ, ಸಮೀಪದ ಪ್ರತಿಸ್ಪರ್ಧಿ ಜೆಡಿಎಸ್‌ನ ರಾಮಚಂದ್ರ 59,392 ಮತ ಪಡೆದರು. ಈ ಮೂಲಕ ರವಿಕುಮಾರ್ 2019 ಮತಗಳಿಂದ ಪ್ರಯಾಸದ ಗೆಲುವು ಸಾಧಿಸಿದರು.

ದೇವೇಗೌಡರು ಬಂದರೂ ನಾಗಮಂಗಲ ಗೆಲ್ಲಲಾಗಲಿಲ್ಲ ಜೆಡಿಎಸ್: ಇಡೀ ಮಂಡ್ಯ ಜಿಲ್ಲೆಯಲ್ಲೇ ಅತಿ ಹೆಚ್ಚು ಒಕ್ಕಲಿಗರನ್ನು ಹೊಂದಿರುವ ತಾಲೂಕು ನಾಗಮಂಗಲ. ಅದರಲ್ಲೂ ವಿಶೇಷವಾಗಿ ಮಾಜಿ ಪ್ರಧಾನಿ ದೇವೇಗೌಡರ ಬಿಗಿ ಹಿಡಿತ ಇರುವ ಕ್ಷೇತ್ರದಲ್ಲಿ ಈ ಬಾರಿ ಜೆಡಿಎಸ್‌ನ ಹಾಲಿ ಶಾಸಕ ಕೆ.ಸುರೇಶ್‌ಗೌಡಗೆ ಸೋಲಾಗಿದ್ದು, ಕಾಂಗ್ರೆಸ್‌ನ ಎನ್.ಚಲುವರಾಯಸ್ವಾಮಿ ಗೆದ್ದು ಬೀಗಿದ್ದಾರೆ. ಜೆಡಿಎಸ್‌ನಲ್ಲಿದ್ದ ಎಲ್.ಆರ್.ಶಿವರಾಮೇಗೌಡ ಬಿಜೆಪಿಯಿಂದ ತನ್ನ ಪತ್ನಿಯನ್ನು ಕಣಕ್ಕಿಳಿಸಿದ್ದು ಹಾಗೂ ಸುರೇಶ್‌ಗೌಡರ ಒಂದು ಕಾಲದ ಆಪ್ತ ಫೈಟರ್ ರವಿ ಪಕ್ಷೇತರರಾಗಿ ಸ್ಪರ್ಧಿಸಿದ್ದು, ಜೆಡಿಎಸ್ ಗೆಲುವಿಗೆ ತೊಡಕಾಯಿತು.

ಎನ್.ಚಲುವರಾಯಸ್ವಾಮಿ 90,634 ಮತ ಪಡೆದರೆ, ಜೆಡಿಎಸ್‌ನ ಕೆ.ಸುರೇಶ್‌ಗೌಡ 86,220 ಮತ ಪಡೆದರು. ಸುರೇಶ್‌ಗೌಡ ವಿರುದ್ಧ ಚಲುವರಾಯಸ್ವಾಮಿ 4414 ಮತಗಳ ಅಂತರದಿಂದ ಗೆದ್ದಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ಆಡಳಿತ ವಿರೋಧಿ ಅಲೆಗೆ ಬೆಲೆ ತೆತ್ತ ಜೆಡಿಎಸ್: ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಹಾಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ವಿರುದ್ಧದ ಆಡಳಿತ ವಿರೋಧಿ ಅಲೆ, ಶಾಸಕರು ಜನರ ಕೈಗೆ ಸಿಗುವುದಿಲ್ಲ ಎಂಬ ಆರೋಪ ಈ ಎಲ್ಲಾ ಕಾರಣಗಳು ಜೆಡಿಎಸ್ ಅಭ್ಯರ್ಥಿ ಸೋಲಿಗೆ ಕಾರಣವಾಗಿದ್ದು, ಕಾಂಗ್ರೆಸ್‌ನ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಗೆಲುವಿನ ನಗೆ ಬೀರಿದ್ದಾರೆ.

ರಮೇಶ್ 72,817 ಮತ ಪಡೆದರೆ, ಜೆಡಿಎಸ್‌ನ ರವೀಂದ್ರ 61,680 ಮತ ಪಡೆದರು. ಇನ್ನು ಅಚ್ಚರಿ ಎಂಬಂತೆ ಬಿಜೆಪಿಯ ಸಚ್ಚಿದಾನಂದ 42,306 ಮತ ಪಡೆದಿದ್ದು, ರವೀಂದ್ರ ವಿರುದ್ಧ ರಮೇಶ್ ಬಂಡಿಸಿದ್ದೇಗೌಡ 11,137 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಸಚಿವ ನಾರಾಯಣಗೌಡಗೆ ಹೀನಾಯ ಸೋಲು: ಜೆಡಿಎಸ್ ತೊರೆದು ಬಿಜೆಪಿ ಸೇರಿ ಮಂತ್ರಿಯಾದ ನಾರಾಯಣಗೌಡ ಕ್ಷೇತ್ರಕ್ಕೆ ಅಭಿವೃದ್ಧಿಯ ಪರ್ವವನ್ನೇ ಹರಿಸಿದ್ದೇನೆ ಎಂದು ಮತದಾರರ ಮುಂದೆ ಹೋಗಿದ್ದರು. ಆದರೆ ಕೆ.ಆರ್.ಪೇಟೆ ಮತದಾರ ನಾರಾಯಣಗೌಡರನ್ನು ಸಾರಾಸಗಟಾಗಿ ತಿರಸ್ಕರಿಸಿದ್ದು, ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ.

ಹೆಚ್.ಟಿ.ಮಂಜು 80,646 ಮತ ಪಡೆದರೆ, ಕಾಂಗ್ರೆಸ್‌ನ ಬಿ.ಎಲ್.ದೇವರಾಜು 58302 ಹಾಗೂ ಬಿಜೆಪಿಯ ಕೆ.ಸಿ.ನಾರಾಯಣಗೌಡ 38151 ಮತ ಪಡೆದಿದ್ದು, ದೇವರಾಜು ವಿರುದ್ಧ ಮಂಜು 22,344 ಮತಗಳ ಅಂತರದಿಂದ ಜಯ ಸಾಧಿಸಿದ್ದಾರೆ.

ಮದ್ದೂರಿನಲ್ಲಿ ಹೊಸ ಮುಖ ಉದಯ್‌ಗೆ ಲಾಟರಿ: ಮದ್ದೂರು ವಿಧಾನಸಭಾ ಕ್ಷೇತ್ರದಲ್ಲೂ ಈ ಬಾರಿ ಅಚ್ಚರಿಯ ಫಲಿತಾಂಶ ಹೊರಬಿದ್ದಿದ್ದು, ಕಳೆದ ಎರಡು ವರ್ಷಗಳಿಂದ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದ ಹೊಸ ಮುಖ ಕದಲೂರು ಉದಯ್‌ಗೌಡ ಪ್ರಚಂಡ ಜಯಭೇರಿ ಭಾರಿಸಿದ್ದು, ಸತತ ಎರಡು ಬಾರಿ ಮದ್ದೂರಿನಿಂದ ಜೆಡಿಎಸ್ ಅಭ್ಯರ್ಥಿಯಾಗಿ ಗೆದ್ದು ಹ್ಯಾಟ್ರಿಕ್ ಗೆಲುವಿನ ಕನಸು ಕಾಣುತ್ತಿದ್ದ ಡಿ.ಸಿ.ತಮ್ಮಣ್ಣ ಹೀನಾಯವಾಗಿ ಸೋಲನ್ನಪ್ಪಿದ್ದಾರೆ.

ಕೆ.ಎಂ.ಉದಯ್‌ಗೌಡ 87,019 ಮತ ಪಡೆದರೆ, ಜೆಡಿಎಸ್‌ನ ತಮ್ಮಣ್ಣ 62,906 ಮತ ಪಡೆದರು. ಬಿಜೆಪಿಯ ಎಸ್.ಪಿ.ಸ್ವಾಮಿ 28,996 ಮತ ಪಡೆಯುವ ಮೂಲಕ ಸೋಲನ್ನಪ್ಪಿದರು. ಉದಯ್ ತಮ್ಮಣ್ಣ ವಿರುದ್ಧ 24,113 ಮತಗಳ ಅಂತರದಿಂದ ಗೆಲುವು ಸಾಧಿಸಿದರು.

ಮಳವಳ್ಳಿಯಲ್ಲಿ ಹಾಲಿ ಶಾಸಕರಿಗೆ ಹೀನಾಯ ಸೋಲು: ಜಿಲ್ಲೆಯ ಏಕೈಕ ಮೀಸಲು ವಿಧಾನಸಭಾ ಕ್ಷೇತ್ರ ಮಳವಳ್ಳಿಯಲ್ಲಿ ಹಾಲಿ ಜೆಡಿಎಸ್ ಶಾಸಕ ಡಾ.ಕೆ.ಅನ್ನದಾನಿ ವಿರುದ್ಧ ಕಾಂಗ್ರೆಸ್‌ನ ಪಿ.ಎಂ. ನರೇಂದ್ರಸ್ವಾಮಿ ಬರೋಬ್ಬರಿ 49,154 ಮತಗಳ ಅಂತರದಿಂದ ಭಾರೀ ಗೆಲುವು ದಾಖಲಿಸಿದ್ದು, ಇದು ಮಂಡ್ಯ ಜಿಲ್ಲೆಯ ಏಳು ಕ್ಷೇತ್ರ ಗಳಲ್ಲೇ ಭಾರೀ ಅಂತರದ ಗೆಲುವಾಗಿದೆ.

ನರೇಂದ್ರಸ್ವಾಮಿ ಅಂತಿಮವಾಗಿ 1,06,498 ಮತ ಪಡೆದರೆ, ಜೆಡಿಎಸ್‌ನ ಅನ್ನದಾನಿ 59,652 ಮತ ಪಡೆದರು. ಇನ್ನು ಬಿಜೆಪಿಯ ಮುನಿರಾಜು 25,116 ಮತ ಪಡೆದರೆ, ಅನ್ನದಾನಿ ವಿರುದ್ಧ ನರೇಂದ್ರಸ್ವಾಮಿ 49,154 ಮತಗಳ ಪ್ರಚಂಡ ಜಯಭೇರಿ ಭಾರಿಸಿದರು.

ಬಾಯ್ಸ್ ಕಾಲೇಜಿನಲ್ಲಿ ನಡೆದ ಮತ ಎಣಿಕೆ: ಮೇ 10ರಂದು ಮತದಾನ ಮುಗಿದ ಬಳಿಕ ಏಳು ಕ್ಷೇತ್ರಗಳ ಇವಿಎಂಗಳನ್ನು ಮಂಡ್ಯ ನಗರದ ಬಾಯ್ಸ್ ಕಾಲೇಜು (ಮಂಡ್ಯ ವಿಶ್ವವಿದ್ಯಾನಿಲಯ)ನಲ್ಲಿ ಬಿಗಿ ಭದ್ರತೆಯಲ್ಲಿ ಇಡಲಾಗಿತ್ತು. ಇಂದು ಬೆಳಿಗ್ಗೆ 8 ಗಂಟೆಯಿಂದ ಮತ ಎಣಿಕಾ ಪ್ರಕ್ರಿಯೆ ಆರಂಭವಾಯಿತು. ಕಟ್ಟು ನಿಟ್ಟಿನಿಂದ ಮತದಾನ ಪ್ರಕ್ರಿಯೆ ನಡೆಯಿತು. ರಾಜಕೀಯ ಪಕ್ಷಗಳ ಬೆಂಬಲಿಗರಿಗೆ ಬ್ಯಾರಿಕೇಡ್ ಹಾಕಿ, ಫಲಿತಾಂಶವನ್ನು ಹೊರಗಿನಿಂದಲೇ ಪಡೆಯಲು ಅವಕಾಶ ಮಾಡಿಕೊಡಲಾಗಿತ್ತು.

ಜಿಲ್ಲೆಯಲ್ಲಿ ಅತೀ ಹೆಚ್ಚು ಕಾಂಗ್ರೆಸ್ ಪಕ್ಷ ಗೆದ್ದಿದ್ದರಿಂದ ಕಾಂಗ್ರೆಸ್ಸಿಗರ ಸಂಭ್ರಮಾ ಚರಣೆ ಜೋರಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಕಟ್ಟೆಚ್ಚರ ವಹಿಸಿದ್ದರು.




ಕೆ.ಆರ್.ಪೇಟೆಯಲ್ಲಿ ಗೆಲುವು ಸಾಧಿಸಿದ ಜೆಡಿಎಸ್‌ನ ಹೆಚ್.ಟಿ. ಮಂಜು ಬೆಂಬಲಿಗರೊಂದಿಗೆ ವಿಜಯೋತ್ಸವ ಆಚರಿಸುತ್ತಿರುವುದು.

“ತಾಲೂಕಿನ ಪ್ರಬುದ್ಧ ಮತದಾರರು ನೀಡಿರುವ ತೀರ್ಪನ್ನು ಒಪ್ಪಿಕೊಂಡಿದ್ದೇನೆ. ಸೋಲಿಗೆ ಹೆದರಿ ಕ್ಷೇತ್ರದಿಂದ ನಾನು ಓಡಿಹೋಗುವವನಲ್ಲ, ಸೋಲು–ಗೆಲುವು ಎರಡನ್ನೂ ಸಮಾನವಾಗಿ ಸ್ವೀಕರಿಸಿ ಕ್ಷೇತ್ರದಲ್ಲಿದ್ದುಕೊಂಡು ಜನತೆಯ ನೋವು ನಲಿವುಗಳಿಗೆ ಪ್ರಾಮಾಣಿಕವಾಗಿ ಸ್ಪಂದಿಸಿ ಕೆಲಸ ಮಾಡುತ್ತೇನೆ.



–ಡಾ.ನಾರಾಯಣಗೌಡ, ಸಚಿವ

ಕುಮಾರಸ್ವಾಮಿ ಅತಿಯಾದ ಆತ್ಮವಿಶ್ವಾಸವೇ ದಳಕ್ಕೆ ಪೆಟ್ಟು



ಕಳೆದ ಬಾರಿ ಏಳಕ್ಕೆ ಏಳು ಸೀಟು ಗೆದ್ದಿದ್ದ ಜೆಡಿಎಸ್ ಈ ಬಾರಿಯೂ ಕನಿಷ್ಠ ಐದು ಕ್ಷೇತ್ರ ಗೆದ್ದೇ ಗೆಲ್ಲುತ್ತದೆ ಎಂಬ ಅತಿಯಾದ ಆತ್ಮವಿಶ್ವಾಸದಿಂದ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಮಂಡ್ಯ ಜಿಲ್ಲೆಯನ್ನು ನಿರ್ಲಕ್ಷಿಸಿ, ಹೆಚ್ಚಿನ ಪ್ರಚಾರದಲ್ಲಿ ತೊಡಗಲಿಲ್ಲ. ಕಳೆದ ನಾಲ್ಕು ತಿಂಗಳ ಹಿಂದೆ ಪಂಚರತ್ನ ಯಾತ್ರೆ ಮುಗಿಸಿದ್ದ ಹೆಚ್ಡಿಕೆ, ಚುನಾವಣೆ ಘೋಷಣೆಯಾದ ಬಳಿಕ ಪ್ರತಿ ಕ್ಷೇತ್ರಕ್ಕೆ ತಲಾ ಒಂದು ಗಂಟೆ ಸಮಯ ಕೊಟ್ಟರು. ಮಾಜಿ ಪ್ರಧಾನಿ ದೇವೇಗೌಡ ಸಹ ಪ್ರತಿ ಕ್ಷೇತ್ರಕ್ಕೆ ಒಮ್ಮೆ ಬಂದು ಹೋದರು. ಆದರೆ ತನ್ನ ಬಲಿಷ್ಠ ನೆಲೆ ಇರುವ ಮಂಡ್ಯ ಜಿಲ್ಲೆಗೆ ಹೆಚ್ಚು ಸಮಯ ಕೊಡದ ಹೆಚ್ಡಿಕೆ, ತಮಗೆ ನೆಲೆ ಇಲ್ಲದ ಉತ್ತರ ಕರ್ನಾಟಕ, ಕರಾವಳಿ ಭಾಗಕ್ಕೆ ಹೆಚ್ಚಿನ ಒತ್ತು ಕೊಟ್ಟು ಮಂಡ್ಯ ಜಿಲ್ಲೆಯನ್ನು ನಿರ್ಲಕ್ಷಿಸಿದ್ದು, ಬಹು ದೊಡ್ಡ ಬೆಲೆ ತೆತ್ತುವಂತೆ ಮಾಡಿತು. ಹೆಚ್ಡಿಕೆ ಹೆಚ್ಚಿನ ಸಮಯ ಮಂಡ್ಯಕ್ಕೆ ಕೊಟ್ಟಿದ್ದರೆ, ಕಡಿಮೆ ಅಂತರದಿಂದ ಸೋತ ಕ್ಷೇತ್ರಗಳನ್ನು ಗೆಲ್ಲುವ ಸಾಧ್ಯತೆ ಇರುತ್ತಿತ್ತು.

ಮಂಡ್ಯದಲ್ಲಿ ನಡೆಯದ ಸುಮಲತಾ, ಕೇಂದ್ರ ನಾಯಕರ ಮ್ಯಾಜಿಕ್

ಪಕ್ಷೇತರ ಸಂಸದೆ ಸುಮಲತಾರನ್ನು ಬಿಜೆಪಿಗೆ ಸೆಳೆದುಕೊಂಡಿತ್ತು. ಜೊತೆಗೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ, ಯುಪಿ ಸಿಎಂ ಯೋಗಿ ಆದಿತ್ಯನಾಥ್, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವೆ ಸ್ಮೃತಿ ಇರಾನಿ ಜಿಲ್ಲೆಯಲ್ಲಿ ಭರ್ಜರಿ ಪ್ರಚಾರ ಮಾಡಿದ್ದರು. ಆದರೆ ಇವ್ಯಾವು ಫಲ ನೀಡಲಿಲ್ಲ.



ಇದ್ದ ಒಂದು ಸ್ಥಾನವನ್ನು ಬಿಜೆಪಿ ಕಳೆದುಕೊಂಡಿದ್ದು, ಹಾಲಿ ಸಚಿವ ನಾರಾಯಣಗೌಡ ಕೆ.ಆರ್.ಪೇಟೆಯಲ್ಲಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ. ಸಮಾಧಾನ ಏನೆಂದರೆ ಜಿಲ್ಲೆಯಲ್ಲಿ ಈವರೆಗೆ ಠೇವಣಿ ಪಡೆಯಲು ತಿಣುಕಾಡುತ್ತಿದ್ದ ಬಿಜೆಪಿ ಈ ಬಾರಿ ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಮಂಡ್ಯ, ಮದ್ದೂರು, ಮಳವಳ್ಳಿ ನಾಲ್ಕು ಕ್ಷೇತ್ರದಲ್ಲಿ ಗಣನೀಯ ಮತ ಪಡೆಯುವ ಮೂಲಕ ಠೇವಣಿ ಪಡೆದಿದ್ದು, ನಾಗಮಂಗಲ ಹಾಗೂ ಮೇಲುಕೋಟೆಯಲ್ಲಿ ಠೇವಣಿ ಕಳೆದುಕೊಂಡಿದೆ.



ಚಲುವರಾಯಸ್ವಾಮಿ



ನರೇಂದ್ರಸ್ವಾಮಿ



ರಮೇಶ್‌ಬಾಬು



ಗಣಿಗ ರವಿಕುಮಾರ್



ಕದಲೂರು ಉದಯ್



ದರ್ಶನ್ ಪುಟ್ಟಣ್ಣಯ್ಯ



ಹೆಚ್.ಟಿ. ಮಂಜು

ವಿ.ಪೇಟೆಯಲ್ಲಿ ಶಾಸಕ ಪೊನ್ನಣ್ಣ ವಿಜಯೋತ್ಸವ



ವಿರಾಜಪೇಟೆ, ಮೇ 13– ಬಿಜೆಪಿ ಅಭ್ಯರ್ಥಿ ಹಾಲಿ ಶಾಸಕ ಕೆ.ಜಿ. ಬೋಪಯ್ಯ ಅವರನ್ನು ಸೋಲಿಸಿ ಮೊದಲ ಬಾರಿಗೆ ವಿಧಾನಸಭೆಯನ್ನು ಪ್ರವೇಶಿಸಿದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಿ ವಿಜಯೋತ್ಸವ ಆಚರಿಸಿದರು.

ಕಳೆದ 20 ವರ್ಷಗಳಿಂದಲೂ ಕಾಂಗ್ರೆಸ್ ಪಕ್ಷದ ಶಾಸಕರು ಇಲ್ಲದೆ ಬೇಸರಗೊಂಡಿದ್ದ ಕಾರ್ಯಕರ್ತರು, ಕಾಂಗ್ರೆಸ್ ಅಭ್ಯರ್ಥಿ ಪೊನ್ನಣ್ಣ ಅವರ ಗೆಲುವಿನಿಂದ ಹರ್ಷ ವ್ಯಕ್ತಪಡಿಸಿದರಲ್ಲದೆ ಮೆರವಣಿಗೆಯಲ್ಲಿ ಪಾಲ್ಗೊಂಡು ಘೋಷಣೆಗಳನ್ನು ಕೂಗಿದರು. ಇದಕ್ಕೂ ಮೊದಲು ವಿರಾಜಪೇಟೆ–ಮಡಿಕೇರಿ ರಸ್ತೆಯ ಚಿಕ್ಕಪೇಟೆಯಲ್ಲಿ ಕಾರ್ಯಕರ್ತರು ಪೊನ್ನಣ್ಣ ಅವರಿಗೆ ಸ್ವಾಗತ ಕೋರಿ ಹೂವಿನ ಸುರಿಮಳೆಗೈದರು.

ನಂತರ ಚಿಕ್ಕಪೇಟೆಯಿಂದ ಮೆರವಣಿಗೆ ಹೊರಟು ಚರ್ಚ್ ರಸ್ತೆ ಮಾರ್ಗವಾಗಿ ತೆಲುಗರ ಬೀದಿಯಲ್ಲಿರುವ ಮಾರಿಯಮ್ಮ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮತ್ತೆ ಮೆರವಣಿಗೆಯಲ್ಲಿ ಪಾಲ್ಗೊಂಡು ಜೈನರ ಬೀದಿ, ದೊಡ್ಡಟ್ಟಿ ಚೌಕಿ ಮೂಲಕ ಗಡಿಯಾರ ಕಂಬ ಹಾಗೂ ಖಾಸಗಿ ಬಸ್ ನಿಲ್ದಾಣ ಗೋಣಿಕೊಪ್ಪ ರಸ್ತೆ, ಪಂಜಾರುಪೇಟೆವರೆಗೆ ಮೆರವಣಿಗೆ ನಡೆಸಿದರು.

ವಿಜಯೋತ್ಸವದಲ್ಲಿ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಧರ್ಮಜ ಉತ್ತಪ್ಪ, ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ, ವಿಧಾನಪರಿಷತ್ ಮಾಜಿ ಸದಸ್ಯ ಸಿ.ಎಸ್.ಅರುಣ್ ಮಾಚಯ್ಯ, ವಿರಾಜಪೇಟೆ ಬ್ಲಾಕ್ ಅಧ್ಯಕ್ಷ ರಂಜಿ ಪೂಣಚ್ಚ, ನಗರ ಕಾಂಗ್ರೆಸ್ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಉಪಾಧ್ಯಕ್ಷ ಶಾವುಲ್ ಹಮೀದ್, ಅಲ್ಪ ಸಂಖ್ಯಾತರ ಘಟಕದ ರಫೀಕ್, ಶಭೀರ್, ಪ್ರಮುಖರಾದ ಕಾಂಚನಾ ಪೊನ್ನಣ್ಣ, ಡಿ.ಸಿ.ಧ್ರುವ ಕುಮಾರ್, ಸಿ.ಎ.ನಾಸೀರ್, ಕೆ.ಸಿ.ಶಭರಿಶ್, ಎಂ.ಎಲ್.ಸೈನುದ್ದಿನ್, ಮರಿವಿನ್ ಲೋಭೊ, ಜೋಕಿಂ ರಾಡ್ರಿಗಾಸ್, ಪುರಸಭೆ ಸದಸ್ಯ ಡಿ.ಪಿ.ರಾಜೇಶ್, ಎಸ್.ಹೆಚ್. ಮತೀನ್, ಮಹ್ಮದ್ ರಫಿ ಸೇರಿದಂತೆ ಪಕ್ಷದ ಕಾರ್ಯಕರ್ತರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು. ವಿರಾಜಪೇಟೆ ಡಿವೈಎಸ್‌ಪಿ ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಶಿವರುದ್ರ ಅವರು ಬಿಗಿ ಬಂದೊಬಸ್ತ್ ಏರ್ಪಡಿಸಿದ್ದರು.



ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪೊನ್ನಣ್ಣ ಗೆಲುವಿನ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ನಾಪೋಕ್ಲು ಪಟ್ಟಣದಲ್ಲಿ ಸಂಭ್ರಮಾಚರಣೆ ನಡೆಸಿದರು. ಮೆರವಣಿಗೆಯಲ್ಲಿ ಸಾಗಿದ ಪಕ್ಷದ ಪ್ರಮುಖರು, ಕಾರ್ಯಕರ್ತರು ಬಳಿಕ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಇದೇ ರೀತಿ ಎಮ್ಮೆಮಾಡು, ಕೊಳಕೇರಿ ಸೇರಿದಂತೆ ವಿವಿಧೆಡೆ ಕಾರ್ಯಕರ್ತರು ಸಂಭ್ರಮಿಸಿದರು.

ಕೊಡಗು ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಂ. ಗಣೇಶ್ ರಾಜೀನಾಮೆ



ಮಡಿಕೇರಿ, ಮೇ 13– ಕೊಡಗು ವಿಧಾನ ಸಭಾ ಚುನಾವಣೆಯಲ್ಲಿ ಜೆಡಿಎಸ್ ಮತ ಪಡೆಯುವಲ್ಲಿ ತೀವ್ರ ಹಿನ್ನಡೆ ಸಾಧಿಸಿರುವುದು ಮತ್ತು ಪಕ್ಷದ ರಾಜಕೀಯ ಬೆಳವಣಿಗೆಗಳಿಂದ ಬೇಸತ್ತು ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಕೆ.ಎಂ. ಗಣೇಶ್ ರಾಜಿನಾಮೆ ಸಲ್ಲಿಸಿದ್ದಾರೆ.

ಚುನಾವನಾ ಫಲಿತಾಂಶ ಹೊರ ಬಿದ್ದ ತಕ್ಷಣವೇ ನಡೆದ ಬೆಳವಣಿಗೆಗಳ ಬಳಿಕ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರಿಗೆ ಕೆ.ಎಂ. ಗಣೇಶ್ ರಾಜಿನಾಮೆ ಪತ್ರ ಸಲ್ಲಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಗಣೇಶ್, ಕಾಂಗ್ರೆಸ್ ಗೆಲುವಿಗೆ ಜೆಡಿಎಸ್ ಅಭ್ಯರ್ಥಿಗಳ ನಿರ್ಲಕ್ಷ್ಯವೇ ಕಾರಣವಾಗಿದೆ. ಜೆಡಿಎಸ್ ಸಕ್ರೀಯವಾಗಿ ಇರುತ್ತಿದ್ದರೆ ಇಂದು ಕಾಂಗ್ರೆಸ್ ಗೆಲ್ಲುತ್ತಿರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮುಂದಿನ 15 ದಿನಗಳಲ್ಲಿ ತನ್ನ ರಾಜಕೀಯ ನಿರ್ಧಾರ ಪ್ರಕಟಿಸುವುದಾಗಿ ಕೆ.ಎಂ. ಗಣೇಶ್ ಹೇಳಿದ್ದಾರೆ.

ಸೇಂಟ್ ಅನ್ಸ್ ಬಾಲಿಕ ಪ್ರೌಢಶಾಲೆಗೆ ಶೇ. 100 ಫಲಿತಾಂಶ

ಮೈಸೂರು, ಮೇ 13– ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎನ್.ಆರ್. ಮೊಹಲ್ಲಾದ ಸೆಂಟ್ ಆನ್ಸ್ ಬಾಲಿಕಾ ಪ್ರೌಢಶಾಲೆಗೆ ಶೇ. 100 ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾಗಿದ್ದ 151 ವಿದ್ಯಾರ್ಥಿಗಳಲ್ಲಿ 151 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 46 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 100 ವಿದ್ಯಾರ್ಥಿಗಳು ಪ್ರಥಮ ದರ್ಜೆ ಹಾಗೂ 5 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಕುಟುಂಬ ರಾಜಕಾರಣದಿಂದ ಹೊರಬಂದ ಅಧಿಕಾರ

ಹನೂರಿನಲ್ಲಿ ಜೆಡಿಎಸ್‌ನ ಮಂಜುನಾಥ್‌ಗೆ ಗೆಲುವು



ಚಾಮರಾಜನಗರ, ಮೇ 13– ಕಳೆದ ನಾಲ್ಕು ದಶಕಗಳಿಂದ ಕ್ಷೇತ್ರದ ಎರಡು ಕುಟುಂಬಗಳಿಗೆ ಮಾತ್ರ ಸಿಮೀತವಾಗಿದ್ದ ಶಾಸಕ ಸ್ಥಾನ ಇದೀಗ ಹೊರ ಬಂದಿದೆ. ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಎಂ.ಆರ್. ಮಂಜುನಾಥ್ ಜಯಗಳಿಸುವ ಮೂಲಕ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ಎಂ.ಆರ್. ಮಂಜುನಾಥ್ ಅವರು 75632 ಮತಗಳನ್ನು ಪಡೆದರೆ ಅವರ ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಆರ್. ನರೇಂದ್ರ 57,978 ಮತಗಳನ್ನು ಪಡೆದಿದ್ದಾರೆ. ಇವರಿಬ್ಬರ ನಡುವೆ ಮತಗಳ ಅಂತರ 17,654 ಇನ್ನುಳಿದಂತೆ ಬಿಜೆಪಿ ಅಭ್ಯರ್ಥಿ ಡಾ.ಪ್ರೀತನ್ ನಾಗಪ್ಪ 35,870 ಮತಗಳನ್ನು ಪಡೆದು ಮೂರನೇ ಸ್ಥಾನ ಗಳಿಸಿದರು.

ಹನೂರು ಕ್ಷೇತ್ರದಲ್ಲಿ ಜಿ. ರಾಜೂಗೌಡ ಹಾಗೂ ಎಚ್. ನಾಗಪ್ಪ ಅವರ ಕುಟುಂಬಗಳ ನಡುವೆ ಮೊದಲಿನಿಂದಲೂ ಪೈಪೋಟಿ ನಡೆಯುತ್ತಿತ್ತು. 1985ರಿಂದ 2023ರವರೆಗೂ ಈ ಎರಡು ಕುಟುಂಬದ ಸದಸ್ಯರೇ ಶಾಸಕರಾಗಿ ಆಯ್ಕೆಯಾಗುತ್ತಿದ್ದರು. ಈ ಬಾರಿ ಇವರಿಬ್ಬರ ಕುಟುಂಬದವರಲ್ಲದೆ ಮಂಜುನಾಥ್ ಗೆಲುವು ಸಾಧಿಸುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.

ಕಳೆದ 2018ರ ಚುನಾವಣೆಯಲ್ಲೂ ಸಹ ಮಂಜುನಾಥ್ ಸ್ಪರ್ಧಿಸಿ ಆರ್. ನರೇಂದ್ರ ವಿರುದ್ಧ ಸೋಲು ಕಂಡಿದ್ದರು. ಇದೀಗ ಈ ಚುನಾವಣೆಯಲ್ಲಿ ಜಯ ಗಳಿಸುವ ಮೂಲಕ ಜಿಲ್ಲೆಯಲ್ಲಿ ಜೆಡಿಎಸ್ ಖಾತೆ ತೆರೆದಿದ್ದಾರೆ.

ಅಭ್ಯರ್ಥಿಗಳು ಪಡೆದ ಮತಗಳು: ಎಂ.ಆರ್. ಮಂಜುನಾಥ್ (ಜೆಡಿಎಸ್) 75632, ಆರ್. ನರೇಂದ್ರ (ಕಾಂಗ್ರೆಸ್) 57978, ಡಾ. ಪ್ರೀತನ್. ಕೆ.ಎನ್. (ಬಿಜೆಪಿ) 35870, ಮಾದೇಶ. ಎಂ (ಬಿಎಸ್‌ಪಿ) 1302, ಹರೀಶ್. ಕೆ (ಆಮ್ ಆದ್ಮಿ ಪಾರ್ಟಿ) 2515, ಟಿ. ಜಾನ್ ಪೀಟರ್ (ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ) 1596, ಎನ್. ಪ್ರದೀಪ್ ಕುಮಾರ್ (ಉತ್ತಮ ಪ್ರಜಾಕೀಯ ಪಾರ್ಟಿ) 437, ಜಿ. ಮುರುಗೇಶನ್ (ಕರ್ನಾಟಕ ಪ್ರಜಾ ಪಾರ್ಟಿ) (ರೈತ ಪರ್ವ) 131, ಡಿ. ಶ್ರೀಕಂಠಸ್ವಾಮಿ (ಸರ್ವೋದಯ ಕರ್ನಾಟಕ ಪಕ್ಷ) 666, ಸಿದ್ದಪ್ಪ. ಆರ್ (ಕಂಟ್ರಿ ಸಿಟಿಜನ್ ಪಾರ್ಟಿ) 115, ಸುರೇಶ್. ಎಂ (ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ) 176, ಎಂ. ನಾಗರಾಜು (ಪಕ್ಷೇತರ) 227, ಪ್ರದೀಪ್ ಕುಮಾರ್. ಎಂ (ಪಕ್ಷೇತರ) 436, ಮುಜಾಮಿಲ್ ಪಾಷ (ಪಕ್ಷೇತರ) 256, ನೋಟಾ 596.

19 ವರ್ಷಗಳ ರಾಜಕೀಯ ವನವಾಸ ಅಂತ್ಯ



ಚಾಮರಾಜನಗರ, ಮೇ 13– ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದ ನೂತನ ಶಾಸಕರಾಗಿ ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಕೃಷ್ಣಮೂರ್ತಿ ಆಯ್ಕೆಯಾಗಿದ್ದಾರೆ.

ಎ.ಆರ್. ಕೃಷ್ಣಮೂರ್ತಿ ಅವರು 1,08,363 ಮತಗಳನ್ನು ಪಡೆಯುವ ಮೂಲಕ ತಮ್ಮ 19 ವರ್ಷ ಬಳಿಕ ಮತ್ತೊಮ್ಮೆ ಶಾಸಕರಾಗಿ ಆಯ್ಕೆಯಾದರು. ಇವರ ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ ಎನ್. ಮಹೇಶ್ ಅವರು 48,844 ಮತಗಳನ್ನು ಪಡೆದು ಸೋಲು ಅನುಭವಿಸಿದರು. ಎ.ಆರ್. ಕೃಷ್ಣಮೂರ್ತಿ ಅವರು 59,519 ಮತಗಳ ಅಂತರದಿಂದ ಭರ್ಜರಿ ಗೆಲುವು ದಾಖಲಿಸುವ ಮೂಲಕ 19 ವರ್ಷಗಳ ರಾಜಕೀಯ ವನವಾಸದಿಂದ ಹೊರಬಂದಿದ್ದಾರೆ.

ಕೃಷ್ಣಮೂರ್ತಿ ಅವರು ಈ ಮೊದಲು ಸಂತೇಮರಹಳ್ಳಿ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. 2004ರ ಚುನಾವಣೆಯಲ್ಲಿ ಆರ್. ಧ್ರುವನಾರಾಯಣ್ ಅವರ ವಿರುದ್ಧ ಕೇವಲ ಒಂದು ಮತಗಳ ಅಂತರದಿಂದ ಸೋತಿದ್ದರು. ನಂತರ ನಡೆದ ನಾಲ್ಕು ವಿಧಾನಸಭೆ ಹಾಗೂ ಎರಡು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲು ಕಂಡಿದ್ದರು. ಈಗ ಭಾರೀ ಅಂತರದಿಂದ ಗೆಲುವು ದಾಖಲಿಸುವ ಮೂಲಕ ರಾಜಕೀಯ ನೆಲೆಯನ್ನು ಕಂಡುಕೊಂಡಿದ್ದಾರೆ.

ಅಭ್ಯರ್ಥಿಗಳು ಪಡೆದ ಮತಗಳು: ಎ.ಆರ್. ಕೃಷ್ಣಮೂರ್ತಿ (ಕಾಂಗ್ರೆಸ್) 108363, ಎನ್. ಮಹೇಶ್ (ಬಿಜೆಪಿ) 48844, ಕೆಂಪರಾಜು (ಆಮ್ ಆದ್ಮಿ ಪಾರ್ಟಿ) 807, ನೋಟಾ 1664.

ಡೆಲ್ಲಿ ವಿರುದ್ಧ ಜಯ: ಪಂಜಾಬ್ ಪ್ಲೇಆಫ್ ಕನಸು ಜೀವಂತ



ಡೆಲ್ಲಿ, ಮೇ 13(ಸಿಎನ್)– ಪ್ರಭ್ಸಿಮ್ರನ್ ಅಮೋಘ ಶತಕ ಹಾಗೂ ಹರ್ಪ್ರೀತ್ ಬ್ರಾರ್ ಬೌಲಿಂಗ್ ದಾಳಿ ನೆರವಿನಿಂದ ಡೆಲ್ಲಿ ವಿರುದ್ಧ ಪಂಜಾಬ್ 31 ರನ್‌ಗಳಿಂದ ಜಯ ಸಾಧಿಸಿತು.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಬ್ಯಾಟಿಂಗ್ ಮಾಡಿದ ಪಂಜಾಬ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 167 ರನ್‌ಗಳ ಸಾಧಾರಣ ಮೊತ್ತ ಪೇರಿಸಿತು. ಪಂಜಾಬ್ ಪರ ಅಬ್ಬರಿಸಿದ ಪ್ರಭ್ಸಿಮ್ರನ್ ಕೇವಲ 65 ಎಸೆತಗಳಲ್ಲಿ 10 ಬೌಂಡರಿ ಹಾಗೂ 6 ಸಿಕ್ಸರ್ ಒಳಗೊಂಡ (103)ರನ್ ಬಾರಿಸಿ ತಂಡಕ್ಕೆ ಗೌರವಾನ್ವಿತ ಮೊತ್ತ ಕಲೆ ಹಾಕುವಲ್ಲಿ ನೆರವಾದರು. ನಾಯಕ ಧವನ್ ನಿರೀಕ್ಷೆಯಂತೆ ಗಳಿಸುವಲ್ಲಿ ವಿಫಲರಾಗಿ(7), ಇಶಾಂತ್ ಎಸೆತದಲ್ಲಿ ಕ್ಯಾಚ್ ನೀಡಿ ನಿರ್ಗಮಿಸಿದರು. ಅದರ ಬೆನ್ನಲ್ಲೆ ಲಿವಿಂಗ್‌ಸ್ಟೋನ್ (4) ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಜಿತೇಶ್ ಶರ್ಮಾ(5), ಸ್ಯಾಮ್ ಕರ್ರನ್(20), ಹರ್ಪ್ರೀತ್ ಬ್ರಾರ್(2), ಶಾರುಕ್‌ಖಾನ್(2), ಸಿಕಂದರ್‌ರಾಜಾ (11) ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಡೆಲ್ಲಿ ಪರ ಇಶಾಂತ್‌ಶರ್ಮಾ 2 ವಿಕೆಟ್ ಕಬಳಿಸಿದರೆ, ಕಲೀಲ್‌ಅಹ್ಮದ್, ಅಕ್ಸರ್, ಪ್ರವೀಣ್ ದುಬೆ, ಕುಲ್ದೀಪ್ ಯಾದವ್, ಮುಕೇಶ್ ಕುಮಾರ್ ತಲಾ ಒದೊಂದು ವಿಕೆಟ್ ಪಡೆದರು. ಪಂಜಾಬ್ 167–7–(20)

ಸಾಧಾರಣ ಮೊತ್ತ ಬೆನ್ನತ್ತಿದ ಡೆಲ್ಲಿ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 136 ರನ್‌ಗಳಿಸಲಷ್ಟೇ ಶಕ್ತವಾಗಿ ಪಂಜಾಬ್ ವಿರುದ್ಧ 31 ರನ್‌ಗಳಿಂದ ಪರಾಭವಗೊಂಡಿತು. ಡೆಲ್ಲಿ ಪರ ಉತ್ತಮವಾಗಿ ಬ್ಯಾಟ್ ಬೀಸಿದ ಡೇವಿಡ್ ವಾರ್ನರ್ 27 ಎಸೆತಗಳಲ್ಲಿ 10 ಬೌಂಡರಿ 1 ಸಿಕ್ಸ್ ಒಳಗೊಂಡ (57)ರನ್ ಗಳಿಸಿ ಹರ್ಪ್ರೀತ್ ಬ್ರಾರ್ ಎಸೆತದಲ್ಲಿ ಎಲ್‌ಬಿಡಬ್ಲ್ಯೂ ಬಲೆಗೆ ಬಿದ್ದರು. ಕ್ರೀಸ್‌ನಲ್ಲಿದ್ದ ಸ್ಟಾರ್ ಆಟಗಾರ ಪಿಲಿಪ್ ಸಾಲ್ಟ್(21) ರನ್ ಗಳಿಸಿ ವಿಕೆಟ್ ಕೈಚೆಲ್ಲಿ ಪೆವಿಲಿಯನ್‌ನತ್ತ ಮುಖ ಮಾಡಿದರು. ಬಳಿಕ ಬಂದ ಮಿಚೆಲ್ ಮಾರ್ಷ್(3), ರಿಲೆರೋಸ್ಸೋ(5), ಅಕ್ಸರ್‌ಪಟೇಲ್(1), ಕನ್ನಡಿಗ ಮನೀಶ್‌ಪಾಂಡೆ(0), ಹಕೀಮ್‌ಖಾನ್(16), ಪ್ರವೀಣ್ ದುಬೆ(16), ಕುಲ್ದೀಪ್‌ಯಾದವ್(10), ಮುಕೇಶ್ ಕುಮಾರ್(6)ರನ್ ಗಳಿಸುವ ಮೂಲಕ ನೀರಸ ಬ್ಯಾಟಿಂಗ್ ಪ್ರದರ್ಶನದಿಂದಾಗಿ ಸೋಲನನುಭವಿಸಿತು. ಪಂಜಾಬ್ ಪರ ಹರ್ಪ್ರೀತ್ ಬ್ರಾರ್ 4 ವಿಕೆಟ್ ಕಬಳಿಸಿದರೆ, ನಾಥನ್ ಎಲಿಸ್ ಹಾಗೂ ರಾಹುಲ್ ಚಹರ್ ತಲಾ ಎರಡು ವಿಕೆಟ್ ಪಡೆದು ತಂಡದ ಗೆಲುವಿಗೆ ನೆರವಾದರು. ಡೆಲ್ಲಿ 138–8–(20). ಪಂದ್ಯ ಪುರುಷೋತ್ತಮ ಪ್ರಶಸ್ತಿಗೆ ಪಂಜಾಬ್ ತಂಡದ ಪ್ರಭ್ಸಿಮ್ರನ್‌ಸಿಂಗ್ ಭಾಜನರಾದರು.

ಮೈಸೂರು ಮಿತ್ರ ಭಾನುವಾರ 14 ಮೇ 2023

ಮೈಸೂರು ಜಿಲ್ಲೆಯ ಏಕೈಕ ಬಿಜೆಪಿ ಶಾಸಕ ಶ್ರೀವತ್ಸ

ಹಾಸನದಲ್ಲಿ ಇಬ್ಬರು ಸೇರಿ ಹಳೇ ಮೈಸೂರು ಭಾಗದಲ್ಲಿ 3 ಸ್ಥಾನಕ್ಕೆ ಬಿಜೆಪಿ ತೃಪ್ತಿ

ಮೈಸೂರು, ಮೇ 13(ಎಸ್‌ಬಿಡಿ)– ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಟಿ.ಎಸ್.ಶ್ರೀವತ್ಸ, ಮೈಸೂರು ಜಿಲ್ಲೆಯ ಏಕೈಕ ಬಿಜೆಪಿ ಶಾಸಕರಾಗಿದ್ದಾರೆ.

ಮೊದಲ ಸ್ಪರ್ಧೆಯಲ್ಲೇ ಇವರು 73,670 (ಶೇ.49) ಮತಗಳನ್ನು ಪಡೆದು ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಅವರನ್ನು ಮಣಿಸುವ ಮೂಲಕ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇವರೊಂದಿಗೆ ಹಾಸನ ಜಿಲ್ಲೆ ಸಕಲೇಶಪುರದ ಸಿಮೆಂಟ್ ಮಂಜು ಹಾಗೂ ಬೇಲೂರು ಕ್ಷೇತ್ರದ ಹೆಚ್.ಕೆ.ಸುರೇಶ್ ಸೇರಿ ಹಳೇ ಮೈಸೂರು ಭಾಗದಲ್ಲಿ ಮೂವರು ಮಾತ್ರ ಬಿಜೆಪಿಯಿಂದ ಗೆದ್ದಿದ್ದಾರೆ.


ಬಿಜೆಪಿಗೆ ಭಾರೀ ನಷ್ಟ: ಹಳೆ ಮೈಸೂರು ಭಾಗದಲ್ಲಿ ಅಸ್ತಿತ್ವ ಕಂಡುಕೊಂಡಿದ್ದ ಬಿಜೆಪಿಗೆ ಈ ಬಾರಿ ಅಧಿಕ ನಷ್ಟವುಂಟಾಗಿದೆ. ಕಳೆದ ಬಾರಿ ಮೈಸೂರಿನ ಕೃಷ್ಣರಾಜ, ಚಾಮರಾಜ, ನಂಜನಗೂಡು, ಚಾಮರಾಜ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಮಂಡ್ಯದ ಕೆ.ಆರ್.ಪೇಟೆ, ಹಾಸನ, ಕೊಡಗಿನ ವಿರಾಜಪೇಟೆ ಹಾಗೂ ಮಡಿಕೇರಿ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿತ್ತು. ಆದರೆ ಈ ಬಾರಿ ಬರೀ ಕೃಷ್ಣರಾಜ ಕ್ಷೇತ್ರವನ್ನು ಮಾತ್ರ ಉಳಿಸಿಕೊಳ್ಳಲು ಸಾಧ್ಯವಾಗಿದೆ. ಕೆ.ಆರ್.ಪೇಟೆ ಹಾಗೂ ಹಾಸನದಲ್ಲಿ ಜೆಡಿಎಸ್, ಉಳಿದೆಡೆ ಕಾಂಗ್ರೆಸ್ ಜಯಭೇರಿ ಭಾರಿಸಿದೆ. ಆದರೆ ಈ ಬಾರಿ ಹಾಸನದ ಸಕಲೇಶಪುರ ಹಾಗೂ ಬೇಲೂರು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ.



ಮೊದಲ ಪ್ರಯತ್ನ ಸಫಲ: ಕೃಷ್ಣರಾಜ ಕ್ಷೇತ್ರದ ಶಾಸಕರಾಗಿದ್ದ ಎಸ್.ಎ.ರಾಮದಾಸ್ ಬದಲು ಟಿ.ಎಸ್.ಶ್ರೀವತ್ಸ ಅವರನ್ನು ಕಣಕ್ಕಿಳಿಸಲಾಗಿತ್ತು. ಇವರು ಹೊಸ ಅಭ್ಯರ್ಥಿ, ಗೆಲುವು ಕಷ್ಟಸಾಧ್ಯ ಎಂದು ವಿಮರ್ಶಿಸಲಾಗಿತ್ತು. ಆದರೆ 7 ಸಾವಿರಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ಮಣಿಸಿ ಗೆದ್ದಿದ್ದಾರೆ. ಪುನರಾಯ್ಕೆ ಬಯಸಿ ಸ್ಪರ್ಧೆಗಿಳಿದಿದ್ದ ಹಾಲಿ ಶಾಸಕರಾದ ಚಾಮರಾಜದ ಎಲ್.ನಾಗೇಂದ್ರ, ನಂಜನಗೂಡಿನ ಹರ್ಷವರ್ಧನ್, ಹಾಸನದ ಪ್ರೀತಂಗೌಡ, ಗುಂಡ್ಲುಪೇಟೆಯ ನಿರಂಜನಕುಮಾರ್, ವಿರಾಜಪೇಟೆ ಕೆ.ಜಿ.ಬೋಪಯ್ಯ, ಮಡಿಕೇರಿಯ ಅಪ್ಪಚ್ಚು ರಂಜನ್ ಹಾಗೂ ಕೆ.ಆರ್.ಪೇಟೆ ಕೆ.ಸಿ.ನಾರಾಯಣಗೌಡ ಪರಾಜಿತರಾಗಿದ್ದಾರೆ. ಶ್ರೀವತ್ಸ ಗೆಲುವಿನಿಂದ ಜಿಲ್ಲೆಯಲ್ಲಿ ಬಿಜೆಪಿ ಕ್ಲೀನ್ ಸ್ವೀಪ್‌ನಿಂದ ಪಾರಾಗಿದೆ.

ತಂದೆಯ ದಾಖಲೆ ಸರಿಗಟ್ಟಿದ ತನ್ವೀರ್

ಮೈಸೂರು, ಮೇ 13(ಎಸ್‌ಬಿಡಿ)– ನರಸಿಂಹರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ತನ್ವೀರ್ ಸೇಠ್ ಸತತ 6ನೇ ಬಾರಿ ಗೆಲುವು ಸಾಧಿಸುವ ಮೂಲಕ ತಮ್ಮ ತಂದೆ ಅಜೀಜ್ ಸೇಠ್ ಅವರ ದಾಖಲೆ ಸರಿಗಟ್ಟಿದ್ದಾರೆ.





ತಂದೆಯ ನಿಧನದ ಬಳಿಕ ಚುನಾವಣಾ ರಾಜಕೀಯ ಪ್ರವೇಶಿಸಿದ ತನ್ವೀರ್ ಸೇಠ್, 2002ರ ಉಪ ಚುನಾವಣೆ ಸೇರಿ 2018ರ ಸಾರ್ವತ್ರಿಕ ಚುನಾವಣೆವರೆಗೆ ಸತತವಾಗಿ ಐದು ಬಾರಿ ಗೆದ್ದಿದ್ದರು. ಇದೀಗ ತಮ್ಮ 6ನೇ ಪ್ರಯತ್ನದಲ್ಲೂ ಶಾಸಕರಾಗಿ ಆಯ್ಕೆಯಾಗುವ ಮೂಲಕ ತಮ್ಮ ತಂದೆಯ ದಾಖಲೆ ಸರಿಗಟ್ಟಿದ್ದಾರೆ. ಅಜೀಜ್ ಸೇಠ್ ಅವರು 1967, 1972, 1978, 1983, 1989 ಹಾಗೂ 1999ರ ಚುನಾವಣೆಗಳಲ್ಲಿ ಗೆದ್ದಿದ್ದರು. 1985 ಕಾಂಗ್ರೆಸ್‌ನಿಂದ ಮುಕ್ತಾರ್ ಉನ್ನೀಸಾ ಬೇಗಂ, 1994ರಲ್ಲಿ ಬಿಜೆಪಿಯಿಂದ ಮಾರುತಿರಾವ್ ಪವಾರ್ ಆಯ್ಕೆಯಾಗಿದ್ದನ್ನು ಬಿಟ್ಟರೆ ಉಳಿದೆಲ್ಲಾ ಚುನಾವಣೆಗಳಲ್ಲಿ ಸೇಠ್ ಕುಟುಂಬ ಪಾರುಪತ್ಯ ಮೆರೆದಿದೆ.

ಮೂರೇ ಸುತ್ತಿಗೆ ವಿ.ಸೋಮಣ್ಣ ನಿರ್ಗಮನ; ಸಿದ್ದರಾಮಯ್ಯ ಆಗಮನ

ಮೈಸೂರು,ಮೇ 13 (ಎಂಟಿವೈ)– ಬಿಜೆಪಿಗೆ ಭಾರಿ ನಿರೀಕ್ಷೆ ಹುಟ್ಟಿಸಿದ್ದ ವರುಣ ವಿಧಾನಸಭಾ ಕ್ಷೇತ್ರದ ಮತ ಎಣಿಕಾ ಕಾರ್ಯದಲ್ಲಿ ಹಿನ್ನಡೆಯಾಗುವುದನ್ನು ಗಮನಿಸಿದ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಕೇವಲ ಮೂರು ಸುತ್ತಿನ ಮತ ಎಣಿಕೆ ಪೂರ್ಣಗೊಳ್ಳುತ್ತಿದ್ದಂತೆಯೇ ಎಣಿಕಾ ಕೇಂದ್ರದಿಂದ ನಿರ್ಗಮಿಸಿದರೆ, ನಾಲ್ಕನೇ ಸುತ್ತು ಮುಗಿಯುವ ವೇಳೆಗೆ ಮಾಜಿ ಸಿಎಂ ಸಿದ್ದರಾಮಯ್ಯ ಮತ ಎಣಿಕಾ ಕೇಂದ್ರಕ್ಕೆ ಆಗಮಿಸಿದರು.



ವರುಣ ಹಾಗೂ ಚಾಮರಾಜನಗರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಸಚಿವ ವಿ.ಸೋಮಣ್ಣ ವರುಣ ಕ್ಷೇತ್ರದಲ್ಲಿ ಗೆದ್ದೆ ಗೆಲ್ಲಬೇಕೆಂಬ ಬಯಕೆ ಹೊಂದಿದ್ದರು. ಇದರಿಂದ ಕೇಂದ್ರ ಸಚಿವ ಅಮಿತ್ ಶಾ ಅವರು ವರುಣ ಕ್ಷೇತ್ರದ ಹೊಸಕೋಟೆಯಲ್ಲಿ ಕ್ಷೇತ್ರದ ಕಾರ್ಯಕರ್ತರ ಸಭೆ ನಡೆಸಿ, ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿ, ಸೋಮಣ್ಣ ಅವರನ್ನು ಗೆಲ್ಲಿಸುವಂತೆ ಕರೆ ನೀಡಿದ್ದರು. ಅಲ್ಲದೆ, ಜಾತಿ ಸಮೀಕರಣದಿಂದ ಗೆದ್ದೇ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದ್ದ ಸೋಮಣ್ಣ ಮತ ಎಣಿಕಾ ಕೇಂದ್ರಕ್ಕೆ ಬೆಳಗ್ಗೆಯೇ ಆಗಮಿಸಿದ್ದರು. ಅಂಚೆ ಮತ ಎಣಿಕೆ ಮುಗಿದ ಬಳಿಕ ಮೂರು ಸುತ್ತಿನ ಎಣಿಕೆ ಪೂರ್ಣಗೊಳ್ಳುತ್ತಿದ್ದಂತೆಯೇ ಸಿದ್ದರಾಮಯ್ಯ ಅವರಿಗೆ 2700ಕ್ಕೂ ಹೆಚ್ಚು ಲೀಡ್ ದೊರೆತಿರುವುದನ್ನು ಗಮನಿಸಿದ ವಿ.ಸೋಮಣ್ಣ ಬೆಳಗ್ಗೆ 10 ಗಂಟೆ ವೇಳೆಗೆ ಮತ ಎಣಿಕಾ ಕೇಂದ್ರದಿಂದ ಹೊರ ನಡೆದರು.

ಐದಾರು ಬೆಂಬಲಿಗರೊಂದಿಗೆ ಎಣಿಕಾ ಕೇಂದ್ರದಿಂದ ಹೊರ ಬಂದ ಸೋಮಣ್ಣ ಅವರನ್ನು ಮಾತನಾಡಿಸಲು ಪತ್ರಕರ್ತರು ಪ್ರಯತ್ನಿಸಿದರು. ಆದರೆ, ಯಾರೊಂದಿಗೂ ಮಾತನಾಡಲು ಬಯಸದ ಸೋಮಣ್ಣ ಸ್ಥಳದಿಂದ ತೆರಳಿದರು.



ಗ್ರ್ಯಾಂಡ್ ಎಂಟ್ರಿ ಕೊಟ್ಟ ಸಿದ್ದರಾಮಯ್ಯ: ಚುನಾವಣೆ ನಡೆದ ದಿನದ ಸಂಜೆಯೇ ಪ್ರತಿಯೊಂದು ಬೂತ್‌ನಲ್ಲಿ ಎಷ್ಟು ಪ್ರಮಾಣದ ಮತ ಚಲಾವಣೆಯಾಗಿದೆ ಎಂಬ ಮಾಹಿತಿಯನ್ನು ಕಲೆಹಾಕಿದ್ದ ಸಿದ್ದರಾಮಯ್ಯ, ಗೆದ್ದೇ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದ್ದರು. ಅಲ್ಲದೆ, ಬೆಂಗಳೂರಿಗೆ ತೆರಳಿ ಸರಣಿ ಸಭೆಯಲ್ಲಿ ಪಾಲ್ಗೊಂಡಿದ್ದರು. ಮತ ಎಣಿಕಾ ಕಾರ್ಯದಲ್ಲಿ ಪಾಲ್ಗೊಳ್ಳಲೆಂದು ಬೆಂಗಳೂರಿಂದ ಕಳೆದ ರಾತ್ರಿ ಮೈಸೂರಿಗೆ ಆಗಮಿಸಿದ್ದ ಸಿದ್ದರಾಮಯ್ಯ ಮೈಸೂರಿನ ನಿವಾಸದಲ್ಲಿದ್ದರು. ಇಂದು ಬೆಳಗ್ಗೆ ಮೂರು ಸುತ್ತಿನಲ್ಲೂ ಮುನ್ನಡೆ ಕಾಯ್ದುಕೊಂಡ ಮಾಹಿತಿ ತಿಳಿಯುದ್ದಂತೆಯೇ ಬೆಳಗ್ಗೆ 10.25ಕ್ಕೆ ಮತ ಎಣಿಕಾ ಕೇಂದ್ರಕ್ಕೆ ಎಂಟ್ರಿಕೊಟ್ಟ ಸಿದ್ದರಾಮಯ್ಯ ಅವರನ್ನು ಪೊಲೀಸರು ಹಾಗೂ ಭದ್ರತಾ ಸಿಬ್ಬಂದಿ ಬಿಗಿ ಭದ್ರತೆಯಲ್ಲಿ ಎಣಿಕಾ ಕೇಂದ್ರಕ್ಕೆ ಕರೆ ತಂದರು.

ಗ್ರಾಂಡ್ ಎಂಟ್ರಿ ಕೊಟ್ಟ ಸಿದ್ದರಾಮಯ್ಯ ಅವರಿಗೆ ಕೆಲವು ಮುಖಂಡರು ಸಾಥ್ ನೀಡಿದರು. ಕೆಲ ಸಮಯ ಮತ ಎಣಿಕಾ ಕಾರ್ಯವನ್ನು ವೀಕ್ಷಿಸಿದರು. ನಂತರ ಮತಗಟ್ಟೆಯಿಂದ ಮನೆಯತ್ತ ತೆರಳಿದರು.



ಕೃಷ್ಣರಾಜ ಕ್ಷೇತ್ರದ ನೂತನ ಶಾಸಕ ಟಿ.ಎಸ್.ಶ್ರೀವತ್ಸ ಅವರನ್ನು ಮುಡಾ ಮಾಜಿ ಸದಸ್ಯೆ ಲಕ್ಷ್ಮೀದೇವಿ, ಮುಖಂಡರಾದ ವೆಂಕಟೇಶ್ ಪ್ರಸಾದ್, ಉಪೇಂದ್ರ, ಅಭಿಷೇಕ್, ಕಾವೇರಿ ಇನ್ನಿತರರು ಶನಿವಾರ ಬಿಜೆಪಿ ಕಚೇರಿಯಲ್ಲಿ ಅಭಿನಂದಿಸಿದರು.

ಮೈಸೂರು ಜಿಲ್ಲೆಯಲ್ಲಿ 12,575 ಮಂದಿ ನೋಟಾ ಮೂಲಕ ಅಭ್ಯರ್ಥಿಗಳಿಗೆ ಪಾಠ!

ಮೈಸೂರು, ಮೇ 13(ಆರ್‌ಕೆ)–ಕಣದಲ್ಲಿರುವ ಯಾವ ಅಭ್ಯರ್ಥಿ ಬಗ್ಗೆಯೂ ಆಸಕ್ತಿ, ವಿಶ್ವಾಸ ಇಲ್ಲದ 12,575 ಮಂದಿ ಮೈಸೂರು ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳಲ್ಲಿ ನೋಟಾ (None of the Above)ಗೆ ಮತ ಚಲಾಯಿಸಿದ್ದಾರೆ.

ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅತೀ ಹೆಚ್ಚು 2,220 ಮಂದಿ ನೋಟಾಗೆ ಮತ ಚಲಾಯಿಸಿದರೆ, ನಂಜನಗೂಡು ಕ್ಷೇತ್ರದಲ್ಲಿ 1,452 ಮತದಾರರು ನೋಟಾ ಆಯ್ಕೆ ಮಾಡಿದ್ದಾರೆ. ಉಳಿದಂತೆ ತಿ.ನರಸೀಪುರದಲ್ಲಿ 1,335, ಕೃಷ್ಣರಾಜದಲ್ಲಿ 1,306, ನರಸಿಂಹರಾಜದಲ್ಲಿ 1,209, ಹೆಚ್.ಡಿ.ಕೋಟೆಯಲ್ಲಿ 1,184, ಚಾಮರಾಜದಲ್ಲಿ 1,181, ಹುಣಸೂರಿನಲ್ಲಿ 894, ವರುಣ ಕ್ಷೇತ್ರದಲ್ಲಿ 634, ಪಿರಿಯಾಪಟ್ಟಣದಲ್ಲಿ 621 ಹಾಗೂ ಕೆ.ಆರ್.ನಗರ ಕ್ಷೇತ್ರದಲ್ಲಿ 539 ಮತದಾರರು ಯಾವುದೇ ಅಭ್ಯರ್ಥಿಗಳಿಗೆ ಮಣೆ ಹಾಕದೆ ನೋಟಾ ಬಟನ್ ಒತ್ತುವ ಮೂಲಕ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಬಾರಿ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಜ್ಞಾವಂತಿಕೆಯಿಂದ ಮತ ಚಲಾವಣೆ ಮಾಡಿರುವ ನಾಗರಿಕರು ತಮಗೆ ಆ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳ ಮೇಲೆ ವಿಶ್ವಾಸ ಇಲ್ಲ ಎಂಬುದನ್ನು ನೋಟಾ ಒತ್ತುವ ಮೂಲಕ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದು, ಜಿಲ್ಲೆಯಲ್ಲಿ 12,575 ಮಂದಿ ನೋಟಾಗೆ ಹಕ್ಕು ಚಲಾಯಿಸಿದ್ದಾರೆ.

ರಾಜ್ಯದ ಚುನಾವಣಾ ಫಲಿತಾಂಶ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಎಚ್ಚರಿಕೆ ಗಂಟೆ

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ, ಬಿಜೆಪಿ ವಿರುದ್ಧ ಜನಾದೇಶ

ಕೇಂದ್ರದಲ್ಲಿ ಬಿಜೆಪಿಯೇತರ ಸರ್ಕಾರ ಖಚಿತ; ಭವಿಷ್ಯ ನುಡಿದ ವಿಪಕ್ಷ ನಾಯಕ ಸಿದ್ದರಾಮಯ್ಯ

ಮೈಸೂರು,ಮೇ 13(ಪಿಎಂ)– ರಾಜ್ಯದ ಈ ಚುನಾವಣೆಯ ಫಲಿತಾಂಶವು ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಎಚ್ಚರಿಕೆಯ ಗಂಟೆ. ಅಲ್ಲದೆ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಇಡೀ ದೇಶದಲ್ಲಿ ಮೋದಿ ಮತ್ತು ಬಿಜೆಪಿ ವಿರುದ್ಧ ಮತ ಚಲಾವಣೆ ಆಗುತ್ತದೆ. ಬಿಜೆಪಿಯೇತರ ಸರ್ಕಾರ ಬಂದೇ ಬರುವುದರ ಸಂದೇಶವೂ ಹೌದು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭವಿಷ್ಯ ನುಡಿದರು.

ಮೈಸೂರಿನ ಟಿ.ಕೆ.ಬಡಾವಣೆಯಲ್ಲಿರುವ ತಮ್ಮ ನಿವಾಸದಲ್ಲಿ ಶನಿವಾರ ಫಲಿತಾಂಶದ ಬಳಿಕ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಈ ಚುನಾವಣಾ ಫಲಿತಾಂಶವು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ವಿರುದ್ಧದ ಜನಾದೇಶ. ಜೊತೆಗೆ ಮುಂದಿನ ಲೋಕಸಭಾ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದರು.

ಇದೇ ಜನಾದೇಶ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬರಲಿದೆಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಇದಕ್ಕಿಂತ ಜಾಸ್ತಿಯಾಗಲಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ರಾಹುಲ್ ಗಾಂಧಿಯವರ ಭಾರತ ಐಕ್ಯತಾ ಯಾತ್ರೆಯೂ ಕಾಂಗ್ರೆಸ್‌ಗೆ ಅನುಕೂಲಕರ ವಾತಾವರಣ ಉಂಟು ಮಾಡಿತು. ಜನರ ಕಷ್ಟ ಅರಿತು ಸ್ಪಂದಿಸಲು ನೆರವಾಯಿತು. ಮುಂಬರುವ ಲೋಕಸಭಾ ಚುನಾವಣೆಗೆ ಈ ಫಲಿತಾಂಶವು ಮೆಟ್ಟಿಲಾಗಲಿದ್ದು, ರಾಹುಲ್ ಗಾಂಧಿಯವರು ಈ ದೇಶದ ಪ್ರಧಾನಿಯಾಗಲಿ ಎಂದು ಬಯಸುತ್ತೇನೆ ಎಂದರು.

ಕಾಂಗ್ರೆಸ್ ಮುಕ್ತ ಅಸಾಧ್ಯ: ದೇಶದಲ್ಲಿ ಕಾಂಗ್ರೆಸ್ ಇಲ್ಲ ಎನ್ನುವ ವಿಚಾರ ಚರ್ಚೆ ಆಗುತ್ತಿತ್ತು. ರಾಜ್ಯದ ಈ ಗೆಲುವು ನಿಮ್ಮ ಹೈಕಮಾಂಡ್‌ಗೆ ಎಷ್ಟರ ಮಟ್ಟಿಗೆ ಬಲ ತುಂಬಲಿದೆ? ಎಂಬ ಪ್ರಶ್ನೆಗೆ ಕಾಂಗ್ರೆಸ್ ಮುಕ್ತ ಮಾಡುತ್ತೇವೆ ಎನ್ನುತ್ತಿದ್ದರು. ಅದು ಸಾಧ್ಯವಿಲ್ಲ. ಕೆಲವು ರಾಜ್ಯಗಳಲ್ಲೂ ಬಿಜೆಪಿ ಅಧಿಕಾರದಲ್ಲಿ ಇಲ್ಲ. ಪಶ್ಚಿಮ ಬಂಗಾಳ, ಪಂಜಾಬ್, ಒಡಿಶಾ, ಬಿಹಾರ, ಕೇರಳ, ತಮಿಳುನಾಡು, ತೆಲಂಗಾಣ, ದೆಹಲಿ ಸೇರಿ ದಂತೆ ಹಲವು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿ ಇಲ್ಲ. ಮಧ್ಯಪ್ರದೇಶದಲ್ಲಿ ಆಪರೇಷನ್ ಕಮಲ ಮಾಡಿ ಅಧಿಕಾರ ಹಿಡಿದರು ಎಂದು ಹೇಳಿದರು.



ಮೈಸೂರಿನ ಟಿ.ಕೆ.ಬಡಾವಣೆಯಲ್ಲಿರುವ ತಮ್ಮ ನಿವಾಸದಲ್ಲಿ ಶನಿವಾರ ಚುನಾವಣೆ ಫಲಿತಾಂಶದ ಬಳಿಕ ಮಾಧ್ಯಮದವರೊಂದಿಗೆ ವಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿದರು.

ತೊಲಗಿದರೆ ಸಾಕು ಎಂಬ ಭಾವನೆ ಜನತೆಯಲ್ಲಿತ್ತು: ನಾನು ನನ್ನ ಚುನಾವಣಾ ಪ್ರಚಾರದಲ್ಲಿ ಕಾಂಗ್ರೆಸ್ 130 ಸ್ಥಾನ ಗಳಿಸುತ್ತದೆ ಎಂದು ಹೇಳುತ್ತಿದ್ದೆ. ಅಲ್ಲದೆ ಇದನ್ನು ಹೈಕಮಾಂಡ್‌ಗೂ ಹೇಳಿದ್ದೆ. ಆ ಮೂಲಕ ಕಾಂಗ್ರೆಸ್ ಪಕ್ಷ ಬಹುಮತದೊಂದಿಗೆ ಸರ್ಕಾರ ರಚನೆ ಮಾಡುತ್ತದೆ ಎಂದು ಹೇಳಿದ್ದೆ. ಅದು ಸತ್ಯವಾಗಿದೆ. ಜನತೆ ಬದಲಾವಣೆ ಬಯಸಿದ್ದರು. ಏಕೆಂದರೆ ರಾಜ್ಯ ಬಿಜೆಪಿ ಸರ್ಕಾರದ ವ್ಯಾಪಕ ಭ್ರಷ್ಟಾಚಾರ ಇದಕ್ಕೆ ಕಾರಣ ಎಂದರು.

ಸೋಲುವುದು ಗೊತ್ತಿದ್ದರೂ ಸುಳ್ಳು: ಈ ಹಿನ್ನೆಲೆಯಲ್ಲಿ ಬಿಜೆಪಿಗೆ ರಾಜ್ಯದ ಜನತೆ ತಕ್ಕ ಪಾಠ ಕಲಿಸಿದ್ದಾರೆ. ಮೋದಿ, ಶಾ, ನಡ್ಡಾ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ 150 ಸ್ಥಾನಗಳನ್ನು ಗೆಲ್ಲುತ್ತೇವೆ ಎನ್ನುತ್ತಿದ್ದರು. ಅದು ಸಾಧ್ಯವಿಲ್ಲವೆಂದು ಅವರಿಗೆ ಗೊತ್ತಿದ್ದೂ ಸುಳ್ಳು ಹೇಳುತ್ತಿದ್ದರು. ಏಕೆಂದರೆ ಅಮಿತ್ ಶಾ ಅವರ ಬಳಿಯೇ ಕೇಂದ್ರ ಗೃಹ ಖಾತೆ ಇದೆ. ಬಹಳಷ್ಟು ಇಂಟೆಲಿಜನ್ಸ್ ಏಜೆನ್ಸಿಗಳು ಅವರ ಸಂಪರ್ಕದಲ್ಲಿವೆ. ಹಾಗಾಗಿ ಸೋಲುತ್ತೇವೆ ಎಂಬುದು ಅವರಿಗೆ ಗೊತ್ತಿತ್ತು. ಆದರೂ ಹಣ ಬಲದಿಂದ ಗೆಲ್ಲಬೇಕು ಎಂದು ಪ್ರಯತ್ನ ಮಾಡಿದರು. ಆದರೆ ಜನ ಬಿಜೆಪಿಯನ್ನು ಸೋಲಿಸಲೇಬೇಕು ಎಂದು ನಿರ್ಧರಿಸಿದ್ದರು ಎಂದು ತಿಳಿಸಿದರು.

> ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳ ಬಗ್ಗೆ ಮೋದಿಯವರು ಅದು ಸಾಧ್ಯವಿಲ್ಲ. ಈ ಯೋಜನೆಗಳನ್ನು ಅನುಷ್ಠಾನಗೊಳಿಸಿದರೆ ರಾಜ್ಯ ಆರ್ಥಿಕವಾಗಿ ದಿವಾಳಿ ಆಗಲಿದೆ ಎಂದು ಲಘುವಾಗಿ ಮಾತನಾಡಿದ್ದರು. ನಾನು 13 ಬಜೆಟ್ ಮಂಡಿಸಿದ್ದು, ರಾಜ್ಯದ ಆರ್ಥಿಕ ಪರಿಸ್ಥಿತಿ ನನಗೆ ಗೊತ್ತಿದೆ. ಆದರೆ ಅವರಿಗೆ ಗೊತ್ತಿಲ್ಲ. –ಸಿದ್ದರಾಮಯ್ಯ

ಮೋದಿ ಪ್ರಚಾರ ರ್‍ಯಾಲಿ ಮಾಡಿದ್ದರ ಬಗ್ಗೆ ಪ್ರತಿಕ್ರಿಯಿಸಿ, ಮೋದಿಯವರ ಪ್ರಭಾವ ಏನೇನೂ ನಡೆದಿಲ್ಲ. 100 ಬಾರಿ ನರೇಂದ್ರ ಮೋದಿ ಬಂದರೂ ರಾಜ್ಯದ ಮತದಾರರ ಮೇಲೆ ಪರಿಣಾಮ ಉಂಟಾಗಲ್ಲ ಎಂದು ಮೊದಲೇ ಹೇಳಿದ್ದೆ. 20 ರ್‍ಯಾಲಿಗಳನ್ನು ರಾಜ್ಯದಲ್ಲಿ ಮೋದಿ ನಡೆಸಿದರು. ಅದು ಪ್ರಯೋಜನವಾಗಲಿಲ್ಲ ಎಂದು ನುಡಿದರು.

> ಕರ್ನಾಟಕದ ಇತಿಹಾಸದಲ್ಲೇ ಕಂಡು ಕೇಳರಿಯದಷ್ಟು ರಾಜ್ಯ ಬಿಜೆಪಿ ಸರ್ಕಾರ ಭ್ರಷ್ಟಾಚಾರ ನಡೆಸಿತು. ಈ ಸರ್ಕಾರ 40 ಪರ್ಸೆಂಟ್ ಸರ್ಕಾರ ಎಂದು ಆರೋಪಿಸಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಪ್ರಧಾನಿಗಳಿಗೆ ಪತ್ರ ಬರೆದಿದ್ದರು. ರುಪ್ಸಾದವರು (ಅನುದಾನರಹಿತ ಶಿಕ್ಷಣ ಸಂಸ್ಥೆಗಳ ಒಕ್ಕೂಟ) ಪ್ರಧಾನಿಗಳಿಗೆ ಪತ್ರ ಬರೆದು ಈ ಸರ್ಕಾರ 40 ಪರ್ಸೆಂಟ್ ಕಮಿಷನ್ ಕೇಳುತ್ತಿದೆ ಎಂದು ಆರೋಪಿಸಿದರು. ಆದರೆ ಮೋದಿಯವರು ಕ್ರಮ ತೆಗೆದುಕೊಳ್ಳಲಿಲ್ಲ. ಇವರ ಭ್ರಷ್ಟಾಚಾರದಿಂದ ರಾಜ್ಯದ ಜನತೆ ಬೇಸತ್ತಿದ್ದರು. ಬಿಜೆಪಿ ಸರ್ಕಾರ ತೊಲಗಿದರೆ ಸಾಕು ಎಂಬ ಭಾವನೆ ರಾಜ್ಯದ ಜನತೆಯಲ್ಲಿ ಮೂಡಿತ್ತು.
> –ಸಿದ್ದರಾಮಯ್ಯ, ಮಾಜಿ ಸಿಎಂ.

ಕಳೆದ ಬಾರಿ ಆಪರೇಷನ್ ಕಮಲಕ್ಕೆ ಒಳಗಾಗಿದ್ದವರಲ್ಲಿ ಹಲವರು ಸೋಲು ಕಂಡಿರುವ ಬಗ್ಗೆ ಪ್ರತಿಕ್ರಿಯಿಸಿ, ಸುಧಾಕರ್ ಸೇರಿದಂತೆ ಹಲವರು ಸೋತಿದ್ದಾರೆ. ಕೆಲವರು ಗೆದ್ದಿದ್ದು, ಅವರು ಹಣ ಖರ್ಚು ಮಾಡಿ ಗೆದ್ದಿದ್ದಾರೆ ಎಂದರು.

ಕಾಂಗ್ರೆಸ್‌ಗೆ ಸಂಪನ್ಮೂಲ ಕೊರತೆಯಿಂದ ಒಂದಷ್ಟು ಹಿನ್ನಡೆಯಾಯಿತೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಬಿಜೆಪಿಯವರು ಒಬ್ಬ ಅಭ್ಯರ್ಥಿಗೆ 10 ಕೋಟಿವರೆಗೆ ಕೊಟ್ಟಿದ್ದಾರೆ. ಆದರೆ ಕೊಡಲು ನಮ್ಮಲ್ಲಿ ಎಲ್ಲಿದೆ ಹಣ. ನಾವು ನಮ್ಮ ಅಭ್ಯರ್ಥಿಗಳಿಗೆ ಬಿ ಫಾರಂ ಕೊಟ್ಟು ಸಣ್ಣಪುಟ್ಟ ಸಹಾಯ ಮಾಡಿದೆವು ಎಂದು ತಿಳಿಸಿದರು.

ಸಿಎಂ ನೀವೇನಾ: ನೀವೇ ಮುಖ್ಯಮಂತ್ರಿ ಆಗುತ್ತೀರಾ? ಎಂಬುದಕ್ಕೆ ಪ್ರತಿಕ್ರಿಯಿಸಿ, ಶಾಸಕರಾಗಿ ಆಯ್ಕೆಯಾದವರು ತಮ್ಮ ಅಭಿಪ್ರಾಯ ನೀಡಲಿದ್ದು, ಆ ಬಳಿಕ ಹೈಕಮಾಂಡ್ ಈ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಲಿದೆ. ಭಾನುವಾರ ಶಾಸಕಾಂಗ ಸಭೆ ಸಭೆ ನಡೆಸಲು ಉದ್ದೇಶಿಸಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ ತವರಲ್ಲಿ ಹಲವೆಡೆ ವಿಜಯೋತ್ಸವ

ಮೈಸೂರು,ಮೇ 13 (ಎಂಟಿವೈ)– ಹೈವೋಲ್ಟೇಜ್ ಕ್ಷೇತ್ರ ಎನಿಸಿದ್ದ ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಸಿಎಂ ಸಿದ್ದರಾಮಯ್ಯ ಅಭೂತಪೂರ್ವ ಗೆಲುವು ಸಾಧಿಸುತ್ತಿದ್ದಂತೆ ವರುಣ ಕ್ಷೇತ್ರದ ಹಲವು ಗ್ರಾಮಗಳಲ್ಲಿ ಅವರ ಅಭಿಮಾನಿಗಳು ಸಂಭ್ರಮಿಸಿದ್ದಾರೆ.

ವಿಪಕ್ಷ ನಾಯಕ ಸಿದ್ದರಾಮಯ್ಯ ಗೆಲುವಿಗೆ ವರುಣ ಕ್ಷೇತ್ರದಲ್ಲಿ ಎಲ್ಲಾ ಜಾತಿ–ಜನಾಂಗದ ಮತದಾರರು ಸಾಥ್ ನೀಡಿದ್ದು, ಗೆಲುವಿನ ಸಂಭ್ರಮದಲ್ಲಿ ಭಾಗಿಯಾಗುವ ಮೂಲಕ ನೆಚ್ಚಿನ ನಾಯಕನ ಗೆಲುವನ್ನು ವಿಶಿಷ್ಟವಾಗಿ ಆಚರಿಸಿದ್ದಾರೆ. ಫಲಿತಾಂಶ ಪ್ರಕಟವಾಗುತ್ತಿದ್ದಂತೆಯೇ ಸಿದ್ದರಾಮಯ್ಯ ಅವರ ಭಾವಚಿತ್ರವುಳ್ಳ ದೊಡ್ಡ ಕಟೌಟ್ ಮಾಡಿಸಿಕೊಂಡು ಗ್ರಾಮಗಳಲ್ಲಿ ಪ್ರತಿಷ್ಠಾಪಿಸಿ ಹೂವಿನ ಹಾರ ಹಾಕಿ ಸಂಭ್ರಮಿಸಿದ್ದಾರೆ.



ಕೆಲವು ಗ್ರಾಮಗಳಲ್ಲಿ ಸಿದ್ದರಾಮಯ್ಯ ಅವರ ಗೆಲುವಿಗೆ ಶ್ರೀರಾಮಮಂದಿರ ಹಾಗೂ ಗ್ರಾಮ ದೇವರ ಗುಡಿಯಲ್ಲಿ ಪೂಜೆ ಸಲ್ಲಿಸುವ ಮೂಲಕ ದೇವರ ಮೊರೆ ಹೋದ ಅಭಿಮಾನಿಗಳು ಸಿದ್ದರಾಮಯ್ಯಗೆ ಉನ್ನತ ಸ್ಥಾನಮಾನ ಸಿಗಲಿ, ಮುಂದಿನ ಮುಖ್ಯಮಂತ್ರಿಯಾಗಲಿ ಎಂದು ಪ್ರಾರ್ಥಿಸಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಸಮಾನಾಂತರ ಸ್ಪರ್ಧೆ ಏರ್ಪಡುತ್ತದೆ ಎಂದು ಭಾವಿಸಲಾಗಿತ್ತು. ಕ್ಷೇತ್ರದ ಪ್ರತಿಯೊಂದು ಗ್ರಾಮದಲ್ಲೂ ಬಿಜೆಪಿ ಹಾಗೂ ಕಾಂಗ್ರೆಸ್ ರೋಡ್ ಶೋ ನಡೆಸುವ ಮೂಲಕ ಬಿರುಸಿನ ಪ್ರಚಾರದಲ್ಲಿ ತೊಡಗಿತ್ತು. ಈ ಹಿನ್ನೆಲೆಯಲ್ಲಿ ವಿಜಯದ ಮಾಲೆ ಯಾರಿಗೆ ಒಲಿಯುತ್ತದೋ ಎಂಬ ಪ್ರಶ್ನೆ ಬಹುತೇಕರಲ್ಲಿ ಮೂಡಿತ್ತು. ಆದರೆ, ಪ್ರಕಟವಾದ ಫಲಿತಾಂಶ ಕ್ಷೇತ್ರದ ಜನರಲ್ಲಿ ಹಬ್ಬದ ವಾತಾವರಣವನ್ನುಂಟು ಮಾಡಿದೆ. ಹಾಗಾಗಿ ಕ್ಷೇತ್ರದ ಹಲವೆಡೆ ಸಂಭ್ರಮ ಮನೆ ಮಾಡಿದೆ.




ಕರ್ನಾಟಕದಲ್ಲಿ ಕಾಂಗ್ರೆಸ್ ಬಹುಮತ ಪಡೆದು ಅಧಿಕಾರ ಹಿಡಿಯುತ್ತಿರುವ ಹಿನ್ನೆಲೆಯಲ್ಲಿ ಶನಿವಾರ ಬೆಂಗಳೂರಿನಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ, ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ ಶುಭಾಶಯ ಕೋರಿದರು.



ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ ಶಾಸಕ ಜಿ.ಟಿ.ದೇವೇಗೌಡರನ್ನು ಹಾಸ್ಯನಟ ಚಿಕ್ಕಣ್ಣ, ಉದ್ಯಮಿ ಅಂಬಾರಿ ಪ್ರದೀಪ್, ಸ್ವೀಟ್ ಮಹೇಶ್ ಆತ್ಮೀಯವಾಗಿ ಅಭಿನಂದಿಸಿದರು.

ಸಾಕಷ್ಟು ಶ್ರಮ ಹಾಕಿದರೂ ಬಿಜೆಪಿ ಗೆಲ್ಲಲಿಲ್ಲ



ಹುಬ್ಬಳ್ಳಿ: ಚುನಾವಣೆಯಲ್ಲಿ ಸಾಕಷ್ಟು ಪ್ರಯತ್ನ ಹಾಕಿದರೂ ಬಿಜೆಪಿಗೆ ಗೆಲುವು ಸಾಧ್ಯವಾಗಲಿಲ್ಲ ಎಂದು ಸಿಎಂ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷವನ್ನು ಸಂಘಟಿಸಿ ಮತ್ತೆ ಅಧಿಕಾರಕ್ಕೆ ಬರುತ್ತೇವೆ. ಮುಂದಿನ ವರ್ಷ ಲೋಕಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಲು ಪರಿಶ್ರಮ ಹಾಕುತ್ತೇವೆ ಎಂದರು.

ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡವರು

ಮೈಸೂರು,ಮೇ 13 (ಎಂಟಿವೈ)– ಮತ ಎಣಿಕಾ ಕಾರ್ಯದ ವೇಳೆ ಮೈಸೂರು ಜಿಲ್ಲೆಯ 11 ಕ್ಷೇತ್ರಗಳಲ್ಲಿ 8 ಕ್ಷೇತ್ರಗಳ ಅಭ್ಯರ್ಥಿಗಳು ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡೇ ಗೆಲುವಿನ ನಗೆ ಬೀರಿದರು. ಮೈಸೂರಿನ ಚಾಮರಾಜ, ಕೆ.ಆರ್.ನಗರ, ತಿ.ನರಸೀಪುರ ಕ್ಷೇತ್ರ ಹೊರತುಪಡಿಸಿದರೆ ಉಳಿದ ಯಾವ ಕ್ಷೇತ್ರಗಳಲ್ಲೂ ಬಿರುಸಿನ ಪೈಪೋಟಿ ಕಂಡು ಬರಲಿಲ್ಲ. ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡ, ಪಿರಿಯಾಪಟ್ಟಣದಲ್ಲಿ ಕೆ.ವೆಂಕಟೇಶ್, ಹೆಚ್.ಡಿ.ಕೋಟೆಯಲ್ಲಿ ಅನಿಲ್ ಚಿಕ್ಕಮಾದು, ಹುಣಸೂರು ಕ್ಷೇತ್ರದಲ್ಲಿ ಜಿ.ಡಿ.ಹರೀಶ್‌ಗೌಡ, ನರಸಿಂಹರಾಜ ಕ್ಷೇತ್ರದಲ್ಲಿ ತನ್ವೀರ್ ಸೇಠ್, ಕೆ.ಆರ್.ಕ್ಷೇತ್ರದಲ್ಲಿ ಶ್ರೀವತ್ಸ, ನಂಜನಗೂಡು ಕ್ಷೇತ್ರ ದರ್ಶನ್ ಧ್ರುವನಾರಾಯಣ್ ಅವರು ಮೊದಲ ಸುತ್ತಿನಿಂದಲೂ ಮುನ್ನಡೆ ಕಾಯ್ದುಕೊಂಡು ಜಯ ಗಳಿಸಿದರು. ಇದರಿಂದ ಈ 8 ಕ್ಷೇತ್ರಗಳ ಎಣಿಕೆ ನೀರಸ ಪ್ರಕ್ರಿಯೆಯಂತೆ ಸಾಗಿತು.

ತ್ರಿಕೋನ ಸ್ಪರ್ಧೆಯೇ ಇಲ್ಲ: ಮೈಸೂರು ಜಿಲ್ಲೆಯಲ್ಲಿ ವರುಣ ಹಾಗೂ ನಂಜನಗೂಡು ಕ್ಷೇತ್ರವನ್ನು ಹೊರತುಪಡಿಸಿ ಉಳಿದ ಎಲ್ಲಾ ಕ್ಷೇತ್ರಗಳನ್ನು ಗೆಲ್ಲಲೇಬೇಕು ಎಂದು ಮೂರು ಪಕ್ಷಗಳು ಪಣತೊಟ್ಟಿದ್ದವು. ಇದರಿಂದ ತ್ರಿಕೋನ ಸ್ಪರ್ಧೆ ಏರ್ಪಡುತ್ತದೆ ಎಂದು ಭಾವಿಸಲಾಗಿತ್ತು. ಆದರೆ, ಮತ ಎಣಿಕೆ ವೇಳೆ ಇಬ್ಬರ ನಡುವೆ ಮಾತ್ರ ಸ್ಪರ್ಧೆ ಇರುವುದು ಕಂಡು ಬಂದಿತು. ಮೈಸೂರಿನ ಎನ್.ಆರ್.ಕ್ಷೇತ್ರ ಹಾಗೂ ವರುಣ ಕ್ಷೇತ್ರದಲ್ಲಿ ಮಾತ್ರ ಬಿಜೆಪಿ ಪ್ರತಿಸ್ಪರ್ಧಿಗಳು ಸ್ಪರ್ಧೆಯೊಡ್ಡಿದರೆ, ಕೆಲವು ಕ್ಷೇತ್ರಗಳಲ್ಲಿ ಜೆಡಿಎಸ್‌ನ ಸ್ಪರ್ಧಿಗಳು ಪೈಪೋಟಿ ನೀಡಿದರು.

ಬಾಂಬೆ ಬಾಯ್ಸ್ ಟೀಮ್‌ನಲ್ಲಿ ಗೆದ್ದವರೆಷ್ಟು, ಸೋತವರೆಷ್ಟು?

ಬೆಂಗಳೂರು: 2019ರಲ್ಲಿ ಕಾಂಗ್ರೆಸ್–ಜೆಡಿಎಸ್ ದೋಸ್ತಿ ಸರ್ಕಾರದಲ್ಲಿ ಶಾಸಕರಾಗಿದ್ದವರು ನಂತರ ಆಪರೇಷನ್ ಕಮಲಕ್ಕೆ ಒಳಗಾಗಿ ಮುಂಬೈಗೆ ತೆರಳಿದ ಶಾಸಕರ ಪೈಕಿ ಎಷ್ಟು ಮಂದಿ ಗೆದ್ದಿದ್ದಾರೆ, ಎಷ್ಟು ಮಂದಿ ಸೋತಿದ್ದಾರೆ ಎಂಬುದು ಕುತೂಹಲಕಾರಿ ಅಂಶ. ಕಾಂಗ್ರೆಸ್, ಜೆಡಿಎಸ್ ಪಕ್ಷಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿ ಸಚಿವರಾಗಿದ್ದವರ ಪೈಕಿ ಹಲವರಿಗೆ ಮತದಾರರು ಪಾಠ ಕಲಿಸಿದ್ದಾರೆ.

ಗೆದ್ದವರು

ಗೋಪಾಲಯ್ಯ – ಮಹಾಲಕ್ಷ್ಮಿ ಲೇಔಟ್, ಮುನಿರತ್ನ ನಾಯ್ಡು, –ರಾಜರಾಜೇಶ್ವರಿ ನಗರ, ಎಸ್.ಟಿ.ಸೋಮಶೇಖರ್–ಯಶವಂತಪುರ, ಭೈರತಿ ಬಸವರಾಜ್ – ಕೆ.ಆರ್.ಪುರ, ರಮೇಶ್ ಜಾರಕಿಹೊಳಿ – ಗೋಕಾಕ, ಶಿವರಾಮ್ ಹೆಬ್ಬಾರ್ – ಯಲ್ಲಾಪುರ,

ಸೋತವರು


ಡಾ.ಕೆ. ಸುಧಾಕರ್ –ಚಿಕ್ಕಬಳ್ಳಾಪುರ, ಮಹೇಶ್ ಕುಮಟಳ್ಳಿ – ಅಥಣಿ, ಶ್ರೀಮಂತ ಪಾಟೀಲ್ – ಕಾಗವಾಡ, ಪ್ರತಾಪ್ ಗೌಡ ಪಾಟೀಲ್ – ಮಸ್ಕಿ, ಎಂಟಿಬಿ ನಾಗರಾಜ್ – ಹೊಸಕೋಟೆ, ಕೆ.ಸಿ. ನಾರಾಯಣಗೌಡ – ಕೆ.ಆರ್. ಪೇಟೆ

ಹಲವು ನಾಯಕರನ್ನು ಮಕಾಡೆ ಮಲಗಿಸಿದ ಮತದಾರ; ಬೊಮ್ಮಾಯಿ ಸಂಪುಟದ ಹತ್ತಕ್ಕೂ ಹೆಚ್ಚು ಸಚಿವರಿಗೆ ಮುಖಭಂಗ: ಮೂರೂ ಪಕ್ಷದ ಹಲವರಿಗೆ ಸೋಲು

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಯ ಮತ ಎಣಿಕೆ ಕಾರ್ಯ ನಡೆದಿದ್ದು, ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿದ್ದ ಹಲವು ಹಾಲಿ ಸಚಿವರು ಸೋಲುಕಂಡಿದ್ದಾರೆ.

2018ರ ವಿಧಾನಭಾ ಚುನಾವಣೆಯಲ್ಲೂ ಸಹ ಸಿದ್ದರಾಮಯ್ಯ ಸಂಪುಟದ ಬಹುತೇಕ ಸಚಿವರು ಸೋತಿದ್ದರು. ಇದೀಗ ಬೊಮ್ಮಾಯಿ ಸಂಪುಟದ ಸಚಿವರಿಗೂ ಇದೇ ಪರಿಸ್ಥಿತಿ ಬಂದಿದೆ. ಆಡಳಿತ ವಿರೋಧಿ ಅಲೆ ಇಲ್ಲಿ ಪ್ರಮುಖವಾಗಿ ಕೆಲಸ ಮಾಡಿದೆ.

ಚಿಕ್ಕಬಳ್ಳಾಪುರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಆರೋಗ್ಯ ಸಚಿವ ಡಾ. ಕೆ ಸುಧಾಕರ್ ಕಾಂಗ್ರೆಸ್‌ನ ಪ್ರದೀಪ್ ಈಶ್ವರ್ ವಿರುದ್ಧ ಸೋಲನುಭವಿಸಿದ್ದಾರೆ. ಬಳ್ಳಾರಿ ಗ್ರಾಮಾಂತರದಿಂದ ಸ್ಪರ್ಧಿಸಿದ್ದ ಸಾರಿಗೆ ಸಚಿವ ಶ್ರೀರಾಮುಲು ಕೂಡ ಪರಾಭವಗೊಂಡಿದ್ದಾರೆ. ಕೆಆರ್ ಪೇಟೆ ಕ್ಷೇತ್ರದಲ್ಲಿ ಕಣಕ್ಕಿಳಿದಿದ್ದ ಕ್ರೀಡಾ ಸಚಿವ ನಾರಾಯಣಗೌಡ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ. ಗೋವಿಂದ ಕಾರಜೋಳ ಮುಧೋಳ ಕ್ಷೇತ್ರದಲ್ಲಿ, ವಿ.ಸೋಮಣ್ಣ ಅವರು ಚಾಮರಾಜನಗರ ಮತ್ತು ವರುಣ ಕ್ಷೇತ್ರದಲ್ಲಿ, ಬೀಳಗಿ ಕ್ಷೇತ್ರದಲ್ಲಿ ಮುರುಗೇಶ್ ನಿರಾಣಿ, ಜೆಸಿ ಮಾಧುಸ್ವಾಮಿ–ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಸೋಲುಂಡಿದ್ದಾರೆ. ಹಾಲಿ ಸಚಿವ ಎಂಟಿಬಿ ನಾಗರಾಜ್ ಕೂಡ ಹೊಸಪೇಟೆಯಲ್ಲಿ ಸೋಲನುಭವಿಸಿದರು. ತಿಪಟೂರು ಕ್ಷೇತ್ರದಲ್ಲಿ ಬಿ.ಸಿ.ನಾಗೇಶ್, ಹಿರೇಕೆರೂರು ಕ್ಷೇತ್ರದಲ್ಲಿ ಬಿ.ಸಿ.ಪಾಟೀಲ್ ಮತದಾರರಿಂದ ತಿರಸ್ಕೃತಗೊಂಡಿದ್ದಾರೆ. ಯಲಬುರ್ಗಾ ಕ್ಷೇತ್ರದಲ್ಲಿ ಹಾಲಪ್ಪ ಆಚಾರ್, ನವಲಗುಂದದಲ್ಲಿ ಶಂಕರ್ ಪಾಟೀಲ್ ಮುನೇನಕೊಪ್ಪ ಕೂಡ ಸೋತಿದ್ದಾರೆ.



ಕನಕಪುರದಿಂದ ಡಿ.ಕೆ.ಶಿವಕುಮಾರ್ ವಿರುದ್ಧ ಸ್ಪರ್ಧಿಸಿದ್ದ ಕಂದಾಯ ಸಚಿವ ಆರ್. ಅಶೋಕ್ ಸೋಲನುಭವಿಸಿದ್ದಾರೆ. ಆದರೆ ಪದ್ಮನಾಭನಗರದಿಂದ ಸ್ಪರ್ಧಿಸಿದ್ದ ಆರ್. ಅಶೋಕ್ ಗೆಲುವು ಸಾಧಿಸಿದ್ದಾರೆ.

ಇದಲ್ಲದೇ, ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನಾಯಕರಿಗೂ ರಾಜ್ಯದ ಜನತೆ ಮನೆ ಬಾಗಿಲು ತೋರಿಸಿದ್ದಾರೆ. ಸಿ.ಟಿ.ರವಿ, ಎನ್.ಮಹೇಶ್, ವಿಶ್ವೇಶ್ವರ ಹೆಗಡೆ ಕಾಗೇರಿ, ರೇಣುಕಾಚಾರ್ಯ, ನಿಖಿಲ್ ಕುಮಾರಸ್ವಾಮಿ, ಜಗದೀಶ್ ಶೆಟ್ಟರ್, ವೈಎಸ್‌ವಿ ದತ್ತಾ, ಸಿ.ಎಸ್.ಪುಟ್ಟರಾಜು, ಸಿ.ಪಿ.ಯೋಗೇಶ್ವರ್, ಕೆ.ಜಿ.ಬೋಪಯ್ಯ, ಅಪ್ಪಚ್ಚು ರಂಜನ್, ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ್‌ರಾವ್, ಹನೂರು ಕ್ಷೇತ್ರದಲ್ಲಿ ಮೂರು ಬಾರಿ ಗೆಲುವು ಸಾಧಿಸಿದ್ದ ಕಾಂಗ್ರೆಸ್‌ನ ಆರ್.ನರೇಂದ್ರ, ಕೆ.ಆರ್.ನಗರದಲ್ಲಿ ಹ್ಯಾಟ್ರಿಕ್ ಗೆಲುವು ಕಂಡಿದ್ದ ಸಾ.ರಾ.ಮಹೇಶ್ ಮೊದಲಾದವರು ಸೋಲು ಕಂಡಿದ್ದಾರೆ.

ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರು ತಮ್ಮ ಆಪ್ತನಾಗಿದ್ದ ಎಚ್.ಡಿ.ತಮ್ಮಯ್ಯ ಅವರಿಂದ ಸೋಲಿನ ಶಾಕ್ ಅನುಭವಿಸಿದ್ದಾರೆ. ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದ ತಮ್ಮಯ್ಯ ಅವರು ಬಿಜೆಪಿಯ ಭದ್ರಕೋಟೆಯಲ್ಲಿ ಜಯಭೇರಿ ಬಾರಿಸಿದ್ದಾರೆ. ಕಾಂಗ್ರೆಸ್ ಅವರಿಗೆ ಟಿಕೆಟ್ ಘೋಷಿಸಿದಾಗ ವ್ಯಾಪಕ ವಿರೋಧವೂ ವ್ಯಕ್ತವಾಗಿತ್ತು. ಎಲ್ಲದರ ನಡುವೆ ತಮ್ಮಯ್ಯ ಬಿಜೆಪಿಯ ಪ್ರಬಲ ನಾಯಕನನ್ನು ಸೋಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಲಿಂಗಾಯತ ಸಮುದಾಯಕ್ಕೆ ಸೇರಿರುವ ತಮ್ಮಯ್ಯ ಬಿಜೆಪಿಯಲ್ಲಿದ್ದರು. ಚಿಕ್ಕಮಗಳೂರು ನಗರಸಭೆ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದ ಅವರಿಗೆ ವಿರೋಧದ ನಡುವೆಯೂ ಕಾಂಗ್ರೆಸ್ ಟಿಕೆಟ್ ಘೋಷಿಸಿತ್ತು. ತಮ್ಮಯ್ಯ 60101 ಮತಗಳನ್ನು ಪಡೆದಿದ್ದು, ಸಿ.ಟಿ.ರವಿ 52201 ಮತಗಳನ್ನು ಪಡೆದಿದ್ದಾರೆ. 2018ರಲ್ಲಿ ಸಿ.ಟಿ.ರವಿ 26,314 ಮತಗಳ ಅಂತರದಿಂದ ಗೆದ್ದಿದ್ದರು.

ಕೊಡಗಲ್ಲಿ ದಾಖಲೆ ಬರೆದ ಕಾಂಗ್ರೆಸ್

ಎರಡು ದಶಕಗಳ ಬಿಜೆಪಿ ಆಡಳಿತ ಅಂತ್ಯ

● ಮಡಿಕೇರಿಯಲ್ಲಿ ಮಂಥರ್ ಗೌಡ, ವಿರಾಜಪೇಟೆಯಲ್ಲಿ ಎ.ಎಸ್. ಪೊನ್ನಣ್ಣ ಗೆಲುವು ● ಹಾಲಿ ಶಾಸಕರಾದ ಅಪ್ಪಚ್ಚುರಂಜನ್, ಕೆ.ಜಿ. ಬೋಪಯ್ಯಗೆ ಸೋಲು



ಕ್ಷೇತ್ರದ ಪ್ರಗತಿಗೆ ಬದ್ಧ

ಮಡಿಕೇರಿ ಕ್ಷೇತ್ರದ ವಿಜೇತ ಅಭ್ಯರ್ಥಿ ಡಾ.ಮಂಥರ್ ಗೌಡ ಮಾತನಾಡಿ, ನನ್ನ ಗೆಲುವಿಗೆ ಶ್ರಮಿಸಿದ ಪಕ್ಷದ ಕಾರ್ಯಕರ್ತರು, ಮುಖಂಡರು ಮತ್ತು ಮತದಾರರಿಗೆ ಧನ್ಯವಾದ ಸಲ್ಲಿಸಿದರು. ಈಗಾಗಲೇ ನೀಡಿರುವ ಭರವಸೆಯಂತೆ ಮಡಿಕೇರಿ ಕ್ಷೇತ್ರದ ಪ್ರಗತಿಗೆ ಬದ್ಧನಾಗಿದ್ದೇನೆ ಎಂದು ಸ್ಪಷ್ಟಪಡಿಸಿದರು. ನನ್ನನ್ನು ಹೊರಗಿನಿಂದ ಬಂದವನು ಎಂದು ಟೀಕಿಸಿದ್ದರು. ಆದರೆ ಮತದಾರರು ಮಾತ್ರ ಪ್ರೀತಿಯಿಂದ ಕೊಡಗಿನ ಹುಡುಗನ ಕೈ ಹಿಡಿದಿದ್ದಾರೆ. ಮುಂದಿನ ದಿನಗಳಲ್ಲಿ ಖಂಡಿತವಾಗಿ ದ್ವೇಷ ರಾಜಕೀಯ ಮಾಡದೇ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಡಿಕೇರಿ ಕ್ಷೇತ್ರದ ಪ್ರಗತಿಗೆ ಶ್ರಮಿಸುವುದಾಗಿ ಹೇಳಿದರು.



ಭದ್ರಕೋಟೆ ಭೇದಿಸಿದ್ದೇವೆ

ಕಾರ್ಯಕರ್ತರ ಒಗ್ಗಟ್ಟಿನ ಹೋರಾಟದ ಪರಿಶ್ರಮವೇ ತಮ್ಮ ಗೆಲುವಿಗೆ ಕಾರಣವಾಗಿದೆ. ನನ್ನನ್ನು ಹೊರಗಿನ ಅಭ್ಯರ್ಥಿ ಎಂದು ವ್ಯಂಗ್ಯವಾಡಿದವರಿಗೆ ಮತದಾರರೇ ತಕ್ಕ ಉತ್ತರ ನೀಡುವ ಮೂಲಕ ಅವರನ್ನೇ ಹೊರಗೆ ಕಳುಹಿಸಿದ್ದಾರೆ ಎಂದು ಕಾಂಗ್ರೆಸ್ ಅಭ್ಯರ್ಥಿ ಎ.ಎಸ್. ಪೊನ್ನಣ್ಣ ತಿರುಗೇಟು ನೀಡಿದರು.

ಫಲಿತಾಂಶ ಪ್ರಕಟವಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪೊನ್ನಣ್ಣ ತಮ್ಮ ಗೆಲುವಿಗೆ ಶ್ರಮಿಸಿದ ಎಲ್ಲಾ ಕಾರ್ಯಕರ್ತರು ಮತ್ತು ಮತದಾರರಿಗೆ ಧನ್ಯವಾದ ಸಲ್ಲಿಸಿದರು. ಎರಡೂ ಕ್ಷೇತ್ರಗಳಲ್ಲಿ ಭರ್ಜರಿ ಗೆಲುವು ಸಾಧಿಸಿದ್ದೇವೆ, ಆ ಮೂಲಕ ಬಿಜೆಪಿಯ ಭದ್ರಕೋಟೆಯನ್ನು ಭೇದಿಸಿದ್ದೇವೆ ಎಂದು ಹರ್ಷ ವ್ಯಕ್ತಪಡಿಸಿದರು. ಚುನಾವಣೆ ಸಂದರ್ಭದಲ್ಲಿ ಕ್ಷೇತ್ರದ ಪ್ರಗತಿಯ ಕುರಿತು ಮತದಾರರಿಗೆ ಭರವಸೆ ನೀಡಿದ್ದೇನೆ. ಅದರಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಾಗಿ ಪೊನ್ನಣ್ಣ ಹೇಳಿದರು.



ಮಡಿಕೇರಿ, ಮೇ 13– ಕೊಡಗು ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಚುನಾವಣೆ ಫಲಿತಾಂಶ ಹೊರ ಬಿದ್ದಿದ್ದು, ಕಾಂಗ್ರೆಸ್‌ನ ರಾಜಕೀಯ ಸುನಾಮಿ ಹಾಗೂ ಆಡಳಿತ ವಿರೋಧಿ ಅಲೆಯಿಂದ ಬಿಜೆಪಿ ಭದ್ರಕೋಟೆ ಕೊಚ್ಚಿ ಹೋಗಿದೆ. ಆ ಮೂಲಕ ಕಳೆದ ಎರಡು ದಶಕಗಳಿಂದ 'ಸೋಲನ್ನೇ ಕಾಣದ' ಜಿಲ್ಲೆಯ ಎರಡೂ ಕ್ಷೇತ್ರಗಳಲ್ಲಿ ಪ್ರಭಾವಿ ಹಾಲಿ ಶಾಸಕರನ್ನೇ ಕಾಂಗ್ರೆಸ್ ಅಭ್ಯರ್ಥಿಗಳು ಮಣಿಸುವ ಮೂಲಕ ದಾಖಲೆ ಬರೆದಿದ್ದಾರೆ.

ಮತಗಳ ಎಣಿಕೆ: ಕೊಡಗು ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ಕಾರ್ಯ ನಗರದ ಸಂತ ಜೋಸೆಫರ ಶಾಲೆಯಲ್ಲಿ ಬೆಳಗ್ಗೆ 8 ಗಂಟೆಗೆ ಆರಂಭವಾಯಿತು. ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಅಭ್ಯರ್ಥಿಗಳ ಸಮ್ಮುಖದಲ್ಲಿ ಸ್ಟ್ರಾಂಗ್ ರೂಂಗಳ ಬಾಗಿಲು ತೆರೆದು ಮತಯಂತ್ರಗಳನ್ನು ನಿಗದಿತ ಎಣಿಕೆ ಟೇಬಲ್‌ಗಳಿದ್ದ ಕೋಣೆಗಳಿಗೆ ತರಲಾಯಿತು. ಬಳಿಕ ಮತ ಎಣಿಕೆ ಕಾರ್ಯ ನಡೆಸಲಾಯಿತು.

ಸಂಪೂರ್ಣ ಪ್ರದೇಶದ ಸುತ್ತಲಿನ 200 ಮೀಟರ್ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿತ್ತು. ಕೊಡಗು ಪೊಲೀಸ್ ಸಹಿತ ಶಸ್ತ್ರಸಜ್ಜಿತ ಪ್ಯಾರಾ ಮಿಲಿಟರಿ ಪಡೆಗಳನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಎಲ್ಲೆಡೆ ಸಿ.ಸಿ.ಕ್ಯಾಮರಾಗಳನ್ನು ಅಳವಡಿಸಿ ಪಾರದರ್ಶಕವಾಗಿ ಎಣಿಕೆ ಕಾರ್ಯ ನಡೆಸಲಾಯಿತಲ್ಲದೇ, ಎಣಿಕೆ ಕಾರ್ಯವನ್ನು ವೆಬ್ ಕಾಸ್ಟಿಂಗ್ ಕೂಡ ಮಾಡಲಾಗುತ್ತಿತ್ತು. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಡಾ. ಬಿ.ಸಿ. ಸತೀಶ, ಮಡಿಕೇರಿ ಕ್ಷೇತ್ರ ಚುನಾವಣಾಧಿಕಾರಿ ಯತೀಶ್ ಉಲ್ಲಾಳ, ವಿರಾಜಪೇಟೆ ಕ್ಷೇತ್ರ ಚುನಾವಣಾಧಿಕಾರಿ ಶಬಾನಾ ಶೇಖ್, ಜಿಲ್ಲಾ ಚುನಾವಣಾ ಆಯೋಗದ ಸ್ವೀಪ್ ಸಮಿತಿಯ ಡಾ. ಆಕಾಶ್, ಅಪರ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ ಅವರುಗಳು ಸ್ಥಳದಲ್ಲಿ ಹಾಜರಿದ್ದು, ಎಣಿಕೆ ಕಾರ್ಯಗಳ ಉಸ್ತುವಾರಿ ವಹಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ಮೇಲ್ವಿಚಾರಣೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಪ್ರಭಾವಿ ಶಾಸಕರಿಗೆ ಸೋಲು: ಮತ ಎಣಿಕೆಯಲ್ಲಿ ಮಡಿಕೇರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ. ಮಂಥರ್ ಗೌಡ ಅವರು 84,879 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದರೆ, ಇವರ ಪ್ರತಿಸ್ಪರ್ಧಿ, 5 ಬಾರಿಯ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಅವರು ತೀವ್ರ ಪೈಪೋಟಿ ನೀಡಿ 80,477 ಮತಗಳನ್ನು ಪಡೆದುಕೊಂಡರಾದರು 4,402 ಮತಗಳಿಂದ ಪರಾಭವಗೊಳ್ಳುವಂತಾಯಿತು. ಜೆಡಿಎಸ್‌ನ ನಾಪಂಡ ಮುತ್ತಪ್ಪ ಅವರು 6233 ಮತಗಳನ್ನಷ್ಟೆ ಪಡೆಯಲು ಸಾಧ್ಯವಾಗಿದ್ದು, ನಿರೀಕ್ಷೆಯ ಪೈಪೋಟಿ ನೀಡಲು ಸಾಧ್ಯವಾಗಿಲ್ಲ. ವಿರಾಜಪೇಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಅವರು 83,791 ಮುಗಳನ್ನು ಪಡೆದು ಗೆಲುವು ಸಾಧಿಸಿದರೆ, ಸಮೀಪದ ಪ್ರತಿಸ್ಪರ್ಧಿ 4 ಬಾರಿಯ ಶಾಸಕ, ಬಿಜೆಪಿಯ ಕೆ.ಜಿ. ಬೋಪಯ್ಯ 79,500 ಮತಗಳನ್ನು ಪಡೆದು, 4291 ಮತಗಳ ಅಂತರದಿಂದ ಪರಾಭವಗೊಂಡರು. ಈ ಕ್ಷೇತ್ರದಲ್ಲಿ ಜೆಡಿಎಸ್‌ನ ಮನ್ಸೂರ್ ಅಲಿ ಅವರು 1,121 ಮತಗಳನ್ನಷ್ಟೆ ಪಡೆಯಲು ಶಕ್ತರಾಗಿದ್ದಾರೆ.

ಕಾರ್ಯಕರ್ತರ ಹರ್ಷೋದ್ಗಾರ: ಎರಡೂ ಕ್ಷೇತ್ರಗಳ 18ನೇ ಸುತ್ತಿನ ಮತಎಣಿಕೆಯಲ್ಲಿ ಬಿಜೆಪಿ ಮುಗ್ಗರಿಸಿ ಕಾಂಗ್ರೆಸ್ ಗೆಲುವಿನ ದಡ ಸೇರುತ್ತಿರುವುದನ್ನು ಅರಿತ ಕಾಂಗ್ರೆಸ್ ಕಾರ್ಯಕರ್ತರು ಮೈದಾನದಲ್ಲಿ ಪಟಾಕಿ ಸಿಡಿಸಿ ಕಾಂಗ್ರೆಸ್ ಪರ ಜೈಕಾರಗಳನ್ನು ಮೊಳಗಿಸಿ ಸಂಭ್ರಮಾಚರಿಸಿದರು. ತಮ್ಮ ಅಭ್ಯರ್ಥಿ ಡಾ. ಮಂಥರ್ ಗೌಡ ಮತ್ತು ಎ.ಎಸ್. ಪೊನ್ನಣ್ಣ ಅವರ ಪರ ಘೋಷಣೆಗಳನ್ನು ಮೊಳಗಿಸಿದ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಕಳೆದ 20 ವರ್ಷಗಳಿಂದ ಅಧಿಕಾರದಿಂದ ದೂರವೇ ಉಳಿದಿದ್ದ ಹಿನ್ನೆಲೆ ಮತ್ತೆ ಅಧಿಕಾರ ಸ್ಥಾಪಿಸಿದ ಹಿನ್ನೆಲೆಯಲ್ಲಿ ಪಕ್ಷದ ಮುಖಂಡರೂ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಮತ ಎಣಿಕೆ ಕಾರ್ಯ ಮುಗಿಸಿ ಕೇಂದ್ರದಿಂದ ಹೊರಬಂದ ಎ.ಎಸ್.ಪೊನ್ನಣ್ಣ ಮತ್ತು ಡಾ.ಮಂಥರ್ ಗೌಡ ಅವರಿಗೆ ಹೂಮಾಲೆಗಳನ್ನು ಹಾಕಿ, ಹೆಗಲ ಮೇಲೆ ಹೊತ್ತುಕೊಂಡು ಕಾರ್ಯಕರ್ತರು ಗೆಲುವಿನ ಕೇಕೆ ಹಾಕಿದರು.

ತೀರ್ಪಿಗೆ ತಲೆಬಾಗುತ್ತೇನೆ: ಮತದಾರರು ನೀಡಿದ ತೀರ್ಪಿಗೆ ತಲೆಬಾಗುವುದಾಗಿ ಮಡಿಕೇರಿ ಕ್ಷೇತ್ರದ ಪರಾಜಿತ ಅಭ್ಯರ್ಥಿ ಅಪ್ಪಚ್ಚು ರಂಜನ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅಪ್ಪಚ್ಚು ರಂಜನ್, ನನ್ನ ಜೊತೆ ಚುನಾವಣೆ ಸಂದರ್ಭ ಕಾರ್ಯನಿರ್ವಹಿಸಿದ ಕಾರ್ಯಕರ್ತರು, ಪಕ್ಷ ಮುಖಂಡರಿಗೆ ಹಾಗೂ ಮತದಾರರಿಗೂ ಧನ್ಯವಾದ ಸಲ್ಲಿಸುವುದಾಗಿ ಹೇಳಿದರು.



ಕಳೆದ 25 ವರ್ಷಗಳಿಂದ ಜನರು ಸಮಾಜ ಸೇವೆ ಮಾಡಲು ಅವಕಾಶ ಮಾಡಿಕೊಟ್ಟಿದ್ದರು. ಅದರಂತೆ ಅಭಿವೃದ್ಧಿ ಹಾಗೂ ಜನಪರ ಕಾರ್ಯಗಳನ್ನೂ ಕ್ಷೇತ್ರದಲ್ಲಿ ಮಾಡಿದ್ದೇನೆ. ಇದೀಗ ಜನರ ತೀರ್ಪಿಗೂ ತಲೆಬಾಗುವುದಾಗಿ ಹೇಳಿದರು. ಕಾಂಗ್ರೆಸ್ ನೀಡಿದ್ದ ಗ್ಯಾರಂಟಿ ಕಾರ್ಡ್, ಉಚಿತ ವಿದ್ಯುತ್, ಗೃಹಿಣಿಯರ ಮಾಸಿಕ ಭತ್ಯೆ, ಉಚಿತ ಅಕ್ಕಿ ಮತ್ತಿತರ ಭರವಸೆಗಳು ಬಿಜೆಪಿ ಗೆಲುವಿಗೆ ತೊಡಕಾಯಿತು. ಕಾಂಗ್ರೆಸ್ ಭರವಸೆಗಳು ಕಾರ್ಮಿಕ ವರ್ಗವನ್ನು ಸೆಳೆಯುವಲ್ಲಿ ಸಫಲವಾಗಿದ್ದು, ಇದರಿಂದ ಸೋಲು ಕಾಣುವಂತಾಯಿತು ಎಂದು ರಂಜನ್ ಅಭಿಪ್ರಾಯ ವ್ಯಕ್ತಪಡಿಸಿದರು.

ಸ್ಥಾನ ಪಡೆದ 'ನೋಟಾ': ವಿಧಾನಸಭಾ ಚುನಾವಣೆಯಲ್ಲಿ ಎರಡೂ ಕ್ಷೇತ್ರಗಳಿಗೆ ಚಲಾವಣೆಯಾದ ಮತಗಳಲ್ಲಿ ನೋಟಾ ಕೂಡ ಬಹುಮುಖ್ಯ ಸ್ಥಾನ ಪಡೆದಿದೆ. ಮಡಿಕೇರಿ ಕ್ಷೇತ್ರದಲ್ಲಿ 1486 ಸ್ಥಾನಗಳಿಸಿರುವ ನೋಟಾ 4ನೇ ಸ್ಥಾನದಲ್ಲಿದೆ. ವಿರಾಜಪೇಟೆ ಕ್ಷೇತ್ರದಲ್ಲಿ 1636 ನೋಟಾ ಮತಗಳು ಚಲಾವಣೆಯಾಗಿದ್ದು, 3ನೇ ಸ್ಥಾನ ಗಳಿಸಿದೆ. 208ನೇ ವಿಧಾನ ಸಭಾ ಕ್ಷೇತ್ರದಲ್ಲಿ 1,74,647 ಮತಗಳು ಚಲಾವಣೆಯಾಗಿದ್ದರೆ, 209ನೇ ವಿಧಾನ ಸಭಾ ಕ್ಷೇತ್ರದಲ್ಲಿ ಒಟ್ಟು 1,67,778 ಮತಗಳು ಚಲಾವಣೆಯಾಗಿದೆ.

ಮಡಿಕೇರಿ ಕ್ಷೇತ್ರದಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಓಟು

ಅಮೀನ್ ಮೊಹಿಸಿನ್ (ಎಸ್‌ಡಿಪಿಐ 1,425), ಮುತ್ತಪ್ಪ ಎನ್.ಎಂ. (ಜಾತ್ಯಾತೀತ ಜನತಾದಳ 6,178), ಕೆ.ಪಿ.ರಾಜು (ಆರ್‌ಪಿಐ ಕರ್ನಾಟಕ 113), ಜಿ.ಜಿ. ಹೇಮಂತ್ ಕುಮಾರ್ (ಪಕ್ಷೇತರ 249), ಅಪ್ಪಚ್ಚುರಂಜನ್ ಎಂ.ಪಿ. (ಬಿಜೆಪಿ 79,039), ಡಾ.ಮಂಥರ್ ಗೌಡ (ಕಾಂಗ್ರೆಸ್ 83,704), ಎಚ್.ಎಂ. ಸೋಮಪ್ಪ (ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ 506), ದಿಲೀಪ್ ಕುಮಾರ್ ಎ.ಎ.(ಬಹುಜನ ಸಮಾಜ ಪಕ್ಷ 605), ಎಂ.ಖಲೀಲ್(ಪಕ್ಷೇತರ 242), ರಶೀದ ಬೇಗಂ(ಇಂಡಿಯನ್ ಮೂವ್‌ಮೆಂಟ್ ಪಾರ್ಟಿ 82), ಶ್ರೀನಿವಾಸ ರೈ ಐ.ಕೆ (ಕರ್ನಾಟಕ ಪ್ರಜ್ಞಾವಂತ ಜನತಾ ಪಾರ್ಟಿ 116), ಬೋಪಣ್ಣ ಕೆ.ಪಿ. (ಆಮ್ ಆದ್ಮಿ ಪಾರ್ಟಿ 405), ಹರೀಶ್ ಆಚಾರ್ಯ (ಪಕ್ಷೇತರ 122), ಸುಜೀರ್ ಮಹೀದ್ ನೆರಾಬ್ (ಕರ್ನಾಟಕ ರಾಷ್ಟ್ರ ಸಮಿತಿ 154), ಶ್ರುತಿ ಕೆ.ಪಿ.(ಪಕ್ಷೇತರ 221).

ವಿರಾಜಪೇಟೆ ಕ್ಷೇತ್ರದಲ್ಲಿ ಮತ ಪಡೆದವರ ವಿವರ

ಕೆ.ಜಿ.ಬೋಪಯ್ಯ (ಬಿಜೆಪಿ 79,500), ಎಂ.ಎ.ನಾಸಿರ್ (ಪಕ್ಷೇತರ 346), ಎ.ಎಸ್.ಪೊನ್ನಣ್ಣ (ಕಾಂಗ್ರೆಸ್ 83791), ಮನ್ಸೂರ್ ಅಲಿ ಎಂ.ಎ.(ಜನತಾ ದಳ ಜಾತ್ಯಾತೀತ 1121), ಸಿ.ಎಸ್.ರವೀಂದ್ರ (ಆಮ್ ಆದ್ಮಿ ಪಕ್ಷ 254), ಕೆ.ಎಸ್. ಮನು (ಸರ್ವೋದಯ ಕರ್ನಾಟಕ ಪಕ್ಷ 682), ದರ್ಶನ್ ಶೌರಿ ಪಿ.ಕೆ. (ಪಕ್ಷೇತರ 204) ಮಸೂದ್ ಫೌಜ್ದಾರ್ (ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ 121), ಸಜು ವಿ.ಎ. (ಕರ್ನಾಟಕ ರಾಷ್ಟ್ರ ಸಮಿತಿ 123).

ಕೆ.ಜಿ.ಬೋಪಯ್ಯಗೆ 8 ಸುತ್ತುಗಳಲ್ಲಿ ಮಾತ್ರ ಮುನ್ನಡೆ

ಪ್ರಾರಂಭದಿಂದಲೇ ಮುನ್ನಡೆ ಕಾಯ್ದುಕೊಂಡ ಮಂಥರ್‌ಗೌಡ

ಮಡಿಕೇರಿ, ಮೇ 13– ಬೆಳಗ್ಗೆ 8 ಗಂಟೆಗೆ ಮತ ಎಣಿಕಾ ಕಾರ್ಯ ಆರಂಭವಾಗಿ ಸರಿ ಸುಮಾರು ಮಧ್ಯಾಹ್ನ 1 ಗಂಟೆಯ ಹೊತ್ತಿಗೆ ಎರಡೂ ಕ್ಷೇತ್ರಗಳ ವಿಜೇತ ಅಭ್ಯರ್ಥಿಗಳ ಘೋಷಣೆಯಾಯಿತು. ಒಟ್ಟು 20 ಸುತ್ತುಗಳ ಮತ ಎಣಿಕಾ ಕಾರ್ಯದ ಸಂದರ್ಭ ಮೊದಲ 8 ಸುತ್ತುಗಳಲ್ಲಿ ವಿರಾಜಪೇಟೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಜಿ. ಬೋಪಯ್ಯ ಮುನ್ನಡೆಯನ್ನು ಕಂಡುಕೊಂಡಿದ್ದರು. ನಂತರದ ಸುತ್ತುಗಳಲ್ಲಿ ಮುನ್ನಡೆಯನ್ನು ಕಳೆದುಕೊಳ್ಳುತ್ತಾ ಸಾಗಿ ಕೆ.ಜಿ. ಬೋಪಯ್ಯ ಪರಾಭವಗೊಂಡರು. ಮಡಿಕೇರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ.ಮಂಥರ್ ಗೌಡ ಮಾತ್ರ ಎಲ್ಲಾ ಸುತ್ತುಗಳಲ್ಲಿ ತಮ್ಮ ಮುನ್ನಡೆಯನ್ನು ಕಾಯ್ದುಕೊಳ್ಳುತ್ತಲೆ ಬರುವ ಮೂಲಕ ಗೆಲುವು ಸಾಧಿಸಿದ್ದು ಕುತೂಹಲಕಾರಿಯಾಗಿತ್ತು. ಮತ ಎಣಿಕಾ ಕಾರ್ಯ ಮತ್ತು ಸಂಭ್ರಮಾಚರಣೆಯ ಸಂದರ್ಭ ಮಾಜಿ ಎಂಎಲ್‌ಸಿಗಳಾದ ವೀಣಾ ಅಚ್ಚಯ್ಯ, ಅರುಣ್ ಮಾಚಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಟಿ.ಪಿ.ರಮೇಶ್, ತೆನ್ನಿರ ಮೈನಾ, ಕೆ.ಯು.ಅಬ್ದುಲ್ ರಜಾಕ್, ಕೊಲ್ಯದ ಗಿರೀಶ್ ಸೇರಿದಂತೆ ಹಲ ಪ್ರಮುಖರು ಹಾಜರಿದ್ದರು.

ಮತ್ತೆ 'ಕೈ' ವಶಕ್ಕೆ ಚಾಮರಾಜನಗರ

ಜಿಲ್ಲೆಯ 3 ರಲ್ಲಿ ಕಾಂಗ್ರೆಸ್, 1 ರಲ್ಲಿ ಜೆಡಿಎಸ್ ಗೆಲುವು

● ಸಿದ್ದಲಿಂಗಸ್ವಾಮಿ



ಸಿ. ಪುಟ್ಟರಂಗಶೆಟ್ಟಿ



ಎ.ಆರ್. ಕೃಷ್ಣಮೂರ್ತಿ



ಹೆಚ್.ಎಂ. ಗಣೇಶ್‌ಪ್ರಸಾದ್



ಎಂ.ಆರ್. ಮಂಜುನಾಥ್

ಚಾಮರಾಜನಗರ, ಮೇ13– ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳ ಪೈಕಿ ಕಾಂಗ್ರೆಸ್ 3 ಕ್ಷೇತ್ರಗಳಲ್ಲಿ ಹಾಗೂ ಜಾತ್ಯತೀತ ಜನತಾದಳ 1 ಕ್ಷೇತ್ರದಲ್ಲಿ ಗೆಲುವು ಸಾಧಿಸಿದೆ. ಈ ಮೂಲಕ ಜಿಲ್ಲೆಯಲ್ಲಿ ಕಾಂಗ್ರೆಸ್ ಮತ್ತೊಮ್ಮೆ ತನ್ನ ಹಿಡಿತ ಸಾಧಿಸಿದೆ.

ಕಳೆದ 2018ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್ 2 ಸ್ಥಾನಗಳನ್ನು ಕಳೆದುಕೊಂಡಿತ್ತು. ಆಗ ಚಾ.ನಗರ, ಹನೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್, ಗುಂಡ್ಲುಪೇಟೆಯಲ್ಲಿ ಬಿಜೆಪಿ, ಕೊಳ್ಳೇಗಾಲದಲ್ಲಿ ಬಿಎಸ್‌ಪಿ ಜಯಗಳಿಸಿತ್ತು ಈ ಬಾರಿ ಜಿಲ್ಲೆಯಲ್ಲಿ ಬಿಜೆಪಿ ಹಾಗೂ ಬಿಎಸ್‌ಪಿ ನೆಲೆ ಕಳೆದುಕೊಂಡಿವೆ.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಿ. ಪುಟ್ಟ ರಂಗಶೆಟ್ಟಿ ಅವರು 83858 ಮತಗಳನ್ನು ಪಡೆಯುವ ಮೂಲಕ ಜಯಶೀಲರಾಗಿದ್ದಾರೆ. ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್.ಎಂ. ಗಣೇಶ್ ಪ್ರಸಾದ್ ಅವರು 107794 ಮತಗಳನ್ನು ಪಡೆದು ಗೆಲುವು ಸಾಧಿಸಿದ್ದಾರೆ. ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎ.ಆರ್. ಕೃಷ್ಣ ಮೂರ್ತಿ ಅವರು 108363 ಮತಗಳನ್ನು ಪಡೆದು ವಿಜಯಿಯಾಗಿದ್ದಾರೆ. ಹನೂರು ವಿಧಾನಸಭಾ ಕ್ಷೇತ್ರದಲ್ಲಿ ಜಾತ್ಯತೀತ ಜನತಾದಳದ ಅಭ್ಯರ್ಥಿ ಎಂ.ಆರ್. ಮಂಜುನಾಥ್ 75632 ಮತಗಳನ್ನು ಪಡೆದು ಗೆಲುವಿನ ನಗೆ ಬೀರಿದ್ದಾರೆ.

ನಾಲ್ಕು ಕ್ಷೇತ್ರಗಳ ಪೈಕಿ ಚಾಮರಾಜನಗರದಲ್ಲಿ ಪುಟ್ಟರಂಗಶೆಟ್ಟಿ ಒಬ್ಬರು ಮಾತ್ರ ಪುನರಾಯ್ಕೆಯಾಗಿದ್ದರೆ, ಇನ್ನುಳಿದ ಮೂರೂ ಕ್ಷೇತ್ರಗಳಲ್ಲಿ ಗೆದ್ದಿರುವವರು ಆ ಕ್ಷೇತ್ರದಲ್ಲಿ ಮೊದಲ ಬಾರಿ ಶಾಸಕರಾಗಿ ಚುನಾಯಿತರಾದವರಾಗಿದ್ದಾರೆ.

ಚಾಮರಾಜನಗರ ಕ್ಷೇತ್ರದಲ್ಲಿ ಪುಟ್ಟರಂಗಶೆಟ್ಟಿ ಅವರು ಸತತ ನಾಲ್ಕನೇ ಗೆಲುವು ದಾಖಲಿಸಿದ್ದಾರೆ. ಗುಂಡ್ಲುಪೇಟೆ ಕ್ಷೇತ್ರದಲ್ಲಿ ಗಣೇಶಪ್ರಸಾದ್ ಅವರಿಗೆ ಇದು ಚೊಚ್ಚಲ ಸ್ಪರ್ಧೆಯಾಗಿದ್ದು, ಪ್ರಥಮ ಯತ್ನದಲ್ಲೇ ವಿಘ್ನವಿಲ್ಲದೇ ಭರ್ಜರಿ ವಿಜಯ ಸಾಧಿಸಿದ್ದಾರೆ. ತನ್ಮೂಲಕ ತಂದೆ, ತಾಯಿ, ಮಗ ಮೂವರೂ ಶಾಸಕರಾದ ಕೀರ್ತಿಗೆ ಭಾಜನರಾಗಿದ್ದಾರೆ. ಕೊಳ್ಳೇಗಾಲ ಕ್ಷೇತ್ರದಲ್ಲಿ ಎ.ಆರ್. ಕೃಷ್ಣಮೂರ್ತಿ ಜಿಲ್ಲೆಯಲ್ಲೇ ಅತ್ಯಧಿಕ ಮತಗಳ ಅಂತರದಿಂದ ಗೆಲ್ಲುವ ಮೂಲಕ ತಮ್ಮ 19 ವರ್ಷಗಳ ವನವಾಸಕ್ಕೆ ಅಂತ್ಯ ಹಾಡಿದ್ದಾರೆ. ಹನೂರು ಕ್ಷೇತ್ರದಲ್ಲಿ ಎರಡು ಕುಟುಂಬಗಳ ನಡುವಿನ ಆಡಳಿತ ಅಂತ್ಯಗೊಂಡಿದ್ದು, ಜೆಡಿಎಸ್ ನ ಎಂ.ಆರ್. ಮಂಜುನಾಥ್ ಜಯಗಳಿಸುವ ಮೂಲಕ ಹನೂರಿನಲ್ಲಿ ಹೊಸ ಶಕೆ ಆರಂಭಿಸಿದ್ದಾರೆ.

2013 ರ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ನಾಲ್ಕಕ್ಕೆ ನಾಲ್ಕೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಜಯಗಳಿಸಿತ್ತು ಈ ಬಾರಿ ಹನೂರು ಕ್ಷೇತ್ರವನ್ನು ಕಳೆದುಕೊಂಡಿದೆ. ಮೂರು ಬಾರಿ ಗೆದ್ದು ಶಾಸಕರಾಗಿದ್ದ ನರೇಂದ್ರ ಅವರಿಗೆ ಕ್ಷೇತ್ರದ ಜನತೆ ಸೋಲಿನ ಕಹಿ ಉಣಿಸಿದ್ದಾರೆ. ಜಿಲ್ಲೆಯಲ್ಲಿ ಎಚ್.ಎಸ್. ಮಹದೇವಪ್ರಸಾದ್ ಹಾಗೂ ಆರ್. ಧ್ರುವನಾರಾಯಣ ಅವರ ಕೊರತೆಯಿಂದ ಕಾಂಗ್ರೆಸ್ ಪಕ್ಷ ನಾಯಕನಿಲ್ಲದೇ ಸೊರಗಿತ್ತು. ಆದಾಗ್ಯೂ ಈ ಮಟ್ಟದ ಸಾಧನೆ ತೋರಿ, ಮತ್ತೆ ಜಿಲ್ಲೆಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿರುವುದು ವಿಶೇಷ.

ಸೋಮಣ್ಣರನ್ನು ಮಣಿಸಿದ ಪುಟ್ಟರಂಗಶೆಟ್ಟಿ

ಸತತ 4ನೇ ಬಾರಿ ವಿಧಾನಸಭೆ ಪ್ರವೇಶ, ತಪ್ಪಾದ ಬಿಜೆಪಿ ಲೆಕ್ಕಾಚಾರ



ಚಾಮರಾಜನಗರ, ಮೇ 13– ವಸತಿ ಸಚಿವ ವಿ. ಸೋಮಣ್ಣ ಅವರ ಸ್ಪರ್ಧೆಯಿಂದ ರಾಜ್ಯದ ಗಮನ ಸೆಳೆದಿದ್ದ ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರು ಸ್ಥಳೀಯ ಅಭ್ಯರ್ಥಿ ಕಾಂಗ್ರೆಸ್‌ನ ಸಿ. ಪುಟ್ಟರಂಗಶೆಟ್ಟಿ ಅವರ ಕೈ ಹಿಡಿದಿದ್ದಾರೆ.

ಪುಟ್ಟರಂಗಶೆಟ್ಟಿ ಅವರು ಬಿಜೆಪಿ ಅಭ್ಯರ್ಥಿ ಸಚಿವ ವಿ. ಸೋಮಣ್ಣ ಅವರನ್ನು 7533 ಮತಗಳ ಅಂತರದಿಂದ ಪರಾಭವಗೊಳಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಪುಟ್ಟರಂಗಶೆಟ್ಟಿ 83,858 ಮತಗಳನ್ನು ಪಡೆದರೆ, ಬಿಜೆಪಿ ಅಭ್ಯರ್ಥಿ ವಿ. ಸೋಮಣ್ಣ 76,325 ಮತಗಳನ್ನು ಪಡೆದು ಪರಾಜಿತರಾಗಿದ್ದಾರೆ. ಪುಟ್ಟರಂಗಶೆಟ್ಟಿ ಅವರು ಶೇ. 48.46ರಷ್ಟು ಮತಗಳನ್ನು ಪಡೆದರೆ, ವಿ. ಸೋಮಣ್ಣ ಅವರು ಶೇ.44.1 ಮತಗಳನ್ನು ಗಳಿಸಿದ್ದಾರೆ.

ಪುಟ್ಟರಂಗಶೆಟ್ಟಿ ಅವರಿಗೆ ಕ್ಷೇತ್ರದಲ್ಲಿ ಇದು ಸತತ ನಾಲ್ಕನೇ ಗೆಲುವು. ಕಳೆದ 2018ರ ಚುನಾವಣೆಯಲ್ಲಿ ಗೆದ್ದು ಹ್ಯಾಟ್ರಿಕ್ ಶಾಸಕ ಎನಿಸಿಕೊಂಡಿದ್ದ ಶೆಟ್ಟರು ಈ ಬಾರಿ ಗೆಲ್ಲುವ ಮೂಲಕ ನಾಲ್ಕನೇ ಸತತ ವಿಜಯ ದಾಖಲಿಸಿದ್ದಾರೆ. 2008ರ ವಿಧಾನಸಭಾ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಪುಟ್ಟರಂಗಶೆಟ್ಟಿ ಅವರು ತಮ್ಮ ಚೊಚ್ಚಲ ಸ್ಪರ್ಧೆಯಲ್ಲೇ ಅಂದಿನ ಪ್ರಬಲ ಬಿಜೆಪಿ ಅಭ್ಯರ್ಥಿ ಎಂ. ಮಹದೇವು (ಬೆಂಕಿ) ಅವರಿಗೆ ಸೋಲಿನ ರುಚಿ ತೋರಿಸಿದ್ದರು. 2013ರಲ್ಲಿ ಕೆಜೆಪಿ ಹಾಗೂ 2018ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ ಅವರನ್ನು ಮಣಿಸಿದ್ದರು.

2018ರಲ್ಲಿ ಬಿಜೆಪಿ ಅಭ್ಯರ್ಥಿಯನ್ನು 4,913 ಮತಗಳಿಂದ ಮಣಿಸಿದ್ದ ಪುಟ್ಟರಂಗ ಶೆಟ್ಟಿ, ಈ ಬಾರಿ ಎಲ್ಲರ ಲೆಕ್ಕಾಚಾರ ತಲೆಕೆಳಗು ಮಾಡಿ ಪ್ರಬಲ ಅಭ್ಯರ್ಥಿ ಸಚಿವ ಸೋಮಣ್ಣ ಅವರನ್ನು 7,533 ಮತಗಳಿಂದ ಸೋಲಿಸುವ ಮೂಲಕ ಮತ್ತೊಮ್ಮೆ ಪ್ರಾಬಲ್ಯ ಸಾಧಿಸಿದ್ದಾರೆ.

ಬೆಂಗಳೂರಿನ ಗೋವಿಂದರಾಜ ನಗರ ಕ್ಷೇತ್ರದಲ್ಲಿ ಸತತವಾಗಿ ಆಯ್ಕೆಯಾಗುತ್ತಾ ಬಂದಿದ್ದ ವಿ. ಸೋಮಣ್ಣ ಅವರು ಈ ಬಾರಿ ಚಾಮರಾಜನಗರದಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿ ವಲಸೆ ಬಂದಿದ್ದರು. ಹೈಕಮ್ಯಾಂಡ್ ಅವರಿಗೆ ಚಾಮರಾಜನಗರದ ಜೊತೆಗೆ ವರುಣಾ ಕ್ಷೇತ್ರದಲ್ಲೂ ಕಣಕ್ಕಿಳಿಸಿತ್ತು. ವರುಣಾ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಪರಾಭವಗೊಂಡಿರುವ ಸೋಮಣ್ಣ ಅವರಿಗೆ ಚಾಮರಾಜನಗರ ಕ್ಷೇತ್ರವೂ ಒಲಿಯಲಿಲ್ಲ. ವರುಣಾ ಕ್ಷೇತ್ರದಲ್ಲಿ ಪ್ರಬಲ ಅಭ್ಯರ್ಥಿ ಸಿದ್ದರಾಮಯ್ಯ ಅವರ ವಿರುದ್ಧ ಒಂದು ವೇಳೆ ಪರಾಭವಗೊಂಡರೂ, ಚಾಮರಾಜನಗರ ಕ್ಷೇತ್ರದಲ್ಲಿ ತಾವು ಗೆದ್ದೇ ಗೆಲ್ಲುತ್ತೇವೆ ಎಂಬ ಅತೀವ ಆತ್ಮವಿಶ್ವಾಸ ಸೋಮಣ್ಣ ಹಾಗೂ ಅವರ ಬೆಂಬಲಿಗರಲ್ಲಿತ್ತು.

ಶನಿವಾರ ಬೆಳಿಗ್ಗೆ ಮತ ಎಣಿಕೆ ಆರಂಭವಾಗುತ್ತಿದ್ದಂತೆ ಆರಂಭದ ಸುತ್ತುಗಳಿಂದಲೂ ಕಾಂಗ್ರೆಸ್ ನ ಪುಟ್ಟರಂಗಶೆಟ್ಟಿ ಮುನ್ನಡೆ ಸಾಧಿಸುತ್ತಲೇ ಹೋದರು. ಯಾವ ಸುತ್ತಿನಲ್ಲೂ ಸೋಮಣ್ಣ ಅವರು ಮುನ್ನಡೆ ಸಾಧಿಸಲಾಗಲಿಲ್ಲ. ಒಟ್ಟು 18 ಸುತ್ತುಗಳಲ್ಲಿ ಎಣಿಕೆ ನಡೆದು, ಅಂತಿಮವಾಗಿ ಪುಟ್ಟರಂಗಶೆಟ್ಟಿ ಜಯಗಳಿಸಿದರು.

ಪ್ರಥಮ ಪ್ರಯತ್ನದಲ್ಲೇ ವಿಘ್ನವಿಲ್ಲದೇ ಗೆದ್ದ ಗಣೇಶ



ಚಾಮರಾಜನಗರ, ಮೇ 13– ಜಿಲ್ಲೆಯ ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್.ಎಂ. ಗಣೇಶ್‌ಪ್ರಸಾದ್ ಚೊಚ್ಚಲ ಸ್ಪರ್ಧೆಯಲ್ಲೇ 36,675 ಮತಗಳ ಅಂತರದ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಗಣೇಶ್ ಅವರು 1,07,794 ಮತಗಳನ್ನು ಪಡೆದರೆ, ಅವರ ಸಮೀಪದ ಪ್ರತಿಸ್ಪರ್ಧಿ ಶಾಸಕ ಸಿ.ಎಸ್. ನಿರಂಜನ ಕುಮಾರ್ 71,119 ಮತಗಳನ್ನು ಪಡೆಯುವ ಮೂಲಕ ಪರಾಭವಗೊಂಡಿದ್ದಾರೆ. ಗಣೇಶ್ ಗೆಲುವಿನ ಮೂಲಕ ಕ್ಷೇತ್ರದಲ್ಲಿ ತಂದೆ, ತಾಯಿ ಮತ್ತು ಮಗ ಮೂವರೂ ಶಾಸಕರಾಗಿ ಆಯ್ಕೆಯಾದ ದಾಖಲೆ ನಿರ್ಮಾಣವಾಗಿದೆ. ಗಣೇಶ್ ಅವರು ಮೊದಲ ಸುತ್ತಿನಿಂದಲೇ ಭಾರಿ ಅಂತರವನ್ನು ಕಾಯ್ದುಕೊಂಡರು. ಯಾವ ಸುತ್ತಿನಲ್ಲೂ ಅವರು ಮುನ್ನಡೆ ಬಿಟ್ಟುಕೊಡಲಿಲ್ಲ. ಗಣೇಶ್ ಅವರು ಶೇ. 57.34 ರಷ್ಟು ಮತಗಳನ್ನೂ, ನಿರಂಜನ್ ಶೇ. 37.83ರಷ್ಟು ಮತಗಳನ್ನು ಪಡೆದಿದ್ದಾರೆ.

ಕ್ಷೇತ್ರದಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಪಕ್ಷೇತರವಾಗಿ ಸ್ಪರ್ಧಿಸಿದ್ದ ಎಂ.ಪಿ. ಸುನೀಲ್ 2,227 ಮತಗಳನ್ನು ಹಾಗೂ ಜೆಡಿಎಸ್ ಅಭ್ಯರ್ಥಿ ಕಡಬೂರು ಮಂಜುನಾಥ್ 1850 ಮತಗಳನ್ನು ಪಡೆಯಲಷ್ಟೇ ಶಕ್ಯರಾದರು. ಒಬ್ಬೊಬ್ಬರನ್ನೇ ಹೆಚ್ಚು ಬಾರಿ ಗೆಲ್ಲಿಸಿಕೊಂಡ ಕ್ಷೇತ್ರ ಗುಂಡ್ಲುಪೇಟೆ. ಕೆ.ಎಸ್. ನಾಗರತ್ನಮ್ಮ 7 ಬಾರಿ, ಮಹದೇವಪ್ರಸಾದ್ ಅವರು 5 ಬಾರಿ ಗೆದ್ದಿದ್ದರು. ಇಂಥ ಕ್ಷೇತ್ರದಲ್ಲಿ ಸಿ.ಎಸ್. ನಿರಂಜನ್ ಕುಮಾರ್ ಅವರನ್ನು ಕ್ಷೇತ್ರದ ಜನತೆ ಕೇವಲ ಒಂದೇ ಬಾರಿಗೆ ತಿರಸ್ಕರಿಸಿದ್ದಾರೆ.

ತಮ್ಮ ತಂದೆ ಎಚ್.ಎಸ್. ಮಹದೇವಪ್ರಸಾದ್ ಅವರ ವರ್ಚಸ್ಸಿನೊಂದಿಗೆ ಕ್ಷೇತ್ರದೊಂದಿಗೆ ಗಣೇಶ್ ನಿಕಟ ಸಂಪರ್ಕ ಹೊಂದಿದ್ದರು. ಅಧಿಕಾರ ಇಲ್ಲದಿದ್ದರೂ ಜನರ ಕಷ್ಟಗಳಿವೆ ಸ್ಪಂದಿಸಿದ ಅವರ ಸಜ್ಜನಿಕೆಯ ನಡವಳಿಕೆ, ನೆರವು, ನಿರೀಕ್ಷೆಗೂ ಮೀರಿದ ಅಂತರದೊಂದಿಗೆ ಗಣೇಶ್ ಪ್ರಸಾದ್ ಗೆ ಗೆಲುವು ತಂದುಕೊಟ್ಟಿದೆ.

ಕ್ಷೇತ್ರದಲ್ಲಿ ಕೋವಿಡ್‌ನಿಂದ ತೊಂದರೆಗೀಡಾದವರು, ಇತರೆ ಕಾರಣಗಳಿಗೆ ಅಕಾಲಿಕ ಮೃತಪಟ್ಟವರ ಕುಟುಂಬದ ನೆರವಿಗೆ ನಿಂತದ್ದು, ಎಲ್ಲ ಸಮಾಜಗಳ ದೇವಾಲಯಗಳ ನಿರ್ಮಾಣಕ್ಕೆ ಧನಸಹಾಯ ಮಾಡಿದ್ದು, ಸದ್ದಿಲ್ಲದೇ ಪಕ್ಷದ ಹಿರಿಯರು, ಹಿತೈಷಿಗಳ ಮಾರ್ಗದರ್ಶನ, ಸಲಹೆ, ಸಹಕಾರದಲ್ಲಿ ತಮ್ಮದೇ ಶೈಲಿಯಲ್ಲಿ ಪಕ್ಷ ಸಂಘಟನೆ ಮಾಡಿದ್ದು, ಎದುರಾಳಿಗಳನ್ನು ಟೀಕಿಸದೇ ತಮ್ಮಷ್ಟಕ್ಕೆ ಕೆಲಸ ಮಾಡಿಕೊಂಡು ಹೋಗಿದ್ದು, ಮತದಾರರನ್ನು ಸೆಳೆದಿದೆ.

ಅತಿಯಾದ ಆತ್ಮ ವಿಶ್ವಾಸ, ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಸುತ್ತಲಿದ್ದವರ ಬಗ್ಗೆ ಸಾರ್ವಜನಿಕ ವಲಯದಲ್ಲಿ ಉಂಟಾಗಿದ್ದ ಬೇಸರ. ಗೆಲುವಿಗೆ ಸಂಘಟಿತ ಕಾರ್ಯತಂತ್ರ ರೂಪಿಸಲು ಸಾಧ್ಯವಾಗದಿರುವುದು, ನಾನಾ ಕಾರಣಗಳಿಗೆ ಮುನಿಸಿಕೊಂಡವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದು. ಆರಂಭದಲ್ಲೇ ಬಂಡಾಯ ಶಮನ ಮಾಡದಿರುವುದು. ಹೋಬಳಿವಾರು ಸಿಗಬಹುದಾದ ಮತಗಳು, ಲೀಡ್ ಹೆಚ್ಚಿಸಲು ಕಾರ್ಯತಂತ್ರ ಮಾಡದಿರುವುದು ನಿರಂಜನ್ ಅವರ ಸೋಲಿಗೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಅಭಿವೃದ್ಧಿ ಕಾಮಗಾರಿಗಳ ವ್ಯವಸ್ಥಿತ ಹಂಚಿಕೆ ಮಾಡದಿರುವುದು. ತಮ್ಮ ಪಕ್ಷದ ಪ್ರಾಮಾಣಿಕ ಕಾರ್ಯಕರ್ತರ ಮಾತು ಮೀರಿ ಅನ್ಯ ಪಕ್ಷದ ಮುಖಂಡರ ಪಕ್ಷ ಸೇರ್ಪಡೆ. ಇದರೊಂದಿಗೆ ಆಡಳಿತ ವಿರೋಧಿ ಅಲೆಯೂ ಸೇರಿಕೊಂಡಿತು.

ಇನ್ನು ಗಣೇಶಪ್ರಸಾದ್ ತಾವು ಎದುರಿಸಿದ ಮೊದಲ ಚುನಾವಣೆಯಲ್ಲೇ ಜಯಭೇರಿ ಬಾರಿಸಿದ್ದಾರೆ. ಇವರ ತಂದೆ ಮಹದೇವಪ್ರಸಾದ್ ಅವರು ಮೊದಲ ಎರಡು ಚುನಾವಣೆಯಲ್ಲಿ ಸೋತು, ಬಳಿಕ ಐದು ಚುನಾವಣೆಗಳಲ್ಲಿ ಸತತ ಗೆಲುವು ಸಾಧಿಸಿದ್ದರು. ತಾಯಿ ಮೋಹನಕುಮಾರಿ ಅವರು 2017ರ ಉಪ ಚುನಾವಣೆಯಲ್ಲಿ ಗೆದ್ದರೆ, 2018ರ ಸಾರ್ವತ್ರಿಕ ಚುನಾವಣೆಯಲ್ಲಿ ಇದೇ ನಿರಂಜನ್‌ಕುಮಾರ್ ವಿರುದ್ಧ ಪರಾಭವಗೊಂಡಿದ್ದರು. ಈಗ 2023ರ ಚುನಾವಣೆಯಲ್ಲಿ ಅವರ ಮಗ ಗೆಲ್ಲುವ ಮೂಲಕ ಕ್ಷೇತ್ರವನ್ನು ಮರಳಿ ಕಾಂಗ್ರೆಸ್ ಪಡೆದುಕೊಂಡಿದೆ.

ಗಣೇಶ್‌ಪ್ರಸಾದ್‌ರಿಗೆ ಅದ್ದೂರಿ ಸ್ವಾಗತ...

ಗುಂಡ್ಲುಪೇಟೆ, ಮೇ 13– 36 ಸಾವಿರಕ್ಕೂ ಅತ್ಯಧಿಕ ಮತಗಳ ಅಂತರದಿಂದ ಜಯಗಳಿಸಿ ಕ್ಷೇತ್ರಕ್ಕೆ ಆಗಮಿಸಿದ ಹೆಚ್.ಎಂ.ಗಣೇಶ್‌ಪ್ರಸಾದ್ ಅವರನ್ನು ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು.

ತಾಲೂಕಿನ ಲಕ್ಕೂರು ಗೇಟ್, ತೆರಕಣಾಂಬಿ, ಕಗ್ಗಳ, ಶಿಂಡನಪುರ. ಚಿಕ್ಕತುಪ್ಪೂರು ಗೇಟ್, ಕೋಡಹಳ್ಳಿ ಸರ್ಕಲ್, ಕಾಂಗ್ರೆಸ್ ಕಚೇರಿ ಬಳಿ ಸಾವಿರಾರು ಕಾರ್ಯಕರ್ತರು ಪಟಾಕಿ ಸಿಡಿಸಿ ಹೂ ಎರಚಿ ಸ್ವಾಗತಿಸಿದರು. ಮಿಂಚು ಗುಡುಗಿನ ಜತೆ ಬೀಳುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ಕಾದು ನಿಂತಿದ್ದ ಕಾರ್ಯಕರ್ತರು ನೂತನ ಶಾಸಕರಿಗೆ ಜೈಕಾರ ಹಾಕಿದರು. ಅಭಿಮಾನಿಗಳ ಅಭಿಮಾನದಲ್ಲಿ ಮಿಂದೆದ್ದ ಗಣೇಶ್ ಪ್ರಸಾದ್ ಜತೆ ಅವರ ಪತ್ನಿ ವಿದ್ಯಾ ಗಣೇಶ್, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಮುಖಂಡರಾದ ಜಿ.ಕೆ.ನಾಜಿಮುದ್ದೀನ್, ಕಬ್ಬಹಳ್ಳಿ ಮಹೇಶ್ ಜತೆ ತೆರೆದ ವಾಹನದ ಮೇಲೆ ಮೆರವಣಿಗೆ ಸಾಗಿದರು.

ಕಾಂಗ್ರೆಸ್ ಕಚೇರಿ ಬಳಿ ಕಾದು ನಿಂತಿದ್ದ ಸಾವಿರಾರು ಅಭಿಮಾನಿಗಳು ಜೈಕಾರ ಕೂಗಿದರು. ತನ್ನ ಗೆಲುವಿಗೆ ಕಾರಣರಾದ ಎಲ್ಲಾ ಮತದಾರರು, ಮುಖಂಡರು ಹಾಗೂ ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸಿದರು. ದಿ.ಮಹದೇವಪ್ರಸಾದ್ ಅವಧಿಯಲ್ಲಿ ಮಾಡಿದ್ದ ಅಭಿವೃದ್ಧಿ ಕಾರ್ಯಗಳು ನನ್ನ ಗೆಲುವಿಗೆ ಕಾರಣವಾಗಿವೆ ಎಂದರು.



ಭರವಸೆ ಮೂಡಿಸಿದ ಕವೀಶ್‌ಗೌಡ

ಮೈಸೂರು, ಮೇ 13(ಎಸ್‌ಬಿಡಿ)– ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿ.ಕವೀಶ್ ಗೌಡ, ಮೊದಲ ಅವಕಾಶದಲ್ಲೇ 50 ಸಾವಿರಕ್ಕೂ ಅಧಿಕ ಮತಗಳನ್ನು ಗಳಿಸುವ ಮೂಲಕ ಭರವಸೆಯ ನಾಯಕನಾಗಿ ಹೊರಹೊಮ್ಮಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರ ಎಲ್ಲಾ ಪಕ್ಷಗಳಿಗೂ ಪ್ರತಿಷ್ಠೆಯ ಕಣ. ಕಳೆದ ಬಾರಿ ಹಾಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯನವರನ್ನೇ ಅತ್ಯಧಿಕ ಮತಗಳಿಂದ ಮಣಿಸಿದ್ದ ಜಿ.ಟಿ.ದೇವೇಗೌಡರ ಅಖಾಡ. ಇವರ ವಿರುದ್ಧ ಸ್ಪರ್ಧಿಸಿದ್ದ ಮಾವಿನಹಳ್ಳಿ ಸಿದ್ದೇಗೌಡರು ಕಾಂಗ್ರೆಸ್ ಅಭ್ಯರ್ಥಿ. ಕಡೇ ಗಳಿಗೆಯಲ್ಲಿ ಈ ಜಿದ್ದಾಜಿದ್ದಿನ ಕಣಕ್ಕಿಳಿದ ವಿ.ಕವೀಶ್‌ಗೌಡರು ಅನುಭವಿಯಂತೆ ಚುನಾವಣೆ ನಡೆಸಿದ್ದನ್ನು ಎಲ್ಲರೂ ಮೆಚ್ಚಿದ್ದಾರೆ.

ಕ್ಷೇತ್ರದ ಎಲ್ಲಾ ಮತದಾರರಿಗೂ ಕವೀಶ್ ಗೌಡ ಪರಿಚಿತರಾಗಿರಲಿಲ್ಲ. ಆದಾಗ್ಯೂ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಅತ್ಯಂತ ಕಡಿಮೆ ಅವಧಿಯಲ್ಲೇ ಕ್ಷೇತ್ರದೆಲ್ಲೆಡೆ ಪ್ರವಾಸ ಮಾಡಿ, ಪಕ್ಷ ಸಂಘಟಿಸಿದರು. ಪಕ್ಷದ ಮುಖಂಡರು, ಕಾರ್ಯಕರ್ತರೊಂದಿಗೆ ಬಿರುಸಿನ ಪ್ರಚಾರ ನಡೆಸಿದರು. ಯುವ ಸಮುದಾಯವನ್ನು ಆಕರ್ಷಿಸಿ ಬಿಜೆಪಿಯತ್ತ ಸೆಳೆಯುವಲ್ಲಿ ಯಶಸ್ವಿಯಾದರು. ಬಿಜೆಪಿ ಸರ್ಕಾರದ ಕಾರ್ಯಕ್ರಮ ಹಾಗೂ ಯೋಜನೆಗಳ ಬಗ್ಗೆ ಜನರ ಮನಸ್ಸಿಗೆ ತಟ್ಟುವಂತೆ ಪ್ರಚುರಪಡಿಸಿ ಮತ ಯಾಚಿಸಿದರು.

ಈವರೆಗೆ ಬಿಜೆಪಿ ಗೆಲ್ಲದ ಹಾಗೂ ಜೆಡಿಎಸ್–ಕಾಂಗ್ರೆಸ್ ಪೈಪೋಟಿಯ ಕ್ಷೇತ್ರವೆಂದು ಹಿಂಜರಿಯದೆ ಅತ್ಯಂತ ಆತ್ಮವಿಶ್ವಾಸದಿಂದ ಚುನಾವಣೆ ನಡೆಸಿದರು.



ಬೆಂಗಳೂರು ಯಶವಂತಪುರ ಹಾಗೂ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ವಿಜೇತ ಬಿಜೆಪಿ ಅಭ್ಯರ್ಥಿಗಳಾದ ಎಸ್.ಟಿ.ಸೋಮಶೇಖರ್ ಹಾಗೂ ಟಿ.ಎಸ್.ಶ್ರೀವತ್ಸ ಶನಿವಾರ ರಾತ್ರಿ ಸುತ್ತೂರು ಶ್ರೀಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ಕಾಂಗ್ರೆಸ್ ಜಯಭೇರಿಗೆ ಸಂದೇಶ್ ಹರ್ಷ



ಮೈಸೂರು, ಮೇ 13– ರಾಜ್ಯ ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್ ಸ್ವಾಗತಿಸಿದ್ದಾರೆ. ರಾಜ್ಯದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡಿ ಆಶೀರ್ವದಿಸಿದ್ದಾರೆ. ಈ ಜನಾದೇಶ ಸ್ಥಿರ ಸರ್ಕಾರಕ್ಕೆ ನಾಂದಿಯಾಗಿದೆ. ಈ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸೇರಿದಂತೆ ಕಾಂಗ್ರೆಸ್‌ನ ಎಲ್ಲಾ ನಾಯಕರನ್ನೂ ಅಭಿನಂದಿಸುವುದಾಗಿ ತಿಳಿಸಿದ್ದಾರೆ. ಕಾಂಗ್ರೆಸ್‌ನ ಆದರ್ಶವೇ ಜನಪರ ಆಡಳಿತವಾಗಿದೆ. ಇನ್ನು ಮುಂದೆ ರಾಜ್ಯದಲ್ಲಿ ಸರ್ವ ಜನರ ಹಿತಸಾಧನೆ ಮಾಡುವ ಆಡಳಿತ ಬರುವ ಆಶಾಭಾವ ವ್ಯಕ್ತಪಡಿಸಿದ್ದಾರೆ.

92 ವರ್ಷದ ಶಾಮನೂರು ಶಿವಶಂಕರಪ್ಪ ಅತಿ ಹಿರಿಯ, ದರ್ಶನ್ ಧ್ರುವನಾರಾಯಣ್ ಅತಿ ಕಿರಿಯ





ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಶಾಮನೂರು ಶಿವಶಂಕರಪ್ಪ ಮತ್ತೊಮ್ಮೆ ಚುನಾವಣೆಯಲ್ಲಿ ಗೆಲ್ಲುವ ಮೂಲಕ ದೇಶದ ಅತಿ ಹಿರಿಯ ಶಾಸಕ ಎನಿಸಿಕೊಂಡಿದ್ದಾರೆ. ಅವರು ಈ ಬಾರಿ ಒಟ್ಟು 84,258 ಮತಗಳನ್ನು ಪಡೆದಿದ್ದಾರೆ ಎದುರಾಳಿ ಅಭ್ಯರ್ಥಿ ಬಿಜೆಪಿಯ ಬಿ ಜಿ ಅಜಯ ಕುಮಾರ್ 56,410 ಮತಗಳನ್ನು ಪಡೆದಿದ್ದು 27,888 ಮತಗಳ ಅಂತರದಿಂದ ಶಾಮನೂರು ಶಿವಶಂಕರಪ್ಪ ಗೆದ್ದಿದ್ದಾರೆ.

ಕಾಂಗ್ರೆಸ್‌ನ ಭದ್ರಕೋಟೆ ಆಗಿರುವ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಈ ಬಾರಿ ಶಾಮನೂರು ಶಿವಶಂಕರಪ್ಪ ಅವರ ಗೆಲುವು ಕಠಿಣವಿದೆ ಎಂದೇ ಅಂದಾಜಿಸಲಾಗಿತ್ತು. ಆದರೂ, ಅವರು ಬರೋಬ್ಬರಿ 27,888 ಮತಗಳ ಅಂತರದಿಂದ ಮತ್ತೊಮ್ಮೆ ಗೆಲುವಿನ ನಗೆ ಬೀರಿದ್ದಾರೆ. ಆ ಮೂಲಕ 92 ವರ್ಷ ವಯಸ್ಸಿನಲ್ಲೂ ರಾಜಕೀಯ ಹುರುಪು ಉಳಿಸಿಕೊಂಡಿದ್ದಾರೆ. ಇಲ್ಲಿ ಜೆಡಿಎಸ್ ಅಭ್ಯರ್ಥಿ ಅಮಾನುಲ್ಲಾ ಖಾನ್ 1,296 ಮತಗಳನ್ನು ಗಳಿಸಿದ್ದಾರೆ. ದಾವಣಗೆರೆ ದಕ್ಷಿಣದಲ್ಲಿ ಒಟ್ಟು 2,10,668 ಮತದಾರರಿದ್ದು, ಅವರಲ್ಲಿ 1,45,534 ಮತದಾನವಾಗಿತ್ತು.

ನಂಜನಗೂಡು ಕ್ಷೇತ್ರದಲ್ಲಿ ದರ್ಶನ್ ಧ್ರುವನಾರಾಯಣ್ ಜಯ ಗಳಿಸಿ ಅತಿ ಕಿರಿಯ ಶಾಸಕ ಎನಿಸಿಕೊಂಡಿದ್ದಾರೆ. 28 ವರ್ಷದ ದರ್ಶನ್ ಧ್ರುವನಾರಾಯಣ್ ಅವರ, ತಂದೆ ಧ್ರುವನಾರಾಯಣ್ ಹಾಗೂ ತಾಯಿಯನ್ನು ಕೇವಲ 15 ದಿನಗಳ ಅಂತರದಲ್ಲಿ ಕಳೆದುಕೊಂಡಿದ್ದರು. ಅನುಕಂಪದ ಅಲೆಯ ಮೇಲೆ ದರ್ಶನ್ ಮೇಲುಗೈ ಸಾಧಿಸಿದ್ದಾರೆ. ಬಿಜೆಪಿಯ ಹಾಲಿ ಶಾಸಕ ಹರ್ಷವರ್ಧನ್ ವಿರುದ್ಧ ದರ್ಶನ್ ಜಯ ಗಳಿಸಿದ್ದಾರೆ.

ಚನ್ನಪಟ್ಟಣದಲ್ಲಿ ಕುಮಾರಸ್ವಾಮಿ ಗೆದ್ದರೆ; ರಾಮನಗರದಲ್ಲಿ ನಿಖಿಲ್‌ಗೆ ಸೋಲು

ಇನ್ನಿತರೆಡೆ ತಂದೆ ಮಕ್ಕಳ ಜಯಭೇರಿ

ಬೆಂಗಳೂರು, ಮೇ 13(ಕೆಎಂಶಿ)– ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕಣಕ್ಕಿಳಿದಿದ್ದ ತಂದೆ–ಮಕ್ಕಳಲ್ಲಿ ನಿಖಿಲ್ ಕುಮಾರ ಸ್ವಾಮಿ ಅವರನ್ನು ಹೊರತು ಪಡಿಸಿ ಕಣದಲ್ಲಿದ್ದವರೆಲ್ಲರೂ ಜಯಗಳಿಸಿದ್ದಾರೆ.



ಜೆಡಿಎಸ್ ಅಭ್ಯರ್ಥಿಯಾಗಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಜಯಗಳಿಸಿದ್ದರೆ, ಅವರ ಪುತ್ರ ಹಾಗೂ ಯುವ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ರಾಮನಗರ ಕ್ಷೇತ್ರದಲ್ಲಿ ಪರಾಭವಗೊಂಡಿದ್ದಾರೆ.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಕಣಕ್ಕಿಳಿದಿದ್ದ ಮಾಜಿ ಸಚಿವ ಜಿ.ಟಿ. ದೇವೇಗೌಡ ಅವರು ಮರು ಆಯ್ಕೆಯಾಗಿದ್ದಾರೆ. ಅವರ ಪುತ್ರ ಜಿ.ಡಿ.ಹರೀಶ್‌ಗೌಡ ಅವರು ಮೊದಲ ಬಾರಿಗೆ ಹುಣಸೂರು ಕ್ಷೇತ್ರದಿಂದ ಚುನಾಯಿತರಾಗಿದ್ದಾರೆ.

ಅರಕಲಗೂಡು ಕ್ಷೇತ್ರದಿಂದ ಜೆಡಿಎಸ್‌ನ ಎ. ಮಂಜು ಅವರು ಜಯಗಳಿಸಿದ್ದಾರೆ. ಅವರ ಪುತ್ರ, ಕಾಂಗ್ರೆಸ್ ಅಭ್ಯರ್ಥಿಯಾಗಿ ಮಡಿಕೇರಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಡಾ.ಮಂಥರ ಗೌಡ ಅವರು ಗೆಲುವು ಸಾಧಿಸಿದ್ದಾರೆ. ತಂದೆ ಜೆಡಿಎಸ್‌ನಿಂದ ಗೆದ್ದರೆ, ಪುತ್ರ ಕಾಂಗ್ರೆಸ್‌ನಿಂದ ಜಯಗಳಿಸಿ ಅಚ್ಚರಿಗೆ ಕಾರಣರಾಗಿದ್ದಾರೆ.

ಕಾಂಗ್ರೆಸ್‌ನ ಹಿರಿಯ ಶ್ಯಾಮನೂರು ಶಿವಶಂಕರಪ್ಪ ಅವರು ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಜಯಗಳಿಸಿದ್ದಾರೆ. ಅವರ ಪುತ್ರ ಹಾಗೂ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದಾರೆ. ವಿಜಯನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಮಾಜಿ ಸಚಿವ ಎಂ. ಕೃಷ್ಣಪ್ಪ ಹಾಗೂ ಅವರ ಪುತ್ರ ಪ್ರಿಯಕೃಷ್ಣ ಅವರು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಿಂದ ಜಯ ಗಳಿಸಿದ್ದಾರೆ.

ಕೇಂದ್ರದ ಮಾಜಿ ಸಚಿವ ಹಾಗೂ ಕಾಂಗ್ರೆಸ್‌ನ ಹಿರಿಯ ನಾಯಕ ಕೆ.ಎಚ್. ಮುನಿಯಪ್ಪ ದೇವನಹಳ್ಳಿಯಿಂದ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರೆ, ಅವರ ಪುತ್ರಿ ರೂಪಾ ಶಶಿಕಲಾ ಕೆಜಿಎಫ್‌ನಿಂದ ಮರು ಆಯ್ಕೆಯಾಗಿದ್ದಾರೆ.

ಹಲವರಿಗೆ ಠೇವಣಿಯೂ ಇಲ್ಲ!

ಮೈಸೂರು, ಮೇ 13(ಎಸ್‌ಬಿಡಿ)– ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ಸೇರಿದಂತೆ 3ನೇ ಸ್ಥಾನದ ಬಹುತೇಕ ಅಭ್ಯರ್ಥಿಗಳು ಠೇವಣಿಯನ್ನೂ ಉಳಿಸಿಕೊಂಡಿಲ್ಲ.

ಪಿರಿಯಾಪಟ್ಟಣ ಕ್ಷೇತ್ರದಲ್ಲಿ 1,65,156 ಮತ ಚಲಾವಣೆಯಾಗಿದ್ದು, ಇದರಲ್ಲಿ 85,944 ಮತಗಳೊಂದಿಗೆ ಕಾಂಗ್ರೆಸ್‌ನ ಕೆ.ವೆಂಕಟೇಶ್ ಗೆದ್ದಿದ್ದಾರೆ. ಪ್ರತಿಸ್ಪರ್ಧಿ ಜೆಡಿಎಸ್‌ನ ಕೆ.ಮಹದೇವ್ 66,269 ಮತ ಪಡೆದಿದ್ದು, ಬಿಜೆಪಿ ಅಭ್ಯರ್ಥಿ ಸಿ.ಹೆಚ್.ವಿಜಯಶಂಕರ್(7,373 ಮತ) ಠೇವಣಿಯನ್ನೂ ಉಳಿಸಿಕೊಂಡಿಲ್ಲ.

ಹಾಗೆಯೇ ಚಾಮರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಮೇಶ್ (4549 ಮತ), ಕೃಷ್ಣರಾಜ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಕೆ.ವಿ.ಮಲ್ಲೇಶ್(5027), ಹುಣಸೂರು ಬಿಜೆಪಿ ಅಭ್ಯರ್ಥಿ ದೇವರಹಳ್ಳಿ ಸೋಮಶೇಖರ್(6,258), ಕೆ.ಆರ್.ನಗರದ ಬಿಜೆಪಿ ಅಭ್ಯರ್ಥಿ ಹೊಸಹಳ್ಳಿ ವೆಂಕಟೇಶ್ (2,350), ವರುಣದ ಜೆಡಿಎಸ್ ಅಭ್ಯರ್ಥಿ ಡಾ.ಭಾರತಿ ಶಂಕರ್(1037) ಸೇರಿ ಹಲವರು ಠೇವಣಿ ಕಳೆದುಕೊಂಡಿದ್ದಾರೆ.

ಚಲಾವಣೆಯಾದ ಒಟ್ಟು ಮತಗಳ ಆರನೇ ಒಂದು ಭಾಗದಷ್ಟು ಮತ ಪಡೆದ ಅಭ್ಯರ್ಥಿಗಳಿಗೆ ಮಾತ್ರ ಚುನಾವಣಾ ಆಯೋಗ ಠೇವಣಿ ಹಿಂದಿರುಗಿಸುತ್ತದೆ.

ಹಾವು ಏಣಿ ಆಟದಂತೆ ಸಾಗಿದ ಚಾಮರಾಜ, ತಿ.ನರಸೀಪುರ, ಕೆ.ಆರ್.ನಗರ ಕ್ಷೇತ್ರದ ಮತ ಎಣಿಕೆ



ಮೈಸೂರು,ಮೇ 13 (ಎಂಟಿವೈ) – ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಎಣಿಕಾ ಕಾರ್ಯದ ವೇಳೆ ಚಾಮರಾಜ, ತಿ.ನರಸೀಪುರ ಹಾಗೂ ಕೆ.ಆರ್.ನಗರದ ಕ್ಷೇತ್ರದ ಎಣಿಕೆ ಕುತೂಹಲ ಮೂಡಿಸಿ, ಎರಡೂ ಪಕ್ಷಗಳ ಕಾರ್ಯಕರ್ತರನ್ನು ತುದಿಗಾಲಲ್ಲಿ ನಿಲ್ಲಿಸುವಂತೆ ಮಾಡಿತು.

ಜೆಡಿಎಸ್‌ನ ಇಬ್ಬರು ಹಾಗೂ ಬಿಜೆಪಿಯ ಒಬ್ಬರು ಶಾಸಕರು ಪುನರ್ ಆಯ್ಕೆ ಬಯಸಿ ಚುನಾವಣಾ ಕಣಕ್ಕಿಳಿದಿದ್ದ, ಈ ಮೂರು ಕ್ಷೇತ್ರಗಳಲ್ಲೂ ಮತ ಎಣಿಕಾ ಕಾರ್ಯ ರೋಚಕ ಹಾಗೂ ಕುತೂಹಲ ಮೂಡಿಸಿತ್ತು. ಅದರಲ್ಲೂ ಚಾಮರಾಜ ಕ್ಷೇತ್ರದ ಫಲಿತಾಂಶ ಆರಂಭದಲ್ಲಿ ಹಾವು–ಏಣಿಯಂತೆ ಸಾಗಿತು. ಪ್ರತಿಯೊಂದು ಸುತ್ತಿನ ಎಣಿಕೆಯಲ್ಲೂ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಅಭ್ಯರ್ಥಿಗಳ ನಡುವೆ ನೇರಾ ಹಣಾಹಣಿ ಏರ್ಪಟ್ಟಿತ್ತು. ಒಂದು ಸುತ್ತಿನಲ್ಲಿ ಬಿಜೆಪಿಯ ಎಲ್. ನಾಗೇಂದ್ರ ಮುನ್ನಡೆ ಸಾಧಿಸಿದರೆ, ಮತ್ತೊಂದು ಸುತ್ತಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್ ಗೌಡ ಮುನ್ನಡೆ ಕಾಯ್ದು ಕೊಳ್ಳುತ್ತಿದ್ದರು. ಹೀಗೆ ಪ್ರತಿಯೊಂದು ಸುತ್ತಿನಲ್ಲೂ ರೋಚಕತೆ ಕಾರಣವಾಗುತ್ತಿದ್ದ ಚಾಮರಾಜ ಕ್ಷೇತ್ರದಲ್ಲಿ 12ನೇ ಸುತ್ತಿನ ಬಳಿಕ ಕೆಹರೀಶ್‌ಗೌಡ ಮುನ್ನಡೆಯನ್ನು ಹೆಚ್ಚಿಸಿಕೊಳ್ಳುತ್ತಾ ಸಾಗಿದರು.

ಇದರಿಂದ 3 ಸಾವಿರ ಅಂತರದಲ್ಲೇ ಮುನ್ನಡೆ ಕಾಯ್ದುಕೊಂಡ ಕಾಂಗ್ರೆಸ್ ಅಭ್ಯರ್ಥಿಗೆ 17ನೇ ಸುತ್ತಿನಲ್ಲಿ ಬಿಜೆಪಿ ಅಭ್ಯರ್ಥಿಗೆ ಹೆಚ್ಚು ಮತ ಲಭಿಸಿದವು. ಇದರಿಂದ ಮುನ್ನಡೆ ಕೇವಲ ಒಂದು ಸಾವಿರಕ್ಕೆ ಕುಸಿಯಿತು. ಆ ನಂತರ ಎಣಿಕೆ ಮಾಡಿದ ಬೂತ್‌ಗಳಲ್ಲಿ ಕಾಂಗ್ರೆಸ್‌ಗೆ ಹೆಚ್ಚಿನ ಮತ ಲಭಿಸುತ್ತಾ ಸಾಗಿತು. ಅಂತಿಮವಾಗಿ ಹಾಲಿ ಶಾಸಕ ಎಲ್.ನಾಗೇಂದ್ರ ಅವರನ್ನು ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ 4094 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸಿದರು.

ಮಗ್ಗಲು ಬದಲಾಯಿಸಿದ ಕ್ಷೇತ್ರ: ತಿ.ನರಸೀಪುರ ಹಾಗೂ ಕೆ.ಆರ್.ನಗರದ ಎಣಿಕಾ ಕಾರ್ಯದಲ್ಲಿ ಫಲಿತಾಂಶ ಮಗ್ಗಲು ಬದಲಾಯಿಸಿತು. ಈ ಕ್ಷೇತ್ರದಲ್ಲಿ ಆರಂಭದ 3–4 ಸುತ್ತಿನ ನಂತರ ಮಧ್ಯಂತರದಲ್ಲಿ 12ನೇ ಸುತ್ತಿನವರೆಗೂ ಸಾ.ರಾ.ಮಹೇಶ್ ಮುನ್ನಡೆ ಕಾಯ್ದುಕೊಂಡು ಬಂದು, ತದನಂತರ ಎಡವಿದರು. ಕೆ.ಆರ್.ನಗರ ಕ್ಷೇತ್ರದ ಶಾಸಕ ಸಾ.ರಾ.ಮಹೇಶ್ ನಿರೀಕ್ಷೆಯಂತೆ 10 ಸುತ್ತುಗಳಲ್ಲೂ ಮುನ್ನಡೆ ಕಾಯ್ದು ಕೊಂಡು, ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಅವರ ವಿರುದ್ಧ ಮತ್ತೊಮ್ಮೆ ಗೆಲುವು ಸಾಧಿಸಲಿದ್ದಾರೆ ಎಂಬ ಸಂದೇಶ ಹೊರಹೊಮ್ಮಿತ್ತು. ಆದರೆ, 10ನೇ ಸುತ್ತಿನಲ್ಲಿ ಸಾ.ರಾ.ಮಹೇಶ್ ಅವರ ಮುನ್ನಡೆ ಕೇವಲ ಎರಡಂಕಿಗೆ ಕುಸಿಯಿತು.

ಆ ಬಳಿಕ ಕಾಂಗ್ರೆಸ್ ಅಭ್ಯರ್ಥಿ ಡಿ. ರವಿಶಂಕರ್ ನಿಧಾನಗತಿಯಲ್ಲಿ ಮುನ್ನಡೆ ಹೆಚ್ಚಿಸಿಕೊಂಡು ಸಾಗಿದರು. ಅಂತಿಮವಾಗಿ 25,639 ಮತಗಳ ಅಂತರದಿಂದ ಗೆಲುವಿನ ನಗೆ ಬೀರಿದರು. ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡು ಬಂದ ಸಾ.ರಾ. ಮಹೇಶ್ ಸೋಲುತ್ತಾರೆ ಎಂದು ಅವರ ಅಭಿಮಾನಿಗಳು ನಿರೀಕ್ಷಿಸಿರಲಿಲ್ಲ. ಆದರೆ ಅಂತಿಮವಾಗಿ ಬಾರಿ ಅಂತರದಲ್ಲಿ ಸೋಲೊಪ್ಪಿಕೊಂಡಿದ್ದು, ಅವರ ಅಭಿಮಾನಿಗಳಿಗೆ ಆಘಾತವನ್ನುಂಟು ಮಾಡಿದೆ.

ಮೋಡಿ ಮಾಡಿದ ಹೆಚ್‌ಸಿಎಂ: ಕಳೆದ ಚುನಾವಣೆಯಲ್ಲಿ ಸೋಲುಂಡಿದ್ದ ಮಾಜಿ ಸಚಿವ ಡಾ.ಹೆಚ್.ಸಿ.ಮಹಾದೇವಪ್ಪ ಈ ಬಾರಿ ಮತ್ತೊಮ್ಮೆ ಆಯ್ಕೆ ಬಯಸಿ ತಿ.ನರಸೀಪುರ ಕ್ಷೇತ್ರದಲ್ಲಿ ಚುನಾವಣಾ ಕಣಕ್ಕಿಳಿದಿದ್ದರು. ಪ್ರತಿಸ್ಪರ್ಧಿಯಾಗಿ ಜೆಡಿಎಸ್‌ನಿಂದ ಹಾಲಿ ಶಾಸಕ ಅಶ್ವಿನ್ ಕುಮಾರ್ ಮರು ಆಯ್ಕೆ ಬಯಸಿ ಕಣಕ್ಕಿಳಿದಿದ್ದರು. ಈ ಕ್ಷೇತ್ರ ಮತ ಎಣಿಕೆ ಕುತೂಹಲ ಉಂಟು ಮಾಡಿತ್ತು ಆರಂಭದಿಂದ 10ನೇ ಸುತ್ತಿನವರೆಗೆ ಜೆಡಿಎಸ್ ಅಭ್ಯರ್ಥಿ ಮುನ್ನಡೆ ಸಾಧಿಸುತ್ತಾ, ಗೆಲುವಿನ ನಾಗಾಲೋಟದಲ್ಲಿ ಸಾಗುತ್ತಿದ್ದರು.

ಮಂಕಾಗಿದ್ದ ಕಾಂಗ್ರೆಸ್ ಅಭ್ಯರ್ಥಿ ಡಾ.ಹೆಚ್.ಸಿ.ಮಹಾದೇವಪ್ಪ ಅವರ ಮುನ್ನಡೆಯ ಆಟ 10ನೇ ಸುತ್ತಿನ ನಂತರ ಆರಂಭವಾಯಿತು. ಆ ಬಳಿಕ ಎಣಿಕೆಯಾದ ಎಲ್ಲಾ ಸುತ್ತುಗಳಲ್ಲೂ ಮುನ್ನಡೆ ಸಾಧಿಸುತ್ತಲೇ ಹೋದರು. ಒಂದು ಹಂತದಲ್ಲಿ 5 ಸಾವಿರ ಮತಗಳ ಹಿನ್ನಡೆ ಅನುಭವಿಸಿದ್ದ ಡಾ.ಹೆಚ್.ಸಿ. ಮಹಾದೇವಪ್ಪ ಅಂತಿಮವಾಗಿ 18,619 ಮತಗಳ ಅಂತರದಿಂದ ಗೆಲುವಿನ ನಗೆ ಬೀರಿದರು. ಮತ್ತೊಮ್ಮೆ ಕಾಂಗ್ರೆಸ್‌ಗೆ ಹಿನ್ನಡೆಯಾಗಬಹುದು ಎಂದು ನರಸೀಪುರ ಕ್ಷೇತ್ರದ ಜನತೆ ಅಭಿಪ್ರಾಯಪಟ್ಟಿದ್ದರು. ಕಾಂಗ್ರೆಸ್ ಕಾರ್ಯಕರ್ತರಲ್ಲೂ ಉತ್ಸಾಹ ಕಳೆಗುಂದುತ್ತಿತ್ತು. ಆ ಬಳಿಕ ಒಂದೇ ಸುತ್ತಿನಲ್ಲಿ ಲಭ್ಯವಾದ ಮತ ಕಾಂಗ್ರೆಸ್ ಕಾರ್ಯಕರ್ತರನ್ನು ಫೀನಿಕ್ಸ್ ಹಕ್ಕಿಯಂತೆ ಬಡಿದೆಬ್ಬಿಸಿತು. ಆ ಬಳಿಕ ಹಿಂದಿರುಗಿ ನೋಡದೆ ಮುನ್ನಡೆ ಹೆಚ್ಚಿಸಿಕೊಂಡು ಸಾಗಿದರು.

ಸಿದ್ದರಾಮಯ್ಯ ನಿವಾಸದಲ್ಲಿ ಗೆಲುವಿನ ಸಂಭ್ರಮ

ನೆಚ್ಚಿನ ನಾಯಕನಿಗೆ ಅಭಿನಂದನೆಯ ಸುರಿ ಮಳೆ




ಮೈಸೂರು,ಮೇ 13 (ಪಿಎಂ)– ಮಾಜಿ ಮುಖ್ಯಮಂತ್ರಿಗಳೂ ಆದ ವಿಪಕ್ಷ ನಾಯಕ ಸಿದ್ದರಾಮಯ್ಯ ವರುಣದಲ್ಲಿ ಅಭೂತಪೂರ್ವ ಗೆಲುವು ಹಾಗೂ ಕಾಂಗ್ರೆಸ್ ಪರ ಫಲಿತಾಂಶ ಹೊರಬೀಳುತ್ತಿದ್ದಂತೆ ಶನಿವಾರ ಮಧ್ಯಾಹ್ನ ಮೈಸೂರಿನ ಟಿ.ಕೆ.ಬಡಾವಣೆಯಲ್ಲಿರುವ ಸಿದ್ದರಾಮಯ್ಯ ನಿವಾಸದ ಆವರಣದಲ್ಲಿ ಪಕ್ಷದ ಕಾರ್ಯಕರ್ತರು ಹಾಗೂ ಅವರ ಅಭಿಮಾನಿಗಳ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ಭಾರೀ ಸಂಖ್ಯೆಯಲ್ಲಿ ನೆರೆದಿದ್ದ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಸಿದ್ದರಾಮಯ್ಯ ಪರವಾಗಿ ಜೈಕಾರದ ಘೋಷಣೆ ಮೊಳಗಿಸುವುದು ಸಾಮಾನ್ಯವಾಗಿತ್ತು. ಪಕ್ಷದ ಮುಖಂಡರು, ಕಾರ್ಯಕರ್ತರು ತಂಡೋಪತಂಡವಾಗಿ ಬಂದು ಸಿದ್ದರಾಮಯ್ಯನವರಿಗೆ ಅಭಿನಂದನೆಯ ಮಳೆ ಸುರಿಸಿದರು. ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು. ಬೃಹತ್ ಹೂವಿನ ಹಾರ, ಹೂಗುಚ್ಛದ ಅಭಿಮಾನದಲ್ಲಿ ಸಿದ್ದರಾಮಯ್ಯ ಮಿಂದೆದ್ದರು.

ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳ ಅಪೇಕ್ಷೆಯಂತೆ ಮನೆಯ ಮಹಡಿಯಲ್ಲಿ ಬಂದು ಸಿದ್ದರಾಮಯ್ಯ ಕೈ ಬೀಸುತ್ತಿದ್ದಂತೆ ಪಟಾಕಿ ಸಿಡಿಸಿ ಸಂಭ್ರಮಿಸಲಾಯಿತು. ಅಲ್ಲದೆ, ಶಿಳ್ಳೆ, ಕೇಕೆ, ಹರ್ಷೋದ್ಗಾರದ ಮೂಲಕ ಸಿದ್ದರಾಮಯ್ಯಗೆ ಅಭಿಮಾನ ವ್ಯಕ್ತಪಡಿಸಿ ಸಂಭ್ರಮಿಸಿದರು. ಅಭಿಮಾನಿಗಳು ಹಾಗೂ ಕಾರ್ಯಕರ್ತರನ್ನು ನಿಯಂತ್ರಿಸುವಲ್ಲಿ ಪೊಲೀಸರು ಹರಸಾಹಸ ಪಡಬೇಕಾಯಿತು.

'ಮುಂದಿನ ಮುಖ್ಯಮಂತ್ರಿ... ಮೈಸೂರು ಹುಲಿ... ಸಿದ್ದರಾಮಯ್ಯನವರಿಗೆ ಜೈ' ಎಂಬ ಘೋಷಣೆಗಳು ಮೊಳಗಿದವು. ತಮಟೆ ಸದ್ದಿಗೆ ಸಿದ್ದರಾಮಯ್ಯ ಪರ ಜೈಕಾರ ಹಾಕುತ್ತ ಕುಣಿದು ಕುಪ್ಪಳಿಸಿದ ಅಭಿಮಾನಿಗಳು ತಮ್ಮ ನೆಚ್ಚಿನ ನಾಯಕನಿಗೆ ಅಭಿಮಾನದ ಹೊಳೆ ಹರಿಸಿದರು. ಅಲ್ಲದೆ, ಸಿದ್ದರಾಮಯ್ಯ ಭಾವಚಿತ್ರವಿರುವ ಹಳದಿ ಬಣ್ಣದ ಬಾವುಟಗಳು ಅಭಿಮಾನಿಗಳ ಕೈಯಲ್ಲಿ ರಾರಾಜಿಸಿದವು.



ಸಿದ್ದು–ಜಿಟಿಡಿ ಪರಸ್ಪರ ಶುಭಾಶಯ



ಮೈಸೂರು, ಮೇ 13(ಎಂಕೆ)– ರಾಜ್ಯ ವಿಧಾನಸಭಾ ಚುನಾವಣೆ ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ ವೇಳೆ ಮುಖಾಮುಖಿಯಾದ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಪರಸ್ಪರ ಶುಭಾಶಯ ಕೋರಿದರು.

ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿನ ಮತ ಎಣಿಕೆ (ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು) ಕೇಂದ್ರದ ಗೇಟ್ ಬಳಿ ನಿಂತಿದ್ದ ಶಾಸಕ ಜಿ.ಟಿ.ದೇವೇಗೌಡರು, ಸಿದ್ದರಾಮಯ್ಯ ಅವರ ಕಾರು ಬರುತ್ತಿದ್ದಂತೆ 'ಸಿದ್ದರಾಮಯ್ಯ ಸಾಹೇಬ್ರು ಬಂದರು ದಾರಿ ಬಿಡಿ ಎಂದು ಹೇಳಿ ಮುಂದೆ ಹೋಗಿ ಶುಭಾಶಯ ತಿಳಿಸಿದರು. ಇದಕ್ಕೆ ಪ್ರತಿಯಾಗಿ ಸಿದ್ದರಾಮಯ್ಯ ಅವರು, ಜಿ.ಟಿ.ದೇವೇಗೌಡರಿಗೆ ಗೆಲುವಿನ ಶುಭ ಕೋರಿದರು. ಈ ವೇಳೆ ಜಿ.ಟಿ.ದೇವೇಗೌಡರ ಪುತ್ರ ಹಾಗೂ ಹುಣಸೂರು ಕ್ಷೇತ್ರದಿಂದ ಗೆದ್ದಿರುವ ಜಿ.ಡಿ.ಹರೀಶ್‌ಗೌಡರು ಇದ್ದರು. ಅವರನ್ನು ಸಿದ್ದರಾಮಯ್ಯನವರು ಆತ್ಮೀಯವಾಗಿ ಮಾತನಾಡಿದರು.

2018ರ ವಿಧಾನ ಸಭಾ ಚುನಾವಣೆಯಲ್ಲಿ ಒಂದೇ ಕ್ಷೇತ್ರದಲ್ಲಿ ಪ್ರತಿಸ್ಪರ್ಧಿಗಳಾಗಿದ್ದ ಈ ಇಬ್ಬರೂ ನಾಯಕರು ಈ ಬಾರಿ ಪ್ರತ್ಯೇಕ ಕ್ಷೇತ್ರಗಳಲ್ಲಿ ಜಯಗಳಿಸಿದ್ದಾರೆ. ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಮೂರನೇ ಬಾರಿ ಜಯಗಳಿಸಿದರೆ, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜಿ.ಟಿ.ದೇವೇಗೌಡರು ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ.

ಸಿ.ಪ್ರೀತಮ್ ಉನ್ನತ ಶ್ರೇಣಿ



ಮೈಸೂರು, ಮೇ 13– ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮರಿಮಲ್ಲಪ್ಪ ಪ್ರೌಢಶಾಲೆಯ ವಿದ್ಯಾರ್ಥಿ, ಮೈಸೂರು ತಾಲೂಕು ಶಿವಪುರ ಗ್ರಾಮದ ಚಂದ್ರಸ್ವಾಮಿ ದಂಪತಿ ಪುತ್ರ ಸಿ.ಪ್ರೀತಮ್ 625ಕ್ಕೆ 584 ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.

ನಾವು ಮುಂದೆಯೂ ಜನರೊಂದಿಗಿರುತ್ತೇವೆ...

ಸೋತ ಅಭ್ಯರ್ಥಿಗಳ ಪ್ರತಿಕ್ರಿಯೆ

ಮೈಸೂರು, ಮೇ 13(ಆರ್‌ಕೆ, ಎಂಕೆ)– ಮತ ಎಣಿಕೆ ಮುಕ್ತಾಯಗೊಂಡಿದ್ದು, ಫಲಿತಾಂಶ ಹೊರ ಬಿದ್ದಿದೆ. ಮೈಸೂರು ಭಾಗದಲ್ಲಿ ಸ್ಪರ್ಧಿಸಿ ಸೋತ ಕೆಲ ಅಭ್ಯರ್ಥಿಗಳು 'ಮೈಸೂರು ಮಿತ್ರ'ನಲ್ಲಿ ತಮ್ಮ ಸೋಲಿನ ಸಂಬಂಧ ಪ್ರತಿಕ್ರಿಯೆ ನೀಡಿದ್ದಾರೆ.

ನನಗೆ ಆಶೀರ್ವಾದ: ಎನ್.ಆರ್. ಕ್ಷೇತ್ರದಲ್ಲಿ ತನ್ವೀರ್ ಸೇಠ್ ವಿರುದ್ಧ ಸ್ಪರ್ಧಿಸಿ ಸೋತಿರುವ ಬಿಜೆಪಿಯ ಸಂದೇಶ್ ಸ್ವಾಮಿ, ಹಿಂದುಳಿದವರು, ಎಸ್ಸಿ, ಎಸ್ಟಿ ಸಮುದಾಯ, ಅಲ್ಪಸಂಖ್ಯಾತರು ಕೈಹಿಡಿದಿದ್ದರೆ ನಾನು ಗೆಲ್ಲುತ್ತಿದ್ದೆ. ಕ್ಷೇತ್ರದಲ್ಲಿ ನಾನು ನಿರಂತರವಾಗಿ ಜನರೊಂದಿಗಿದ್ದು, ಸೇವೆಯಲ್ಲಿ ತೊಡಗಿದ್ದರಿಂದ ಈ ಬಾರಿ 52,800 ಮತದಾರರು ನನಗೆ ಆಶೀರ್ವಾದ ಮಾಡಿದ್ದಾರೆ. ಜನರ ತೀರ್ಪಿಗೆ ತಲೆಬಾಗುತ್ತೇನೆ. ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ ಧೃತಿಗೆಡದೇ ನಾನು ಜನಸೇವೆಯನ್ನು ಮುಂದುವರಿಸುತ್ತೇನೆ. ಸೋಲನ್ನು ಗೆಲುವೆಂದು ತಿಳಿದು ಮುಂದುವರಿಯುತ್ತೇನೆ ಎಂದು ತಿಳಿಸಿದರು.



ಜನರ ಮನಸ್ಸು ಗೆದ್ದೆ: ಕೆಲವೇ ದಿನಗಳಲ್ಲಿ ಕ್ಷೇತ್ರದ ಮತದಾರರ ಮನಗೆದ್ದರಲ್ಲದೆ, ಭವಿಷ್ಯದ ನಾಯಕರಾಗಿ ಬಿಂಬಿತರಾಗಿದ್ದ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕವೀಶ್‌ಗೌಡ, ನಾನು ಪಕ್ಷ ಸೇರಿದ ಅತೀ ಕಡಿಮೆ ಅವಧಿಯಲ್ಲಿ ಅಭ್ಯರ್ಥಿಯಾದೆ. ಯುವಕ ಬೇಕೆಂದು ಕ್ಷೇತ್ರದ 51,000 ಮಂದಿ ನನಗೆ ಬೆಂಬಲ ನೀಡಿರುವುದು ನನಗೆ ಸಂತಸ, ಸಮಾಧಾನತಂದಿದೆ.ಎಂದು ಅಭಿವೃದ್ಧಿ, ಬದಲಾವಣೆ ತರುವ ನಿಟ್ಟಿನಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜನರು ನನ್ನ ಮೇಲೆ ಇಟ್ಟಿರುವ ಭರವಸೆ, ವಿಶ್ವಾಸ ವನ್ನು ನಾನು ಮರೆಯುವಂತಿಲ್ಲ. ಚುನಾವಣೆಯಲ್ಲಿ ಸೋತಿರಬಹುದು, ಆದರೆ ಜನರ ಮನಸ್ಸಿನಲ್ಲಿ ಇದ್ದೇನೆ ಎಂಬುದು ಸೋಲನ್ನು ಮರೆಸಿದೆ ಎಂದು ತಿಳಿಸಿದರು.



ನಾವೇ ಕಾರಣ: ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಮಾತನಾಡಿ, ನನ್ನ ಸೋಲಿಗೆ ನಮ್ಮಿಂದಾದ ಕೆಲ ಲೋಪಗಳೇ ಕಾರಣವೇ ಹೊರತು, ಜನರಲ್ಲ. 79 ಸಾವಿರಕ್ಕೂ ಹೆಚ್ಚು ಮಂದಿ ನನ್ನನ್ನು ಆಶೀರ್ವದಿಸಿದ್ದಾರೆ. ಪಕ್ಷವಾಗಲೀ, ಸಿದ್ದರಾಮಯ್ಯನವರಾಗಲೀ ಕಾರಣವಲ್ಲ. ಮೇ 8ರವರೆಗೂ ಪ್ರಚಾರ ಪ್ರಕ್ರಿಯೆ ಚೆನ್ನಾಗಿಯೇ ನಡೆಯಿತು. 9ರ ನಂತರ ಆದ ಕೆಲ ಲೋಪದಿಂದಾಗಿ ನನಗೆ ಸೋಲಾಯಿತು. ಆದರೆ, ನನಗೆ ಮತ ನೀಡಿದ ಜನರಿಗೆ ಕೃತಜ್ಞನಾಗಿದ್ದೇನೆ ಎಂದು ತಿಳಿಸಿದರು.



ಕ್ಷೇತ್ರದ ಜನ ಸೇವೆ ಮುಂದುವರೆಸುತ್ತೇನೆ: ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್, ಮತದಾರರ ತೀರ್ಪಿಗೆ ತಲೆ ಬಾಗುತ್ತೇನೆ. ನನಗೆ ಮತ ನೀಡಿದ ಎಲ್ಲಾ ಮತದಾರರಿಗೂ ಧನ್ಯವಾದ ಸಲ್ಲಿಸುತ್ತೇನೆ. ಸೋಲು ಅನುಭವಿಸಿದ್ದರೂ ಕ್ಷೇತ್ರದ ಜನ ಸೇವೆಯಲ್ಲಿ ನಿರಂತರವಾಗಿ ತೊಡಗಿಕೊಳ್ಳುತ್ತೇನೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಿರುವುದು ಸಂತಸದ ವಿಚಾರವಾಗಿದ್ದು, ಈ ಸಂಭ್ರಮದಲ್ಲಿ ನಾನು ಕೂಡ ಭಾಗಿಯಾಗುತ್ತೇನೆ ಎಂದರು.



ಎಕ್ಸ್‌ಟ್ರಾ ಇನ್ನಿಂಗ್ಸ್ ಚುನಾವಣಾ ವಿಶೇಷ ಪುಟದಿಂದ

ಕನಕಪುರ



ಡಿ.ಕೆ. ಶಿವಕುಮಾರ್

ಚನ್ನಪಟ್ಟಣ



ಹೆಚ್.ಡಿ. ಕುಮಾರಸ್ವಾಮಿ

ಬೆಳ್ತಂಗಡಿ



ಹರೀಶ್ ಪೂಂಜಾ

ಮೂಡಬಿದಿರೆ



ಉಮಾನಾಥ್ ಕೊಟ್ಯಾನ್

ಮಂಗಳೂರು ನಗರ (ಉ)



ಭರತ್ ಶೆಟ್ಟಿ

ಬಂಟ್ವಾಳ



ರಾಜೇಶ್ ನಾಯ್ಕ್

ಪುತ್ತೂರು



ಅಶೋಕ್ ಕುಮಾರ್ ರೈ

ಸುಳ್ಯ



ಭಾಗಿರಥಿ ಮುರುಳ್ಯ

ಮಂಗಳೂರು ನಗರ (ದ)



ವೇದವ್ಯಾಸ ಕಾಮತ್

ಮಂಗಳೂರು



ಯು.ಟಿ. ಖಾದರ್

ಮೈಸೂರು, ಮಂಡ್ಯ, ಚಾ.ನಗರ, ಕೊಡಗು, ಹಾಸನ ಕ್ಷೇತ್ರ ವಿವರ

ಚಾಮರಾಜ - 217

ಗೆದ್ದವರು: ಕೆ.ಹರೀಶ್‌ಗೌಡ, ಕಾಂಗ್ರೆಸ್
ಮತಗಳು: 72,931
ಸೋತವರು: ಎಲ್.ನಾಗೇಂದ್ರ, ಬಿಜೆಪಿ
ಮತಗಳು: 68,837
ಗೆಲುವಿನ ಅಂತರ: 4094

ನರಸಿಂಹರಾಜ - 21

ಗೆದ್ದವರು: ತನ್ವೀರ್‌ಸೇಠ್, ಕಾಂಗ್ರೆಸ್
ಮತಗಳು: 83,480
ಸೋತವರು: ಸತೀಶ್ ಸಂದೇಶ್‌ಸ್ವಾಮಿ, ಬಿಜೆಪಿ
ಮತಗಳು: 52,360
ಗೆಲುವಿನ ಅಂತರ: 31120

ಕೃಷ್ಣರಾಜ - 216

ಗೆದ್ದವರು: ಶ್ರೀವತ್ಸ, ಬಿಜೆಪಿ
ಮತಗಳು: 73,670
ಸೋತವರು: ಎಂ.ಕೆ.ಸೋಮಶೇಖರ್, ಕಾಂಗ್ರೆಸ್
ಮತಗಳು: 66,457
ಗೆಲುವಿನ ಅಂತರ: 7213

ಚಾಮುಂಡೇಶ್ವರಿ - 215

ಗೆದ್ದವರು: ಜಿ.ಟಿ.ದೇವೇಗೌಡ, ಜೆಡಿಎಸ್
ಮತಗಳು: 1,04,873
ಸೋತವರು: ಮಾವಿನಹಳ್ಳಿ ಸಿದ್ದೇಗೌಡ, ಕಾಂಗ್ರೆಸ್
ಮತಗಳು: 79,373
ಗೆಲುವಿನ ಅಂತರ: 25500

ವರುಣ - 219

ಗೆದ್ದವರು: ಸಿದ್ದರಾಮಯ್ಯ, ಕಾಂಗ್ರೆಸ್
ಮತಗಳು: 1,19,816
ಸೋತವರು: ವಿ.ಸೋಮಣ್ಣ, ಬಿಜೆಪಿ
ಮತಗಳು: 73,653
ಗೆಲುವಿನ ಅಂತರ: 46163

ಹೆಚ್.ಡಿ.ಕೋಟೆ - 213

ಗೆದ್ದವರು: ಅನಿಲ್ ಚಿಕ್ಕಮಾದು, ಕಾಂಗ್ರೆಸ್
ಮತಗಳು: 84,359
ಸೋತವರು: ಕೃಷ್ಣನಾಯಕ, ಬಿಜೆಪಿ
ಮತಗಳು: 49,420
ಗೆಲುವಿನ ಅಂತರ: 34939

ಹುಣಸೂರು - 212

ಗೆದ್ದವರು: ಜಿ.ಡಿ.ಹರೀಶ್‌ಗೌಡ, ಜೆಡಿಎಸ್
ಮತಗಳು: 94,666
ಸೋತವರು: ಹೆಚ್.ಪಿ. ಮಂಜುನಾಥ್, ಕಾಂಗ್ರೆಸ್
ಮತಗಳು: 92,254
ಗೆಲುವಿನ ಅಂತರ: 2412

ಕೆ.ಆರ್.ನಗರ - 211

ಗೆದ್ದವರು: ರವಿಶಂಕರ್, ಕಾಂಗ್ರೆಸ್
ಮತಗಳು: 1,04,502
ಸೋತವರು: ಸಾರಾ ಮಹೇಶ್ ಜೆಡಿಎಸ್
ಮತಗಳು: 78,863
ಗೆಲುವಿನ ಅಂತರ: 25639

ನಂಜನಗೂಡು - 214

ಗೆದ್ದವರು: ದರ್ಶನ್ ಧ್ರುವನಾರಾಯಣ, ಕಾಂಗ್ರೆಸ್
ಮತಗಳು: 1,09,125
ಸೋತವರು: ಹರ್ಷವರ್ಧನ್, ಬಿಜೆಪಿ
ಮತಗಳು: 61,518
ಗೆಲುವಿನ ಅಂತರ: 47607

ಪಿರಿಯಾಪಟ್ಟಣ - 21

ಗೆದ್ದವರು: ಕೆ.ವೆಂಕಟೇಶ್, ಕಾಂಗ್ರೆಸ್
ಮತಗಳು: 85,944
ಸೋತವರು: ಕೆ.ಮಹದೇವ್ ಜೆಡಿಎಸ್
ಮತಗಳು: 66,269
ಗೆಲುವಿನ ಅಂತರ: 19675

ತಿ.ನರಸೀಪುರ - 22

ಗೆದ್ದವರು: ಹೆಚ್.ಸಿ.ಮಹದೇವಪ್ಪ, ಕಾಂಗ್ರೆಸ್
ಮತಗಳು: 77,884
ಸೋತವರು: ಅಶ್ವಿನ್‌ಕುಮಾರ್ ಜೆಡಿಎಸ್
ಮತಗಳು: 59,265
ಗೆಲುವಿನ ಅಂತರ: 18619

ಮಂಡ್ಯ - 189

ಗೆದ್ದವರು: ಗಣಿಗ ರವಿಕುಮಾರ್, ಕಾಂಗ್ರೆಸ್
ಮತಗಳು: 61,411
ಸೋತವರು: ಬಿ.ಆರ್.ರಾಮಚಂದ್ರ ಜೆಡಿಎಸ್
ಮತಗಳು: 59,392
ಗೆಲುವಿನ ಅಂತರ: 2019

ಮದ್ದೂರು - 187

ಗೆದ್ದವರು: ಕದಲೂರು ಉದಯ್, ಕಾಂಗ್ರೆಸ್
ಮತಗಳು: 87,019
ಸೋತವರು: ಡಿ.ಸಿ.ತಮ್ಮಣ್ಣ, ಜೆಡಿಎಸ್
ಮತಗಳು: 62,906
ಗೆಲುವಿನ ಅಂತರ: 24113

ಮಳವಳ್ಳಿ - 186

ಗೆದ್ದವರು: ಪಿ.ಎಂ. ನರೇಂದ್ರ ಸ್ವಾಮಿ, ಕಾಂಗ್ರೆಸ್
ಮತಗಳು: 1,06,498
ಸೋತವರು: ಡಾ.ಕೆ. ಅನ್ನದಾನಿ, ಜೆಡಿಎಸ್
ಮತಗಳು: 59,652
ಗೆಲುವಿನ ಅಂತರ: 46846

ಕೆ.ಆರ್.ಪೇಟೆ - 192

ಗೆದ್ದವರು: ಎಚ್.ಟಿ.ಮಂಜು, ಜೆಡಿಎಸ್
ಮತಗಳು: 80,646
ಸೋತವರು: ಬಿ.ಎಲ್.ದೇವರಾಜ, ಕಾಂಗ್ರೆಸ್
ಮತಗಳು: 58,302
ಗೆಲುವಿನ ಅಂತರ: 22344

ಮೇಲುಕೋಟೆ -188

ಗೆದ್ದವರು: ದರ್ಶನ್ ಪುಟ್ಟಣ್ಣಯ್ಯ ಸರ್ವೋದಯ ಕರ್ನಾಟಕ ಪಕ್ಷ
ಮತಗಳು: 91,151
ಸೋತವರು:ಸಿ.ಎಸ್. ಪುಟ್ಟರಾಜು, ಜೆಡಿಎಸ್
ಮತಗಳು: 80,289
ಗೆಲುವಿನ ಅಂತರ: 10862

ನಾಗಮಂಗಲ -191

ಗೆದ್ದವರು: ಚಲುವರಾಯಸ್ವಾಮಿ, ಕಾಂಗ್ರೆಸ್
ಮತಗಳು: 90,634
ಸೋತವರು: ಸುರೇಶ್ ಗೌಡ, ಜೆಡಿಎಸ್
ಮತಗಳು: 86,220
ಗೆಲುವಿನ ಅಂತರ: 4414

ಶ್ರೀರಂಗಪಟ್ಟಣ - 190


ಗೆದ್ದವರು: ರಮೇಶ್ ಬಂಡಿಸಿದ್ದೇಗೌಡ, ಕಾಂಗ್ರೆಸ್
ಮತಗಳು: 72,817
ಸೋತವರು: ರವೀಂದ್ರ ಶ್ರೀಕಂಠಯ್ಯ ಜೆಡಿಎಸ್
ಮತಗಳು: 61,680
ಗೆಲುವಿನ ಅಂತರ: 11137

ಚಾ.ನಗರ - 223

ಗೆದ್ದವರು: ಸಿ.ಪುಟ್ಟರಂಗ ಶೆಟ್ಟಿ, ಕಾಂಗ್ರೆಸ್
ಮತಗಳು: 83,858
ಸೋತವರು: ವಿ. ಸೋಮಣ್ಣ, ಬಿಜೆಪಿ
ಮತಗಳು: 76,325
ಗೆಲುವಿನ ಅಂತರ: 7533

ಗುಂಡ್ಲುಪೇಟೆ - 224

ಗೆದ್ದವರು: ಗಣೇಶ್ ಪ್ರಸಾದ್, ಕಾಂಗ್ರೆಸ್
ಮತಗಳು: 1,07,794
ಸೋತವರು: ಸಿ.ಎಸ್. ನಿರಂಜನ್ ಕುಮಾರ್, ಬಿಜೆಪಿ
ಮತಗಳು: 71,119
ಗೆಲುವಿನ ಅಂತರ: 36675

ಹನೂರು - 221

ಗೆದ್ದವರು: ಎಂ.ಆರ್. ಮಂಜುನಾಥ್, ಜೆಡಿಎಸ್
ಮತಗಳು: 75632
ಸೋತವರು: ಆರ್. ನರೇಂದ್ರ, ಕಾಂಗ್ರೆಸ್
ಮತಗಳು: 57,978
ಗೆಲುವಿನ ಅಂತರ: 17654

ಕೊಳ್ಳೇಗಾಲ - 222

ಗೆದ್ದವರು: ಎ.ಆರ್.ಕೃಷ್ಣಮೂರ್ತಿ, ಕಾಂಗ್ರೆಸ್
ಮತಗಳು: 1,08,363
ಸೋತವರು: ಎನ್. ಮಹೇಶ್, ಬಿಜೆಪಿ
ಮತಗಳು: 48,844
ಗೆಲುವಿನ ಅಂತರ: 59519

ಮಡಿಕೇರಿ - 208

ಗೆದ್ದವರು: ಡಾ.ಮಂಥರ್‌ಗೌಡ, ಕಾಂಗ್ರೆಸ್
ಮತಗಳು: 84,879
ಸೋತವರು: ಅಪ್ಪಚ್ಚು ರಂಜನ್ ಬಿಜೆಪಿ
ಮತಗಳು: 80,477
ಗೆಲುವಿನ ಅಂತರ: 4402

ವಿರಾಜಪೇಟೆ - 209

ಗೆದ್ದವರು: ಎ.ಎಸ್.ಪೊನ್ನಣ್ಣ, ಕಾಂಗ್ರೆಸ್
ಮತಗಳು: 83,791
ಸೋತವರು: ಕೆ.ಜಿ. ಬೋಪಯ್ಯ, ಬಿಜೆಪಿ
ಮತಗಳು: 79,500
ಗೆಲುವಿನ ಅಂತರ: 4291

ಹಾಸನ - 196

ಗೆದ್ದವರು: ಸ್ವರೂಪ್ ಪ್ರಕಾಶ್, ಜೆಡಿಎಸ್
ಮತಗಳು: 85,176
ಸೋತವರು: ಪ್ರೀತಂಗೌಡ ಬಿಜೆಪಿ
ಮತಗಳು: 77,322
ಗೆಲುವಿನ ಅಂತರ: 7854

ಅರಕಲಗೂಡು- 198

ಗೆದ್ದವರು: ಎ.ಮಂಜು, ಜೆಡಿಎಸ್
ಮತಗಳು: 74,643
ಸೋತವರು: ಎಂ.ಟಿ.ಕೃಷ್ಣೇಗೌಡ, ಪಕ್ಷೇತರ
ಮತಗಳು: 55,038
ಗೆಲುವಿನ ಅಂತರ: 19605

ಅರಸೀಕೆರೆ - 194

ಗೆದ್ದವರು: ಕೆ.ಎಂ. ಶಿವಲಿಂಗೇಗೌಡ, ಕಾಂಗ್ರೆಸ್
ಮತಗಳು: 98,375
ಸೋತವರು: ಎನ್.ಆರ್. ಸಂತೋಷ್, ಜೆಡಿಎಸ್
ಮತಗಳು: 78,198
ಗೆಲುವಿನ ಅಂತರ: 20177

ಬೇಲೂರು - 195

ಗೆದ್ದವರು: ಹುಲ್ಲಳ್ಳಿ ಸುರೇಶ್, ಬಿಜೆಪಿ
ಮತಗಳು: 63,571
ಸೋತವರು: ಬಿ. ಶಿವರಾಮು, ಕಾಂಗ್ರೆಸ್
ಮತಗಳು: 55,835
ಗೆಲುವಿನ ಅಂತರ: 7736

ಹೊಳೆನರಸೀಪುರ - 197

ಗೆದ್ದವರು: ಹೆಚ್.ಡಿ.ರೇವಣ್ಣ, ಜೆಡಿಎಸ್
ಮತಗಳು: 88,103
ಸೋತವರು: ಶ್ರೇಯಸ್ ಎಂ. ಪಟೇಲ್, ಕಾಂಗ್ರೆಸ್
ಮತಗಳು: 84,951
ಗೆಲುವಿನ ಅಂತರ: 3152

ಸಕಲೇಶಪುರ - 199

ಗೆದ್ದವರು: ಸಿಮೆಂಟ್ ಮಂಜು, ಬಿಜೆಪಿ
ಮತಗಳು: 58,604
ಸೋತವರು: ಎಚ್.ಕೆ. ಕುಮಾರಸ್ವಾಮಿ, ಜೆಡಿಎಸ್
ಮತಗಳು: 56,548
ಗೆಲುವಿನ ಅಂತರ: 2056

ಶ್ರವಣ ಬೆಳಗೊಳ - 193

ಗೆದ್ದವರು: ಸಿ.ಎನ್.ಬಾಲಕೃಷ್ಣ, ಜೆಡಿಎಸ್.
ಮತಗಳು: 85,668
ಸೋತವರು: ಎಂ.ಎ. ಗೋಪಾಲಸ್ವಾಮಿ, ಕಾಂಗ್ರೆಸ್
ಮತಗಳು: 79,023
ಗೆಲುವಿನ ಅಂತರ: 6645

ಮೈಸೂರು ಒಟ್ಟು ಕ್ಷೇತ್ರ 11	
ಕಾಂಗ್ರೆಸ್	8
ಬಿಜೆಪಿ	1
ಜೆಡಿಎಸ್	2

ಮಂಡ್ಯ ಒಟ್ಟು ಕ್ಷೇತ್ರ 7	
ಕಾಂಗ್ರೆಸ್	5
ಜೆಡಿಎಸ್	
ರೈತ ಸಂಘ	

ಚಾಮರಾಜನಗರ ಒಟ್ಟು ಕ್ಷೇತ್ರ 4	
ಕಾಂಗ್ರೆಸ್	3
ಜೆಡಿಎಸ್	1

ಕೊಡಗು ಒಟ್ಟು ಕ್ಷೇತ್ರ 2	
ಕಾಂಗ್ರೆಸ್	2

ಹಾಸನ ಒಟ್ಟು ಕ್ಷೇತ್ರ 7	
ಕಾಂಗ್ರೆಸ್	4
ಬಿಜೆಪಿ 2, ಜೆಡಿಎಸ್	1

ಜೆಡಿಎಸ್ 17 ಶಾಸಕರು ಸೋಲು

ಮೈಸೂರು, ಮೇ 13–ಈ ಚುನಾವಣೆಯಲ್ಲಿ ಜೆಡಿಎಸ್ 19 ಸ್ಥಾನಗಳನ್ನು ಪಡೆದಿದೆಯಾದರೂ ಈ ಪಕ್ಷದ 17 ಶಾಸಕರು ಸೋಲನುಭವಿಸಿದ್ದಾರೆ. ಮಾಜಿ ಸಚಿವರಾದ ಬಂಡೆಪ್ಪಕಾಶಂಪೂರ್, ಸಿಎಸ್ ಪುಟ್ಟರಾಜು, ಸಾ.ರಾ.ಮಹೇಶ್, ಶಾಸಕರಾದ ವೆಂಕಟ ರಾವ್ ನಾಡಗೌಡ, ಡಿ.ಸಿ.ತಮ್ಮಣ್ಣ, ಮಾಗಡಿ ಮಂಜುನಾಥ್, ಅಶ್ವಿನ್‌ಕುಮಾರ್, ರವೀಂದ್ರ ಶ್ರೀಕಂಠಯ್ಯ, ಕೆಮಹದೇವ್, ಸಕಲೇಶಪುರದ ಕುಮಾರಸ್ವಾಮಿ, ಬೇಲೂರಿನ ಲಿಂಗೇಶ್, ನಾಗಮಂಗಲದ ಸುರೇಶ್‌ಗೌಡ, ದಾಸರಹಳ್ಳಿ ಮಂಜುನಾಥ್, ನಿಸರ್ಗ ನಾರಾಯಣಸ್ವಾಮಿ, ಶ್ರೀನಿವಾಸಮೂರ್ತಿ, ಕೃಷ್ಣರೆಡ್ಡಿ ಮತ್ತು ರಾಜಾ ವೆಂಕಟಪ್ಪ ನಾಯಕ ಪರಾಭವಗೊಂಡಿದ್ದಾರೆ.

ಮೂರನೇ ಪುಟದಿಂದ

ಕರ್ನಾಟಕ 'ಕೈ' ವಶ

ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸಿನಿಂದಲೇ ಅಧಿಕಾರದ ಚುಕ್ಕಾಣಿ ಹಿಡಿಯಬಹುದೆಂಬ ಭ್ರಮೆಯಲ್ಲಿದ್ದ ಬಿಜೆಪಿಗೆ ರಾಜ್ಯ ಮತದಾರರು ತಕ್ಕಶಾಸ್ತಿ ಮಾಡಿದ್ದಾರೆ.

ಚುನಾವಣಾ ಪೂರ್ವವೇ ಕಾಂಗ್ರೆಸ್ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ರಾಜ್ಯದ ಜನತೆಯ ಮುಂದೆ ಎಳೆ ಎಳೆಯಾಗಿ ಬಿಡಿಸಿಟ್ಟು, ಮತದಾರರ ಮನೋಭಾವನೆ ಪರಿವರ್ತನೆ ಮಾಡುವಲ್ಲಿ ಪಕ್ಷ ಯಶಸ್ಸು ಕಂಡಿದೆ.

ತದನಂತರ ಮಲ್ಲಿಕಾರ್ಜುನ ಖರ್ಗೆಯವರು ರಾಷ್ಟ್ರೀಯ ಅಧ್ಯಕ್ಷರಾಗಿ ನೇಮಕಗೊಂಡಿದ್ದು, ಕರ್ನಾಟಕ ಕಾಂಗ್ರೆಸ್‌ಗೆ ಪರಿಶಿಷ್ಟ ಮತಗಳನ್ನು ಗಟ್ಟಿ ಮಾಡಿಕೊಳ್ಳಲು ಸಾಧ್ಯವಾಯಿತು.

ಪಂಚ ಯೋಜನೆಗಳ ಜೊತೆಗೆ ಉತ್ತರ ಕರ್ನಾಟಕ ಭಾಗದಲ್ಲಿ ಪಂಚಮಸಾಲಿ ಮೀಸಲಾತಿ ಹೋರಾಟ ಚುನಾವಣೆಯಲ್ಲಿ ಬಿಜೆಪಿಗೆ ಭಾರೀ ಹಿನ್ನಡೆಯಾಗಲು ಕಾರಣವಾಯಿತು ಎಂದು ಹೇಳಲಾಗಿದೆ. ಇನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎಂಬ ಹಿನ್ನೆಲೆಯಲ್ಲಿ ಹಳೇ ಮೈಸೂರು ಭಾಗದ ಒಕ್ಕಲಿಗ ಸಮುದಾಯ ಈ ಬಾರಿ ಜೆಡಿಎಸ್ ಅನ್ನು ಕೈಬಿಟ್ಟು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದರಿಂದ ಇಷ್ಟು ದೊಡ್ಡ ಪ್ರಮಾಣದಲ್ಲಿ ಅಭ್ಯರ್ಥಿಗಳು ಗೆಲ್ಲಲು ಕಾರಣವಾಗಿದೆ. ಹಳೇ ಮೈಸೂರು ಭಾಗದಲ್ಲಿ ಶೇಕಡ 90ರಷ್ಟು ಸ್ಥಾನಗಳು ಕಾಂಗ್ರೆಸ್ ಪಾಲಾಗಿವೆ. ಒಕ್ಕಲಿಗರ ಮತಗಳ ಜೊತೆಗೆ ಅಲ್ಪಸಂಖ್ಯಾತರು ಮತ್ತು ಪರಿಶಿಷ್ಟರು ಕೈಹಿಡಿದಿದ್ದರಿಂದ ಇಷ್ಟು ಸ್ಥಾನ ಬರಲು ಸಾಧ್ಯವಾಗಿದೆ. ಅಲ್ಲದೇ ಈ ಭಾಗದಲ್ಲಿ ಬಿಜೆಪಿ ತನ್ನ ಪ್ರಾಬಲ್ಯ ಸ್ಥಾಪಿಸಲು ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ರಾಷ್ಟ್ರೀಯ ನಾಯಕರನ್ನು ದೊಡ್ಡ ಪ್ರಮಾಣದಲ್ಲಿ ಪ್ರಚಾರಕ್ಕೆ ಬಳಸಿತ್ತು. ಇದರಿಂದ ಜೆಡಿಎಸ್‌ನ ಮತಗಳನ್ನು ಒಂದೆಡೆ ಕಸಿದುಕೊಂಡಿತ್ತು. ಶೇಕಡವಾರು ಪ್ರಮಾಣದಲ್ಲಿ ಬಿಜೆಪಿ ತನ್ನ ಮತ ಪ್ರಮಾಣವನ್ನು ಈ ಭಾಗದಲ್ಲಿ ಏರಿಕೆ ಮಾಡಿಕೊಂಡರೂ, ಗೆಲ್ಲಲು ಸಾಧ್ಯವಾಗಲಿಲ್ಲ. ಆದರೆ ಜೆಡಿಎಸ್ ಮತ ಕಸಿದುಕೊಂಡಿದ್ದರೆ, ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಲು ಸಾಧ್ಯವಾಯಿತು. ಉತ್ತರ ಕರ್ನಾಟಕ ಭಾಗದಲ್ಲಿ ಪಂಚಮಸಾಲಿಗಳು ಒಂದೆಡೆ ಕೈಹಿಡಿದಿದ್ದರೆ, ಸಿದ್ದರಾಮಯ್ಯನವರಿಗೆ ನಾಯಕತ್ವ ದೊರೆಯುತ್ತದೆ ಎಂದು ಹಿಂದುಳಿದ ವರ್ಗದವರು ಕಾಂಗ್ರೆಸ್‌ನ ಕೈಹಿಡಿದಿದ್ದೇ ಆ ಭಾಗದಲ್ಲಿ ಬಿಜೆಪಿಯ ಬುಡವನ್ನೇ ಅಲ್ಲಾಡಿಸಲು ಸಾಧ್ಯವಾಗಿದೆ.

ಜೊತೆಗೆ ಬಿ.ಎಸ್.ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸಿ, ಅವರನ್ನು ಬಿಜೆಪಿ ಕಡೆಗಾಣಿಸಿದೆ ಎಂಬ ಭಾವನೆ ವೀರಶೈವ ಸಮುದಾಯದಲ್ಲಿ ಮೊಳಕೆ ಹೊಡೆದಿದ್ದು, ಕಾಂಗ್ರೆಸ್ ಅಧಿಕಾರ ಹಿಡಿಯಲು ಸಾಧ್ಯವಾಗಿದೆ.

ಗುಜರಾತ್ ವಿಧಾನಸಭಾ ಚುನಾವಣಾ ಮಾದರಿಯನ್ನೇ ಕರ್ನಾಟಕದಲ್ಲಿ ಅನುಸರಿಸಲು ಹೋದ ಪರಿಣಾಮ ಬಿಜೆಪಿ ಹಿನ್ನಡೆಗೆ ಒಂದು ಕಾರಣ. ಬಿಜೆಪಿ ಅಧಿಕಾರಕ್ಕೆ ಬಂದಾಗಲೆಲ್ಲ ಭ್ರಷ್ಟಾಚಾರ ಆರೋಪ ಕೇಳಿ ಬಂದಿದೆ. ಆದರೆ ಈ ಬಾರಿ ಕಾಂಗ್ರೆಸ್ ಆ ಭ್ರಷ್ಟಾಚಾರವನ್ನು ಮುಂಚೂಣಿಯಲ್ಲಿಟ್ಟುಕೊಂಡು ಹೋರಾಟ ನಡೆಸಿದ ಫಲ ಆ ಪಕ್ಷವನ್ನು ಅಧಿಕಾರಕ್ಕೆ ತಂದಿದೆ.

ಮೈಸೂರು ಜಿಲ್ಲೆಯಲ್ಲೂ ಕಾಂಗ್ರೆಸ್ ಮೇಲುಗೈ

ಅವರು ಎದುರಾಳಿಯಾಗಿದ್ದ ಸಚಿವ ವಿ.ಸೋಮಣ್ಣ ಅವರನ್ನು ಮಣಿಸಿ ಭಾರೀ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಮಾಜಿ ಸಚಿವರಾದ ತನ್ವೀರ್ ಸೇಠ್ (ಕಾಂಗ್ರೆಸ್), ಕೃಷ್ಣರಾಜದಲ್ಲಿ ನಗರ ಬಿಜೆಪಿ ಅಧ್ಯಕ್ಷ ಟಿ.ಎಸ್.ಶ್ರೀವತ್ಸ, ಚಾಮರಾಜದಲ್ಲಿ ಕೆ.ಹರೀಶ್‌ಗೌಡ (ಕಾಂಗ್ರೆಸ್), ಚಾಮುಂಡೇಶ್ವರಿಯಲ್ಲಿ ಹಾಲಿ ಶಾಸಕ ಜಿ.ಟಿ. ದೇವೇಗೌಡ (ಜೆಡಿಎಸ್), ನಂಜನಗೂಡಿನಲ್ಲಿ ದಿವಂಗತ ಆರ್.ಧ್ರುವನಾರಾಯಣ ಅವರ ಪುತ್ರ ದರ್ಶನ್ (ಕಾಂಗ್ರೆಸ್), ಹೆಚ್.ಡಿ.ಕೋಟೆಯಲ್ಲಿ ಹಾಲಿ ಶಾಸಕ ಅನಿಲ್ ಚಿಕ್ಕಮಾದು (ಕಾಂಗ್ರೆಸ್), ಹುಣಸೂರಿನಲ್ಲಿ ಜಿ.ಟಿ.ದೇವೇಗೌಡರ ಪುತ್ರ ಜಿ.ಡಿ.ಹರೀಶ್‌ಗೌಡ (ಜೆಡಿಎಸ್), ಪಿರಿಯಾಪಟ್ಟಣದಲ್ಲಿ ಕೆ.ವೆಂಕಟೇಶ್ (ಕಾಂಗ್ರೆಸ್) ಹಾಗೂ ಕೆ.ಆರ್.ನಗರದಲ್ಲಿ ಡಿ.ರವಿಶಂಕರ್ (ಕಾಂಗ್ರೆಸ್) ಜಯಶೀಲರಾಗಿದ್ದಾರೆ.

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಅನಿಲ್ ಚಿಕ್ಕಮಾದು ಅವರು 84,359 ಮತಗಳನ್ನು ಪಡೆದು ತಮ್ಮ ಸಮೀಪ ಸ್ಪರ್ಧಿ ಬಿಜೆಪಿಯ ಕೆ.ಎಂ. ಕೃಷ್ಣನಾಯಕ ಅವರ ವಿರುದ್ಧ 34,420 ಮತಗಳ ಅಂತರದಿಂದ ಜಯ ಗಳಿಸಿದ್ದಾರೆ. ಕೃಷ್ಣ ನಾಯಕ ಅವರು 49,420 ಮತಗಳನ್ನು ಪಡೆದರೆ, ಜೆಡಿಎಸ್‌ನ ಜಯಪ್ರಕಾಶ್ ಚಿಕ್ಕಣ್ಣ ಅವರು 43,519 ಮತಗಳನ್ನು ಪಡೆದು ಪರಾಜಯಗೊಂಡರು. ಉಳಿದಂತೆ ಈ ಕ್ಷೇತ್ರದಲ್ಲಿ ಬಿಎಸ್‌ಪಿಯ ಹೋಟೆಲ್ ಶಿವಣ್ಣ 885, ಯುಪಿಜೆಪಿಯ ಹೆಚ್.ಎಂ.ನಾಗೇಶ 567, ಎಸ್‌ಎಜೆಪಿಯ ಕೆ.ವಿ.ರಾಜು 209, ಕೆಆರ್‌ಎಸ್‌ನ ಹೆಚ್.ಎಂ.ಶಿವಪ್ಪ 200, ಪಕ್ಷೇತರರಾದ ಗಿರಿಜಾಂಬ 274, ಜೆ.ಎನ್.ದೇವದತ್ತ 218, ಎ.ಎಂ.ಬಾಬುನಾಯಕ 431, ಎಂ.ಎಸ್.ಶಿವಕುಮಾರ್ 434, ಸಣ್ಣನಾಯಕ 671 ಮತಗಳನ್ನು ಪಡೆದಿದ್ದಾರೆ.

ಪಿರಿಯಾಪಟ್ಟಣ: ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಕೆ.ವೆಂಕಟೇಶ್ ಅವರು 85,944 ಮತಗಳನ್ನು ಪಡೆದು, ತಮ್ಮ ಸಮೀಪ ಸ್ಪರ್ಧಿ ಜೆಡಿಎಸ್‌ನ ಕೆ.ಮಹದೇವ ಅವರನ್ನು 19,645 ಮತಗಳ ಅಂತರದಿಂದ ಜಯಶೀಲರಾಗಿದ್ದಾರೆ. ಉಳಿದಂತೆ ಈ ಕ್ಷೇತ್ರದಲ್ಲಿ ಬಿಜೆಪಿಯ ಸಿ.ಹೆಚ್.ವಿಜಯಶಂಕರ್ 7,373, ಬಿಎಸ್‌ಪಿಯ ಸಿ.ಎಸ್.ಪ್ರದೀಪ 967, ಎಎಪಿಯ ರಾಜಶೇಖರ್ ದೊಡ್ಡಣ್ಣ 1,533, ಕೆಆರ್‌ಎಸ್‌ನ ಗುರುಮೂರ್ತಿ ಜೋಗನಹಳ್ಳಿ 716, ಯುಪಿಜೆಪಿಯ ಪಿ.ಎಸ್. ನವೀನ್ ಕುಮಾರ್ 506, ಪಕ್ಷೇತರರಾದ ಕಿರಣ್ ಹರದೂರು 221, ಆರ್.ತುಂಗಾ ಶ್ರೀನಿವಾಸ್ 646, ಬಿ.ಎಸ್.ಸುಬ್ರಹ್ಮಣ್ಯ 409 ಮತಗಳನ್ನು ಪಡೆದರು.

ತಿ.ನರಸೀಪುರ: ತಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಡಾ. ಹೆಚ್.ಸಿ.ಮಹದೇವಪ್ಪ ಅವರು 77,884 ಮತಗಳನ್ನು ಗಳಿಸಿ ಸಮೀಪ ಸ್ಪರ್ಧಿ ಜೆಡಿಎಸ್‌ನ ಎಂ.ಅಶ್ವಿನ್ ಕುಮಾರ್ ಅವರನ್ನು 18,619 ಮತಗಳ ಅಂತರದಿಂದ ಜಯ ಗಳಿಸಿದ್ದಾರೆ. ಅಶ್ವಿನ್ ಕುಮಾರ್ ಅವರು 59,265 ಮತಗಳನ್ನು ಪಡೆದು ಸೋಲುಂಡರು. ಈ ಕ್ಷೇತ್ರದಲ್ಲಿ ಬಿಜೆಪಿಯ ಡಾ. ಎಂ.ರೇವಣ್ಣ 20,389, ಬಿಎಸ್‌ಪಿಯ ಬಿ.ಆರ್.ಪುಟ್ಟಸ್ವಾಮಿ 992, ಎಎಪಿಯ ಎಂ.ಸಿದ್ದರಾಜು 568, ಆರ್‌ಸಿಪಿಯ ಎಂ.ಚಂದ್ರಪ್ಪ 120, ಕೆಆರ್‌ಎಸ್‌ನ ಎಂ.ಡಿ.ಮಂಜುನಾಥ 170, ಸಿಸಿಪಿಯ ಆರ್.ರೇಣುಕಾ ಸುರೇಶ್ 179, ಎಸ್‌ಎಜೆಪಿಯ ಎ.ಎನ್.ಶಿವಲಿಂಗಪ್ಪ 261, ಐಎಂಪಿಯ ಶ್ರೀನಿವಾಸ 255, ಪಕ್ಷೇತರರಾದ ಕೆ.ಕೆಂಚಯ್ಯ 504 ಹಾಗೂ ಡಾ. ಹಲಗೂಡು ಎಸ್. ಚಂದ್ರಶೇಖರ್ 334 ಮತಗಳನ್ನಷ್ಟೇ ಪಡೆದರು.

ಕೆ.ಆರ್.ಕ್ಷೇತ್ರ: ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಯ ಟಿ.ಎಸ್.ಶ್ರೀವತ್ಸ 73,670 ಮತಗಳನ್ನು ಪಡೆದು ತಮ್ಮ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಎಂ.ಕೆ.ಸೋಮಶೇಖರ್ ಅವರನ್ನು 7,213 ಮತಗಳ ಅಂತರದಿಂದ ಜಯ ಗಳಿಸಿದರು. ಸೋಮಶೇಖರ್ ಅವರು 66,457 ಮತಗಳನ್ನು ಪಡೆದು ಪರಾಜಯಗೊಂಡರು. ಈ ಕ್ಷೇತ್ರದಲ್ಲಿ ಜೆಡಿಎಸ್‌ನ ಕೆ.ವಿ.ಮಲ್ಲೇಶ್ ಅವರು ಕೇವಲ 5,027, ಬಿಎಸ್‌ಪಿಯ ಸಿ.ಶ್ರೀನಿವಾಸ ಪ್ರಸಾದ್ 793, ಐಎಂಪಿಯ ಹಲಗೂಡು ಲಿಂಗರಾಜು 187, ಯುಪಿಜೆಪಿಯ ಎಸ್.ಸುಮಲತಾ 1,159, ಕೆಆರ್‌ಎಸ್‌ನ ಕೆ.ಎಸ್. ಸೋಮಸುಂದರ್ 238, ಎಸ್‌ಯುಸಿಐನ ಪಿ.ಎಸ್.ಸಂಧ್ಯಾ 115, ಪಕ್ಷೇತರರಾದ ಅಮಿತಾಬ 79, ಹೆಚ್.ಪಿ.ಉದಯಶಂಕರ್ 86, ತೇಜಸ್ವಿ ನಾಗಲಿಂಗಸ್ವಾಮಿ 119, ಹೆಚ್.ಎನ್.ಪಾರ್ಥಸಾರಥಿ 124, ಎಸ್.ಪ್ರಕಾಶ್ ಪ್ರಿಯದರ್ಶನ್ 100, ಬಿ.ರೋಹಿತ್ ಕುಮಾರ್ 100, ಎ.ಎಸ್.ಸತೀಶ್ 239 ಹಾಗೂ ಸುಂಡಹಳ್ಳಿ ಸೋಮಶೇಖರ್ 103 ಮತಗಳನ್ನು ಪಡೆದರು.

ಹುಣಸೂರು: ಹುಣಸೂರು ವಿಧಾನಸಭಾ ಕ್ಷೇತ್ರದಲ್ಲಿ ಜೆಡಿಎಸ್‌ನ ಜಿ.ಡಿ.ಹರೀಶ್‌ಗೌಡ ಅವರು 94,666 ಮತಗಳನ್ನು ಪಡೆದು ತಮ್ಮ ಸಮೀಪ ಸ್ಪರ್ಧಿ ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್ ಅವರನ್ನು 2412 ಮತಗಳ ಅಂತರದಿಂದ ಜಯಶೀಲರಾಗಿದ್ದಾರೆ. ಮಂಜುನಾಥ್ ಅವರು 92,254 ಮತಗಳನ್ನು ಪಡೆದು ಪರಾಜಯಗೊಂಡರು. ಈ ಕ್ಷೇತ್ರದಲ್ಲಿ ಬಿಜೆಪಿಯ ದೇವರಹಳ್ಳಿ ಸೋಮಶೇಖರ್ 6258 ಮತಗಳನ್ನು ಪಡೆದರೆ, ಬಿಎಸ್‌ಪಿಯ ಪ್ರಸನ್ನ ಸೋಮನಹಳ್ಳಿ 975, ಎಎಪಿಯ ಜಿ.ರವಿಕುಮಾರ್ 2,912, ಕೆಆರ್‌ಎಸ್‌ನ ಎಮ್ಮೆಕೊಪ್ಪಲು ತಿಮ್ಮಾಬೋವಿ 761, ಯುಪಿಜೆಪಿಯ ಡಿ.ಎನ್.ಸುನೀಲ್ 654, ಸ್ವತಂತ್ರ ಅಭ್ಯರ್ಥಿಗಳಾದ ಉಮೇಶ್ 212, ಚನ್ನೇಗೌಡ 449, ಹೆಚ್.ಪಿ.ರಾಜೇಂದ್ರ 178, ಬಿ.ಎಲ್.ಲೋಕೇಶ 357, ಸಯ್ಯದ್ ಹನೀಫ್ 401 ಮತಗಳನ್ನು ಪಡೆದಿದ್ದಾರೆ.

ಚಾಮರಾಜ: ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಕೆ.ಹರೀಶ್‌ಗೌಡ 72,931 ಮತಗಳನ್ನು ಪಡೆಯುವ ಮೂಲಕ ಎದುರಾಳಿ ಬಿಜೆಪಿಯ ಎಲ್.ನಾಗೇಂದ್ರ ವಿರುದ್ಧ 4,094 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ನಾಗೇಂದ್ರ ಅವರು 68,837 ಮತಗಳನ್ನು ಪಡೆದು ಸೋಲನನುಭವಿಸಿದರು. ಉಳಿದಂತೆ ಈ ಕ್ಷೇತ್ರದಲ್ಲಿ ಜೆಡಿಎಸ್‌ನ ಹೆಚ್.ಕೆ.ರಮೇಶ್ ಅವರು 4,549 ಮತಗಳನ್ನು ಪಡೆದರೆ, ಬಿಎಸ್‌ಪಿಯ ಚಂದ್ರಶೇಖರ್ 363, ಎಎಪಿಯ ಮಾಳವಿಕ ಗುಬ್ಬಿವಾಣಿ 789, ಕೆಆರ್‌ಎಸ್‌ನ ಡಿಪಿಕೆ ಪರಮೇಶ್ 287, ಸಿಸಿಪಿಯ ಎಂ.ಪಂಚಲಿಂಗು 63, ಯುಪಿಜೆಪಿಯ ಪ್ರಭಾನಂದೀಶ್ 907, ಎಸ್‌ಯುಸಿಐನ ಜಿ.ಎಸ್.ಸೀಮಾ 80, ಸ್ವತಂತ್ರ ಅಭ್ಯರ್ಥಿಗಳಾದ ಎಂ.ಮನೋಜ್ ಕುಮಾರ್ 145, ಆರ್.ಯೋಗಾನರಸಿಂಹಮೂರ್ತಿ 123, ಸಲೀಂ ಅಹಮ್ಮದ್ 91, ಹೆಚ್.ಡಿ.ಸಿದ್ದರಾಜು 106 ಹಾಗೂ ಟಿ.ಎಸ್.ಸುರೇಶ್ 163 ಮತಗಳನ್ನು ಪಡೆದಿದ್ದಾರೆ.

ವರುಣ: ಮೈಸೂರಿನ ಹೈವೋಲ್ಟೇಜ್ ಕ್ಷೇತ್ರವಾಗಿದ್ದ ವರುಣದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 1,19,816 ಮತಗಳನ್ನು ಪಡೆಯುವ ಮೂಲಕ ಎದುರಾಳಿ ಅಭ್ಯರ್ಥಿ ಬಿಜೆಪಿಯ ವಿ.ಸೋಮಣ್ಣ ಅವರನ್ನು 46,163 ಮತಗಳ ಭಾರೀ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಅಲ್ಲಿ ವಿ.ಸೋಮಣ್ಣ ಅವರು ಕೇವಲ 73,653 ಮತಗಳನ್ನು ಪಡೆದು ಪರಾಭವಗೊಳ್ಳುವ ಮೂಲಕ ಭಾರೀ ಮುಖಭಂಗ ಅನುಭವಿಸುವಂತಾಗಿದೆ. ಜಾತ್ಯಾತೀತ ಜನತಾದಳದ ಅಭ್ಯರ್ಥಿ ಡಾ.ಎನ್.ಎಲ್.ಭಾರತೀಶಂಕರ್ ಅವರು ಕೇವಲ 1,037 ಮತಗಳನ್ನು ಪಡೆದು ತೃಪ್ತಿಪಡುವಂತಾಗಿದೆ. ಉಳಿದಂತೆ ಕ್ಷೇತ್ರದಲ್ಲಿ ಎಎಪಿಯ ರಾಜೇಶ್ 564, ಕೆಡಿಪಿಯ ಅರುಣ್ ಲಿಂಗ ಕನ್ನಡ ಚಕ್ರವರ್ತಿ 416, ಕೆಜೆಪಿಯ ಎನ್.ಅಂಬರೀಷ್ ಕದಂಬ 242, ಎಸ್‌ಜೆಪಿಯ ಕೆ.ನಾಗೇಶ್ ನಾಯಕ 119, ಯುಪಿಪಿಯ ಆರ್.ಮಹದೇವಸ್ವಾಮಿ 414, ಕೆಆರ್‌ಎಸ್‌ನ ಎಂ.ರವಿಕುಮಾರ್ 220, ಕೆಪಿಪಿಯ ಇ.ಶಿವ 160, ಪಕ್ಷೇತರರಾದ ಪ್ಯಾರಿಜಾನ್ 388, ಎಂ.ಮಹೇಶ್ 199, ಡಾ. ಯು.ಪಿ.ಶಿವಾನಂದ 153 ಮತಗಳನ್ನು ಪಡೆದರು.

ಕೆ.ಆರ್.ನಗರ: ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಡಿ.ರವಿಶಂಕರ್ ಅವರು 1,04,502 ಮತಗಳನ್ನು ಪಡೆದು ಪ್ರತಿಸ್ಪರ್ಧಿ ಜೆಡಿಎಸ್‌ನ ಸಾ.ರಾ.ಮಹೇಶ್ ಅವರನ್ನು 25,639 ಮತಗಳಿಂದ ಪರಾಭವಗೊಳಿಸಿ ಭಾರೀ ಅಂತರದ ಜಯ ಗಳಿಸಿದ್ದಾರೆ. ಅಲ್ಲಿ ಸಾ.ರಾ.ಮಹೇಶ್ ಅವರು 78,863 ಮತಗಳಿಗೆ ತೃಪ್ತಿಪಡಬೇಕಾಯಿತು. ಬಿಜೆಪಿಯ ಹೊಸಹಳ್ಳಿ ವೆಂಕಟೇಶ್ ಅವರು 2,350 ಮತ ಗಳಿಸಿದರೆ, ಬಿಎಸ್‌ಪಿಯ ಭರತ್ ಕುಮಾರ್ 545, ಎಎಪಿಯ 1,120, ಕೆಆರ್‌ಎಸ್‌ನ ಪರಮೇಶ 276, ಯುಪಿಪಿಯ ಕೆ.ಮೋಹನ್ 380 ಹಾಗೂ ಪಕ್ಷೇತರ ಅಭ್ಯರ್ಥಿ ಶಿವುಗೌಡ 266 ಮತಗಳನ್ನು ಪಡೆದಿದ್ದಾರೆ.

ನರಸಿಂಹರಾಜ: ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ತನ್ವೀರ್ ಸೇಠ್ ಅವರು 83,480 ಮತಗಳನ್ನು ಗಳಿಸಿ ತಮ್ಮ ಸಮೀಪ ಸ್ಪರ್ಧಿ ಬಿಜೆಪಿಯ ಎಸ್.ಸತೀಶ್ (ಸಂದೇಶ್ ಸ್ವಾಮಿ) ಅವರನ್ನು 31,120 ಮತಗಳಿಂದ ಮಣಿಸಿ ಭರ್ಜರಿ ಜಯ ಗಳಿಸಿದ್ದಾರೆ. ಸತೀಶ್ ಅವರು 52,360 ಮತಗಳನ್ನು ಪಡೆದು ಎರಡನೇ ಸ್ಥಾನ ಉಳಿಸಿಕೊಂಡಿದ್ದಾರೆ. ಅಲ್ಲಿ ಎಸ್‌ಡಿಪಿಯ ಅಬ್ದುಲ್ ಮಜೀದ್ 41,037 ಮತಗಳನ್ನು ಪಡೆದು ಮೂರನೇ ಸ್ಥಾನಕ್ಕೆ ದೂಡಲ್ಪಟ್ಟರು. ಉಳಿದಂತೆ ಕ್ಷೇತ್ರದಲ್ಲಿ ಜಾತ್ಯಾತೀತ ಜನತಾ ದಳದ ಅಬ್ದುಲ್ ಖಾದರ್ 3,548, ಎಎಪಿಯ ಧರ್ಮಶ್ರೀ 696, ಎಐಎಂಇಪಿಯ ಖಲೀಲ್ ಉರ್ ರೆಹಮಾನ್ ಷರೀಫ್ 126, ಎನ್‌ಸಿಪಿಯ ರೆಹನಾಭಾನು 134, ಯುಪಿಪಿಯ ಲೀಲಾ ಶಿವಕುಮಾರ್ 786, ಆರ್‌ಪಿಐನ ವಿನೋದ್ ಚಾಕೋ ಅವರು 120, ಕೆಆರ್‌ಎಸ್‌ನ ಸುಂದರ್ ಪ್ರೇಮ್‌ಕುಮಾರ್ 196, ಪಕ್ಷೇತರರಾದ ಎಂ.ಎನ್.ನೀಲಕಂಠ 80, ಆರ್.ಸಿ. ರಾಜ್ 150, ರಾಬರ್ಟ್ ಇ ಕುಸ್‌ರಾಜ್ 235, ಎಂ. ಲಿಂಗರಾಜ್ 91, ಜಿ.ಲೋಕೇಶ್‌ಕುಮಾರ್ 209, ಜಿ.ಬಿ.ಶಿವಣ್ಣ 346, ಎಸ್.ಅಲೀಷಾನ್ 138 ಮತಗಳನ್ನು ಪಡೆದಿದ್ದಾರೆ.

ನಂಜನಗೂಡು: ನಂಜನಗೂಡು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ದರ್ಶನ್ ಧ್ರುವನಾರಾಯಣ ಅವರು 1,09,125 ಮತಗಳನ್ನು ಪಡೆದು ತಮ್ಮ ಸಮೀಪ ಸ್ಪರ್ಧಿ ಬಿಜೆಪಿಯ ಬಿ.ಹರ್ಷವರ್ಧನ್ ಅವರನ್ನು 47,468 ಮತಗಳ ಅಂತರದಿಂದ ಸೋಲಿಸಿ ಭಾರೀ ಅಂತರದ ಗೆಲುವು ಸಾಧಿಸಿದ್ದಾರೆ. ಹರ್ಷವರ್ಧನ್ ಅವರು 61,518 ಮತಗಳನ್ನು ಪಡೆದರು. ಅಲ್ಲಿ ಬಿಎಸ್‌ಪಿಯ ಶ್ರೀಕಂಠ 902, ಎಎಪಿಯ ಹೆಚ್.ಹನುಮಯ್ಯ 483, ಕೆಆರ್‌ಪಿಪಿಯ ಆರ್.ಮಾದೇಶನ್ 453, ಕೆಆರ್‌ಎಸ್‌ನ ಎಂ.ಪಿ.ವಿಜಯ ಕುಮಾರ್ 164, ಪಕ್ಷೇತರರಾದ ಅನಂದ ಜೀವನ್ ರಾಂ 126, ವಿ.ಗೋವಿಂದರಾಜು 150, ಜಿ.ಡಿ.ರಾಜಗೋಪಾಲ್ 159, ಬಿ.ವಿದ್ಯಾಸಾಗರ್ 269, ಹೆಚ್.ಕೆ.ಸ್ವಾಮಿ ಹರದನಹಳ್ಳಿ 746, ಸುಬ್ಬಯ್ಯ 317 ಮತಗಳನ್ನು ಪಡೆದಿದ್ದಾರೆ.

ಚಾಮುಂಡೇಶ್ವರಿ: ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಹಾಲಿ ಶಾಸಕ ಜೆಡಿಎಸ್‌ನ ಜಿ.ಟಿ.ದೇವೇಗೌಡ ಅವರು ತಮ್ಮ ಎದುರಾಳಿಯಾದ ಕಾಂಗ್ರೆಸ್ ಅಭ್ಯರ್ಥಿ ಎಸ್.ಸಿದ್ದೇಗೌಡ ಅವರನ್ನು 25,500 ಮತಗಳ ಅಂತರದಿಂದ ಸೋಲಿಸಿ ಭರ್ಜರಿ ಜಯ ಗಳಿಸಿದ್ದಾರೆ. ಸಿದ್ದೇಗೌಡ ಅವರು 79,373 ಮತಗಳನ್ನು ಪಡೆದರೆ, ಬಿಜೆಪಿಯ ವಿ.ಕವೀಶ್‌ಗೌಡ 51,318 ಮತಗಳನ್ನು ಪಡೆದು 3ನೇ ಸ್ಥಾನ ತಲುಪಿದರು. ಉಳಿದಂತೆ ಕ್ಷೇತ್ರದಲ್ಲಿ ಎಪಿಪಿಯ ಕಿರಣ್ ನಾಗೇಶ್ ಕಲ್ಯಾಣಿ 1,890, ಬಿಎಸ್‌ಪಿಯ ಜೆ. ಜಯಶಂಕರ್ 1,393, ಕೆಆರ್‌ಎಸ್‌ನ ಎಂ.ಎಸ್.ಪ್ರವೀಣ್ 1,070, ಕೆಪಿಪಿಯ ಬಿ.ಶಿವಣ್ಣ 297, ಯುಪಿಪಿಯ ಎಸ್.ಹರೀಶ 2,219, ಪಕ್ಷೇತರ ಅಭ್ಯರ್ಥಿಗಳಾದ ಎಂ.ನಾಗರಾಜು 240, ಜಿ.ಎನ್.ಮಹದೇವ 373, ಕೆ.ಎಂ.ಮಹೇಶ್‌ಗೌಡ 594, ಎಂ.ರಂಗಸ್ವಾಮಿ 632, ಸಿದ್ದೇಗೌಡ 348, ಸುರೇಶ್ 328 ಮತಗಳನ್ನು ಗಳಿಸಿದ್ದಾರೆ.

ರಾವಂದೂರಲ್ಲಿ ವೆಂಕಟೇಶ್ ಗೆಲುವಿಗೆ ವಿಜಯೋತ್ಸವ

ರಾವಂದೂರು, ಮೇ 13– ಹೆಚ್ಚು ಬಹುಮತ ಪಡೆದು ಪಿರಿಯಾಪಟ್ಟಣ ಕ್ಷೇತ್ರದ ನೂತನ ಶಾಸಕರಾಗಿ ಆಯ್ಕೆಯಾದ ಕೆ.ವೆಂಕಟೇಶ್ ರವರ ಬೆಂಬಲಿಗರು ಗೆಲುವಿನ ಸುದ್ದಿ ಹೊರ ಬೀಳುತ್ತಿದ್ದಂತೆ ಕಾರ್ಯಕರ್ತರು ಪಕ್ಷದ ಘೋಷಣೆಯನ್ನು ಕೂಗುವ ಮೂಲಕ ವಿಜಯೋತ್ಸವ ಆಚರಿಸಿದರು.

ಪಕ್ಷದ ಕಾರ್ಯಕರ್ತನಾದ ಡಿ.ಎನ್. ನಂದೀಶ ಮಾತನಾಡಿ, ತಾಲೂಕಿನಲ್ಲಿ ಬದಲಾವಣೆಯ ಸಮಯ ಬಂದಿದೆ. ಸರಳ ಸಜ್ಜನಿಕೆ ಸೌಮ್ಯ ಸ್ವಭಾವ ರಾಜಕಾರಣಿ ಎಂದು ಹೆಸರುವಾಸಿ ಪಡೆದ ವೆಂಕಟೇಶ್ ಅವರು ತಾಲೂಕಿನ ಅಭಿವೃದ್ಧಿ ವಿಚಾರದಲ್ಲಿ ಹೆಸರು ಪಡೆದ ವ್ಯಕ್ತಿಯಾಗಿದ್ದು ಮುಂದಿನ ದಿನದಲ್ಲಿ ತಾಲೂಕಿನ ಸಂಪೂರ್ಣ ಅಭಿವೃದ್ಧಿ ಮಾಡುವ ಕನಸನ್ನು ಹೊಂದಿದ್ದಾರೆ ಎಂದು ತಿಳಿಸಿದರು

ಇದೇ ಸಮಯದಲ್ಲಿ ರಾವಂದೂರಿನ ಸುತ್ತಮುತ್ತ ಗ್ರಾಮಗಳಲ್ಲೂ ಕೆ.ವೆಂಕಟೇಶ್‌ರವರ ಗೆಲುವಿಗೆ ಸಿಹಿ ಹಾಗೂ ಪಟಾಕಿ ಸಿಡಿಸುವ ಮೂಲಕ ಸಂಭ್ರಮಾಚರಣೆ ಮಾಡಿದರು. ಇದೇ ಸಂದರ್ಭ ಜಗದೀಶ್, ಧನುಷ್ ಪಟೇಲ್, ನಂದೀಶ, ಕೀರ್ತಿ, ಮಂಜುನಾಥ್, ರಾಮೇಗೌಡ, ತೋಂಟ ಸೇಡುವಂತೆ ಹಲವು ಕಾರ್ಯಕರ್ತರು ಹಾಜರಿದ್ದರು.



ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಗ್ರಾಮದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವೆಂಕಟೇಶ್ ಗೆಲುವಿಗೆ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.



ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ ಜಿ.ಡಿ.ಹರೀಶ್‌ಗೌಡರಿಂದ ಕೃತಜ್ಞತೆ

ಹುಣಸೂರು, ಮೇ 13– ಹುಣಸೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ಹಾಲಿ ಶಾಸಕ ಹೆಚ್.ಪಿ. ಮಂಜುನಾಥ್ ಅವರನ್ನು ಸೋಲಿಸಿ ಪ್ರಪ್ರಥಮ ಬಾರಿಗೆ ವಿಧಾನಸಭೆ ಪ್ರವೇಶಿಸಿದ ಸಹಕಾರಿ ಧುರೀಣ, ಜೆಡಿಎಸ್ ಯುವ ಮುಖಂಡ ಜಿ.ಡಿ.ಹರೀಶ್ ಗೌಡ ಪಟ್ಟಣದಲ್ಲಿ ರೋಡ್ ಶೋ ನಡೆಸಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು.

ಮೈಸೂರಿನಲ್ಲಿ ನಡೆದ ಎಣಿಕಾ ಕಾರ್ಯದಲ್ಲಿ ಭಾಗವಹಿಸಿದ್ದ ಹರೀಶ್‌ಗೌಡರು ಫಲಿತಾಂಶ ಪ್ರಕಟವಾಗಿ ತಾವು ಗೆಲುವು ಸಾಧಿಸುತ್ತಿದ್ದಂತೆ ಪಟ್ಟಣಕ್ಕೆ ಆಗಮಿಸಿ ತೆರೆದ ವಾಹನದಲ್ಲಿ ತೆರಳಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು. ಇದೇ ವೇಳೆ ಅಭಿಮಾನಿಗಳು ಹಾಗೂ ಜೆಡಿಎಸ್ ಕಾರ್ಯಕರ್ತರು ಭಾರೀ ಪ್ರಮಾಣದ ಪಟಾಕಿ ಸಿಡಿಸಿ, ಜಯಕಾರ ಕೂಗಿ, ಹರ್ಷ ವ್ಯಕ್ತ ಪಡಿಸಿದರು.

ಅಭಿವೃದ್ಧಿಯ ಹರಿಕಾರ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ನ್ಯಾಯ ಒದಗಿಸಿದ ದಿವಂಗತ ದೇವರಾಜ ಅರಸು ಅವರಂತ ಧೀಮಂತ ಮುಖ್ಯಮಂತ್ರಿ ನೀಡಿದ ಹುಣಸೂರು ಕ್ಷೇತ್ರದಲ್ಲಿ ಮತದಾರರು ಈ ಬಾರಿ ಬದಲಾವಣೆ ಬಯಸಿ ಸಹಕಾರಿ ಧುರೀಣ, ಯುವ ಉತ್ಸಾಹಿ, ಜೆಡಿಎಸ್ ಮುಖಂಡ ಜಿ.ಡಿ. ಹರೀಶ್‌ಗೌಡರನ್ನು ಆಶೀರ್ವದಿಸಿ ಆಯ್ಕೆ ಮಾಡಿದ್ದಾರೆ.

2018ರಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್. ವಿಶ್ವನಾಥ್ ಈ ಕ್ಷೇತ್ರದಲ್ಲಿ ಹೆಚ್.ಪಿ.ಮಂಜುನಾಥ್ ವಿರುದ್ಧ ಗೆಲುವು ಸಾಧಿಸಿದ್ದರು. ಅದರೆ ನಂತರದ ದಿನಗಳಲ್ಲಿ ಬದಲಾದ ರಾಜಕೀಯ ವಿದ್ಯಾಮಾನಗಳಿಂದ ಅಪರೇಷನ್ ಕಮಲದ ಮೂಲಕ ಬಿಜೆಪಿ ಸೇರಿದ ವಿಶ್ವನಾಥ್ ಮತ್ತೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್ ವಿರುದ್ಧ ಪರಾಭವಗೊಂಡರು. ಮಂಜುನಾಥ್ ಈ ಕ್ಷೇತ್ರದಲ್ಲಿ ಮೂರನೇ ಬಾರಿಗೆ ಶಾಸಕರಾಗಿ ಜಯಭೇರಿ ಬಾರಿಸಿದ್ದರು. ಈ ಮೂಲಕ ಹದಿನೈದು ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಕ್ಷೇತ್ರವೆನಿಸಿದ್ದ ಹುಣಸೂರಿನಲ್ಲಿ ಜೆಡಿಎಸ್‌ನ ಯುವ ನಾಯಕ ಸಹಕಾರಿ ಧುರೀಣ ಯುವ ಉತ್ಸಾಹಿ ಜಿ.ಡಿ.ಹರೀಶ್‌ಗೌಡ ಮತದಾರರ ಆಶೀರ್ವಾದದೊಂದಿಗೆ ಜೆಡಿಎಸ್ ಬಾವುಟವನ್ನು ಹಾರಿಸಿದ್ದಾರೆ. ಈ ಮೂಲಕ ಮೊದಲ ಬಾರಿಗೆ ಹರೀಶ್‌ಗೌಡರು ವಿಧಾನಸಭೆಯನ್ನು ಪ್ರವೇಶಿಸಿದ್ದು, ಇಂದು ರಾತ್ರಿ ಕ್ಷೇತ್ರಕ್ಕೆ ಆಗಮಿಸಿ ರೋಡ್ ಶೋ ನಡೆಸಿ ತಮ್ಮನ್ನು ಆಯ್ಕೆ ಮಾಡಿದ ಮತದಾರರಿಗೆ ಕೃತಜ್ಞತೆ ತಿಳಿಸಿದರು.

2ನೇ ಬಾರಿ ಶಾಸಕರಾಗಿ ಆಯ್ಕೆಯಾಗಿ ದಾಖಲೆ ಸೃಷ್ಟಿಸಿದ ಅನಿಲ್





ಹೆಚ್.ಡಿ.ಕೋಟೆ ವಿಧಾನಸಭಾ ಚುನಾವಣೆಯಲ್ಲಿ ಪುನರಾಯ್ಕೆಗೊಂಡ ಕಾಂಗ್ರೆಸ್ ಅಭ್ಯರ್ಥಿ, ಹಾಲಿ ಶಾಸಕ ಅನಿಲ್ ಚಿಕ್ಕಮಾದು ಅವರು ತಮ್ಮ ಬೆಂಬಲಿಗರೊಂದಿಗೆ ವಿಜಯೋತ್ಸವ ಆಚರಿಸಿದರು.

ಹೆಚ್.ಡಿ.ಕೋಟೆ, ಮೇ 13– ಹೆಚ್.ಡಿ.ಕೋಟೆ ಎಸ್‌ಟಿ ಮೀಸಲು ಕ್ಷೇತ್ರದಲ್ಲಿ 2ನೇ ಬಾರಿ ಗೆಲುವು ಸಾಧಿಸುವುದರ ಮೂಲಕ ಅನಿಲ್ ಚಿಕ್ಕಮಾದು ದಾಖಲೆ ಸೃಷ್ಟಿ ಮಾಡಿದ್ದಾರೆ.

ಜಯಗಳಿಸಿದ ನಂತರ ತಾಲೂಕಿನ ಗಡಿ ಭಾಗವಾದ ಕಂಚಮಳ್ಳಿ ಗೇಟ್ ಬಳಿ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಸಾವಿರಾರು ಸಂಖ್ಯೆಯಲ್ಲಿ ಪಟಾಕಿ ಸಿಡಿಸಿ ಭಾರೀ ಗಾತ್ರದ ಹೂವಿನ ಹಾರ ಹಾಕಿ, ಪುಷ್ಪ ಮಳೆ ಸುರಿಸಿದರು. ಅದ್ದೂರಿ ಸ್ವಾಗತ ನೀಡಿ ತಾಲೂಕಿಗೆ ಬರಮಾಡಿಕೊಂಡರು.

ಹಂಪಾಪುರ, ಹೊಮ್ಮರಗಳ್ಳಿ, ಕೋಳಗಾಳ, ಗುಜ್ಜಪ್ಪನ ಹಿಂಡಿ, ಮಾದಾಪುರ, ಹೈರಿಗೆ, ಮಟಕೆರೆ, ಬೊಪ್ಪನಹಳ್ಳಿ, ಹ್ಯಾಂಡ್‌ಪೋಸ್ಟ್, ಕೃಷ್ಣಾಪುರ ಸೇರಿದಂತೆ ಇನ್ನೂ ಹಲವಾರು ಗ್ರಾಮಗಳಲ್ಲಿ ದಾರಿ ಉದ್ದಕ್ಕೂ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಅಭಿನಂದಿಸಿದರು.

ಹ್ಯಾಂಡ್‌ಪೋಸ್ಟ್, ಕೋಟೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಿದರು, ಸಿದ್ದಪ್ಪಾಜಿ ರಸ್ತೆಯಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಶಾಸಕ ಅನಿಲ್ ಚಿಕ್ಕಮಾದು ಮಾಲಾರ್ಪಣೆ ಮಾಡಿದರು.

ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದರು. ನನ್ನ ಐದು ವರ್ಷದ ಅವಧಿಯಲ್ಲಿ ದಿ:ಆರ್.ಧ್ರುವನಾರಾಯಣ್ ಅವರ ಮಾರ್ಗದರ್ಶನದಲ್ಲಿ ಮಾಡಿದ ಅಭಿವೃದ್ಧಿ ಕೆಲಸಗಳು ತಾಲೂಕಿನ ಜನತೆ ತೋರಿದ ಪ್ರೀತಿ ವಿಶ್ವಾಸ ಹಾಗೂ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯ ಭರವಸೆಗಳು, ನನ್ನ ಗೆಲುವಿಗೆ ಕಾರಣವಾಗಿದೆ ಎಂದರು. ತಾಲೂಕಿನಲ್ಲಿ ನನ್ನ ಪರವಾಗಿ ಪ್ರಚಾರ ಮಾಡಿದ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್, ತಾಲೂಕಿನ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಹಗಲಿರುಳು ನನ್ನ ಗೆಲುವಿಗೆ ಶ್ರಮಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಸರ್ಕಾರ ಬರಲಿದ್ದು, ತಾಲೂಕಿನ ಅಭಿವೃದ್ಧಿಗೆ ಮತ್ತಷ್ಟು ಶಕ್ತಿ ನನಗೆ ಸಿಕ್ಕಿದೆ ಎಂದರು. 2018 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮೊದಲ ಬಾರಿ ಸ್ಪರ್ಧಿಸಿದಾಗ 22 ಸಾವಿರ ಮತಗಳ ಅಂತರದಿಂದ ಶಾಸಕರಾಗಿ ಆಯ್ಕೆಯಾದರು. ಈ ಬಾರಿ ಮತ್ತೊಮ್ಮೆ 35 ಸಾವಿರ ಅಧಿಕ ಮತಗಳಿಂದ ಜಯಗಳಿಸಿ ಪುನರಾಯ್ಕೆಯಾಗಿದ್ದಾರೆ. ಆರ್.ಪಿರಣ್ಣ ಅವರು ಕ್ಷೇತ್ರದಲ್ಲಿ 1962ರಲ್ಲಿ, ಸ್ವತಂತ್ರ ಪಕ್ಷದಿಂದ ಸ್ಪರ್ಧಿಸಿ 14788 ಮತಗಳ ಪಡೆದು, ಶಾಸಕರಾಗಿದ್ದರು.

1967 ರಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ 18818 ಮತಗಳನ್ನು ಪಡೆದು ಶಾಸಕರಾಗಿ ಆಯ್ಕೆಯಾಗಿದ್ದರು.

1972 ರಲ್ಲಿ ಸ್ವತಂತ್ರ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ, 21859 ಮತಗಳನ್ನು ಪಡೆದು, ಸತತವಾಗಿ ವಿವಿಧ ಪಕ್ಷಗಳ ವಿವಿಧ ಚಿಹ್ನೆಗಳ ಮೂಲಕ ಶಾಸಕರಾಗಿ ಮೂರು ಬಾರಿ ಆಯ್ಕೆಯಾಗಿದ್ದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಏಜಾಜ್ ಪಾಷಾ, ಮಾದಪ್ಪ, ಯೂಥ್ ಕಾಂಗ್ರೆಸ್ ಅಧ್ಯಕ್ಷ ಹೋಂಡಾ ನಯಾಜ್, ಶಿವರಾಜು, ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರುಗಳಾದ ಚಿಕ್ಕವೀರನಾಯಕ, ಪಿ. ರವಿ ನಂದಿನಿ, ಮಂಜುನಾಥ್, ಭಾಗ್ಯಲಕ್ಷ್ಮಿ, ಸತೀಶ್‌ಗೌಡ ಈರೇಗೌಡ, ಶಂಭುಲಿಂಗ ನಾಯಕ ಸೋಮೇಶ್ ಎಚ್.ಸಿ.ನರಸಿಂಹ ಮೂರ್ತಿ ಕ್ಯಾತನಹಳ್ಳಿ ನಾಗರಾಜ್, ರಾಜು, ರಾಜ ನಾಯಕ, ಪರಶಿವಮೂರ್ತಿ, ಪ್ರದೀಪ್, ಮರಿದೇವಯ್ಯ ಶಿವಪ್ಪ ಕೋಟೆ, ಆನಂದ್, ಪುಟ್ಟಬಸವ ನಾಯ್ಕ, ದಾಸ ನಾಯಕ, ಪ್ರಕಾಶ್, ಪಿ.ನಾಗರಾಜ್, ಸರಗೂರು ಶ್ರೀನಿವಾಸ್, ಗಣೇಶ್ ಆಚಾರ್, ವೀರೇಂದ್ರ, ಶಿವರಾಜು ಪಟೇಲ್ ಸೋಮು, ಬಿ.ಪಿ. ಭಾಸ್ಕರ್, ಚಿಕ್ಕಣ್ಣ, ನಟರಾಜ್, ರಾಜು, ಸಾವಿರಾರು ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ವಿಜಯೋತ್ಸವದಲ್ಲಿ ಭಾಗವಹಿಸಿದ್ದರು.

ಕೃತಜ್ಞತೆ ಸಲ್ಲಿಸಿದ ರವಿಶಂಕರ್

ಕೆ.ಆರ್.ನಗರ, ಮೇ 13– ನೂತನ ಶಾಸಕ ಡಿ.ರವಿಶಂಕರ್ ಅವರು ಪಟ್ಟಣದ ತೋಪಮ್ಮನವರ ದೇವಾಲಯದಿಂದ ಮೈಸೂರು–ಹಾಸನ ಮುಖ್ಯ ರಸ್ತೆಯಲ್ಲಿ ಮೆರವಣಿಗೆಯಲ್ಲಿ ತೆರಳಿ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು. ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ, ಡಾ.ಬಾಬು ಜಗಜೀವನ್‌ರಾಂ ಪುತ್ಥಳಿ ಹಾಗೂ ಗಾಂಧೀಜಿಯವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

ತಾಲೂಕಿನ ದೊಡ್ಡೇಕೊಪ್ಪಲು ಗ್ರಾಮದಿಂದ ಪಟ್ಟಣದ ಪುರಸಭೆ ವೃತ್ತದವರೆಗೂ ರಸ್ತೆಯ ಎರಡೂ ಬದಿಯಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಹಾಗೂ ರವಿಶಂಕರ್ ಅಭಿಮಾನಿಗಳು ಸಾವಿರಾರು ಸಂಖ್ಯೆಯಲ್ಲಿ ಹಾಜರಿದ್ದು ನೂತನ ಶಾಸಕರಿಗೆ ಜಯಕಾರ ಕೂಗಿ ಹೂವಿನ ಮಳೆ ಸುರಿಸಿ ಸಂಭ್ರಮಿಸಿದರು. ಮೇ 12 ರಂದು ಡಿ.ರವಿಶಂಕರ್ ರವರ ಹುಟ್ಟುಹಬ್ಬ ಇದ್ದಿದ್ದರಿಂದ ಇಂದು ಜಯದೊಂದಿಗೆ ಬೃಹತ್ ಗಾತ್ರದ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಲಾಯಿತು.

ಕಾಂಗ್ರೆಸ್ ಪಕ್ಷ ಇದೇ ಪ್ರಥಮ ಬಾರಿಗೆ 104502 ಮತಗಳನ್ನು ಪಡೆದು ರವಿಶಂಕರ್ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ವರುಣದಲ್ಲಿ ಸಿದ್ದು ಗೆಲುವು: ನರಸೀಪುರದಲ್ಲಿ ವಿಜಯೋತ್ಸವ



ತಿ.ನರಸೀಪುರ, ಮೇ 13–ರಾಜ್ಯದ ಪ್ರತಿಷ್ಠಿತ ಕಣವಾಗಿ ಹೈವೋಲ್ಟೇಜ್ ಕ್ಷೇತ್ರವೆಂದು ಬಿಂಬಿಸಲ್ಪಟ್ಟಿದ್ದ ವರುಣ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೆಲುವು ಪ್ರಕಟಗೊಳ್ಳುತ್ತಿದ್ದಂತೆ ಕ್ಷೇತ್ರದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಯಿತು.

ವರುಣ ಕ್ಷೇತ್ರ ವ್ಯಾಪ್ತಿಯ ಹೆಳವರಹುಂಡಿ ಹಾಗೂ ಪುರಸಭೆ ವ್ಯಾಪ್ತಿಯ ವಿನಾಯಕ ಕಾಲೋನಿಯಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಂಭ್ರಮಿಸಿದರು.

ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಿದ್ದರಾಮಯ್ಯ ಗೆಲುವು ನಿಶ್ಚಯವಾಗುತ್ತಿದ್ದಂತೆ ಮನೆಯಿಂದ ಹೊರಬಂದು ಸಿದ್ದರಾಮಯ್ಯ ಭಾವಚಿತ್ರವಿರುವ ಬಾವುಟಗಳನ್ನಿಡಿದು ಸಿದ್ದರಾಮಯ್ಯ ಪರ ಘೋಷಣೆ ಕೂಗುತ್ತಾ ಬೈಕ್‌ಗಳಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.


ಇಂದಿರಾ ವಿನಾಯಕ ಕಾಲೋನಿಯ 11ನೇ ವಾರ್ಡಿನ ಪುರಸಭೆ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ ನೇತೃತ್ವದಲ್ಲಿ ಕಾರ್ಯಕರ್ತರು ಜಮಾವಣೆಯಾಗಿ ಪಟಾಕಿ ಸಿಡಿಸಿ ಜಯಘೋಷ ಕೂಗಿ ವಿಜಯೋತ್ಸವ ಆಚರಿಸಿದರು. ಈ ವೇಳೆ ಮಾತನಾಡಿದ ಟಿ.ಎಂ. ನಂಜುಂಡಸ್ವಾಮಿ, ರಾಜ್ಯದಲ್ಲಿ ಅಧಿಕಾರ ನಡೆಸುತ್ತಿದ್ದ ಶೇ.40 ಭ್ರಷ್ಟಾಚಾರದ ಆರೋಪ ಹೊತ್ತಿದ್ದ ಬಿಜೆಪಿ ಸರ್ಕಾರವನ್ನು ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸುವ ಮೂಲಕ ಜನತೆ ಕಿತ್ತೊಗೆದಿದ್ದಾರೆ. ರಾಜ್ಯದ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಕೊಟ್ಟ ಮಾತನ್ನು ಈಡೇರಿಸಲಿದ್ದಾರೆ ಎಂದರು.

ಹೆಳವರಹುಂಡಿಯಲ್ಲಿ ವಿಜಯೋತ್ಸವ: ವರುಣ ಕ್ಷೇತ್ರ ವ್ಯಾಪ್ತಿಯ ಹೆಳವರಹುಂಡಿಯಲ್ಲಿ ನಡೆದ ವಿಜಯೋತ್ಸವದಲ್ಲಿ ಮಾತನಾಡಿದ ಕಾಂಗ್ರೆಸ್ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್, ಸಿದ್ದರಾಮಯ್ಯ ಅವರನ್ನು ಸೋಲಿಸಲು ಬಿಜೆಪಿ ನಡೆಸಿದ ಷಡ್ಯಂತ್ರವನ್ನು ಜನತೆ ಬೆಂಬಲಿಸದೇ ಜನೋಪಯೋಗಿ ಕಾರ್ಯಕ್ರಮದ ಮೂಲಕ ಜನತೆಯ ಮನದಲ್ಲಿ ನೆಲೆಯೂರಿದ್ದ ಸಿದ್ದರಾಮಯ್ಯ ಅವರಿಗೆ ಜನಾದೇಶ ನೀಡಿದ್ದಾರೆ ಎಂದರು.

ಮುಖಂಡರಾದ ಪಾಪಣ್ಣ, ಹೈದರಾಲಿ, ಮುನ್ನ, ಯ.ರಂಗಸ್ವಾಮಿ, ವಿನೋದ, ಕೃಷ್ಣ, ರಾಮಣ್ಣ, ಮಹದೇವ, ನಂಜಯ್ಯ, ಶಾಂತಾ ಕುಮಾರಸ್ವಾಮಿ, ರಾಮು, ನಂದನ್, ಅಸ್ಲಾಂ ಪಾಷ, ಅಕ್ಬರ್ ಶಕೀಲ್, ಇಂತಿಯಾಜ್, ಸೋಮಣ್ಣ, ಕಾಂತರಾಜ ಅರಸ್, ನವೀನ, ದೇವರಾಜು ವಿಜಿ, ಸಮಿಉಲ್ಲಾ ಇಫ್ರಾನ್, ಸಂಜು, ಆನಂದ, ಮೋಹನ್, ನಂಜುಂಡಸ್ವಾಮಿ, ಪೂಜಾರ್, ರೇವಣ್ಣ ಮತ್ತಿತರಿದ್ದರು. ಕಾಂಗ್ರೆಸ್ ವಕ್ತಾರ ಸಂತೃಪ್ತಿ ಕುಮಾರ್, ಕೆ.ಗಣೇಶ್, ಎಂ.ಕೆ. ಸಹದೇವ್, ಮಿಥುನ್, ಅಮಾಸೆಗೌಡ, ರಘು, ಚೌಹಳ್ಳಿ ಮಲ್ಲೇಶ್, ನಾಗರಾಜು ಭಾಗವಹಿಸಿದ್ದರು



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರುಣ ವಿಧಾನಸಭಾ ಕ್ಷೇತ್ರದಲ್ಲಿ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ ಕ್ಷೇತ್ರದ ತ್ರಿವೇಣಿ ನಗರದ ಮಹಾನಾಯಕ ಸರ್ಕಲ್‌ನ 6 ಮತ್ತು 7ನೇ ವಾರ್ಡಿನಲ್ಲಿ ವಿಜಯೋತ್ಸವ ಆಚರಿಸಲಾಯಿತು. ಪುರಸಭಾ ಸದಸ್ಯ ಸಿ.ಪ್ರಕಾಶ್, ಬೇಬಿ ಹೇಮಂತ್, ಮುಖಂಡರಾದ ರಮೇಶ್, ಡಿ.ಆರ್.ಮೂರ್ತಿ, ಉಮೇಶ್, ಎಚ್.ಎಮ್.ಚಂದ್ರಶೇಖರ್, ಸಂದೇಶ್ ಸ್ವಾಮಿನಾಥ್, ನಾಗರಾಜು ಇದ್ದಾರೆ.



ತಿ.ನರಸೀಪುರ ವಿಧಾನಸಭಾ ಚುನಾವಣೆಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ ಮಹಾದೇವಪ್ಪ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮೂಗೂರು ಗ್ರಾಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದ ಮುಂದೆ 101 ಈಡುಗಾಯಿ ಹೊಡೆದು ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಅಧ್ಯಕ್ಷ ಎಂ.ಡಿ. ಬಸವರಾಜು, ಸಾಗರ್, ಎಂ.ಎಂ. ಜಗದೀಶ್, ನಾಗೇಂದ್ರ, ನಾಗಣ್ಣ, ನವೀನ್, ರಘು, ದೇವಾನಂದ್ ಉಪಸ್ಥಿತರಿದ್ದರು.

ರವಿಶಂಕರ್ ಗೆಲುವು: ಕೆ.ಆರ್. ನಗರದಲ್ಲಿ ವಿಜಯೋತ್ಸವ



ಕೆ.ಆರ್.ನಗರ, ಮೇ 13– ಸತತ ನಾಲ್ಕು ಚುನಾವಣೆಗಳಿಂದ ಸೋಲಾಗಿದ್ದ ಕಾಂಗ್ರೆಸ್ ಪಕ್ಷಕ್ಕೆ ಅತ್ಯಧಿಕ ಮತಗಳ ಅಂತರದಿಂದ ಗೆಲುವು ತಂದುಕೊಟ್ಟ ಕೆ.ಆರ್.ನಗರದ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಅವರಿಗೆ ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರು ಜಯಕಾರ ಕೂಗಿದರು.

ಮುಳ್ಳೂರು ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯ ಬಳಿ ಸಾವಿರಾರು ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಜರಿದ್ದು ಪಟಾಕಿ ಸಿಡಿಸಿ ಪರಸ್ಪರ ಬಣ್ಣ ಹಚ್ಚಿಕೊಂಡು ವಿಜಯೋತ್ಸವ ಆಚರಿಸಿದರು.

ಮಧ್ಯಾಹ್ನ 12ರಿಂದ ಸಂಜೆಯವರೆಗೂ ಸಂಭ್ರಮಾಚರಣೆಯಲ್ಲಿ ತೊಡಗಿದ್ದ ಪಕ್ಷದ ಕಾರ್ಯಕರ್ತರು, ಮುಖಂಡರು ಮತ್ತು ಯುವಕರು ಕೆ.ಆರ್.ನಗರ ಪಟ್ಟಣ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಪಟಾಕಿ ಸಿಡಿಸಿ ಸಾರ್ವಜನಿಕರಿಗೆ ಸಿಹಿ ವಿತರಿಸಿದರು. ಬೈಕ್‌ಗಳಲ್ಲಿ ಪಕ್ಷದ ಬಾವುಟ ಹಿಡಿದು ಶಾಸಕ ಡಿ.ರವಿಶಂಕರ್ ಅವರಿಗೆ ಜಯಕಾರ ಕೂಗಿ ಸಂಭ್ರಮಿಸಿದರು. 2004 ಮತ್ತು 2008ರಲ್ಲಿ ಎಚ್.ವಿಶ್ವನಾಥ್, 2013ರಲ್ಲಿ ದೊಡ್ಡಸ್ವಾಮೇಗೌಡ, 2018ರಲ್ಲಿ ಅಲ್ಪಮತಗಳಿಂದ ಸೋಲು ಕಂಡ ಡಿ.ರವಿಶಂಕರ್ ಈ ಬಾರಿ 27242 ಮತಗಳ ಅಂತರದಿಂದ ಸಾ.ರಾ.ಮಹೇಶ್ ವಿರುದ್ಧ ಗೆಲುವು ಸಾಧಿಸಿದ್ದಾರೆ. ಇದಕ್ಕಾಗಿ ರವಿಶಂಕರ್ ಕಳೆದ ಐದು ವರ್ಷಗಳಿಂದ ಪಕ್ಷದ ಸಂಘಟನೆಯಲ್ಲಿ ತೊಡಗಿದ್ದಲ್ಲದೆ ಗೆಲುವಿಗಾಗಿ ಜನಾಶೀರ್ವಾದ ಯಾತ್ರೆ ನಡೆಸಿದರು.

ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸತತ ಸೋಲಿನ ನಡುವೆಯೂ ಧೃತಿಗೆಡದೆ ಪಕ್ಷ ಸಂಘಟನೆಯಲ್ಲಿ ತೊಡಗಿದ್ದರು. ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡರವರ ಕುಟುಂಬ ಚುನಾವಣೆಗಳಲ್ಲಿ ಸೋಲು ಕಂಡರೂ ಸಹ ಜನರ ಜೊತೆ ಇದ್ದು ಪಕ್ಷದ ಕಾರ್ಯಕರ್ತರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಿದ್ದರು. ಇದರಿಂದ ಪಕ್ಷಗೆಲುವು ಸಾಧಿಸಲು ಸಾಧ್ಯವಾಯಿತು.

2022ರ ಅಕ್ಟೋಬರ್ 31 ರಿಂದ ವಿಧಾನಸಭೆ ಚುನಾವಣೆ ಘೋಷಣೆಯವರೆಗೂ ಜನಾಶೀರ್ವಾದ ಯಾತ್ರೆಯ ಮೂಲಕ ಅಭ್ಯರ್ಥಿ ಡಿ.ರವಿಶಂಕರ್, ಪತ್ನಿ ಸುನೀತಾ, ಕೆಪಿಸಿಸಿ ಕಾರ್ಯಕಾರಿಣಿ ಸದಸ್ಯ ದೊಡ್ಡಸ್ವಾಮೇಗೌಡ ಸೇರಿದಂತೆ ಕುಟುಂಬದ ಸದಸ್ಯರು ಮನೆ ಮನೆಗೆ ತೆರಳಿ ಜನರ ಆಶೀರ್ವಾದ ಪಡೆಯುವಲ್ಲಿ ಯಶಸ್ವಿಯಾದರು. ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು ಮತ್ತು ಮುಖಂಡರಾದ ಸಿ.ಪಿ.ರಮೇಶ್, ಹಾಡ್ಯ ಮಹದೇವಸ್ವಾಮಿ, ಕಲ್ಲಹಳ್ಳಿ ಶ್ರೀನಿವಾಸ್, ಗೀತಾ ಮಹೇಶ್ ಸೇರಿದಂತೆ ಸರ್ವ ಜನಾಂಗದ ಮುಖಂಡರು ಯಾತ್ರೆಗೆ ಸಾಥ್ ನೀಡಿದ್ದ ಕಾರಣದಿಂದ ಡಿ.ರವಿಶಂಕರ್ ನಿರೀಕ್ಷೆಗೂ ಮೀರಿದ ಮತಗಳ ಅಂತರದಲ್ಲಿ ಗೆಲುವು ಸಾಧಿಸಿ ಶಾಸಕರಾಗಲು ಕಾರಣವಾಯಿತು. ಕಾಂಗ್ರೆಸ್ ಪಕ್ಷ ಬೆಂಬಲಿಸುವ ಕುರುಬ ಸಮಾಜದವರು 20 ವರ್ಷಗಳ ಕಾಲ ಅಧಿಕಾರದಿಂದ ವಂಚಿತರಾಗಿದ್ದು ಈ ಬಾರಿ ಗೆಲುವು ಸಾಧಿಸಲು ಪಕ್ಷದ ಮುಖಂಡರ ಜತೆಗೆ ಶ್ರಮಿಸಿದ್ದಾರೆ.

ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಮತ ಎಣಿಕೆ ಪ್ರಕ್ರಿಯೆ ನಡೆಯಿತು. ರವಿಶಂಕರ್ ಗೆಲುವು ಸಾಧಿಸಿದ್ದಾರೆ ಎಂಬ ಘೋಷಣೆ ಹೊರ ಬಿದ್ದ ಕೂಡಲೇ ಆವರಣದಲ್ಲಿದ್ದ ಕುರುಬರ ಸಂಘದ ಅಧ್ಯಕ್ಷ ಚೀರ್ನಹಳ್ಳಿ ಶಿವಣ್ಣ ನೆಲಕ್ಕೆ ಕೈ ಬಡಿದು, ಕಣ್ಣೀರಿಟ್ಟು ಗೆಲುವು ತಂದುಕೊಟ್ಟಿದ್ದಕ್ಕಾಗಿ ಕ್ಷೇತ್ರದ ಜನತೆಗೆ ಕೃತಜ್ಞತೆ ಸಲ್ಲಿಸಿದರು. ಈ ವೇಳೆ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಅಮಿತ್ ವಿ.ದೇವರಹಟ್ಟಿ ಸೇರಿದಂತೆ ಸಂಘದ ಸದಸ್ಯರು ಶಿವಣ್ಣ ಅವರನ್ನು ಸಮಾಧಾನ ಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಾಲೂಕಿನಲ್ಲಿ ಪ್ರಚಾರ ನಡೆಸಿದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿರವರು ಕೆ.ಆರ್.ನಗರ ಪಟ್ಟಣದಲ್ಲಿ ರೋಡ್ ಶೋ ನಡೆಸಿದರು. ಇದರ ಜತೆಗೆ ಬೆಂಗಳೂರು ಚಾಮರಾಜಪೇಟೆ ಶಾಸಕ ಜಮೀರ್ ಅಹಮದ್ ಖಾನ್ ಭೇರ್ಯ, ಸಾಲಿಗ್ರಾಮ, ಹೊಸೂರು ಮತ್ತು ಕೆ.ಆರ್.ನಗರದಲ್ಲಿ ಮತ್ತು ಸಿದ್ದರಾಮಯ್ಯ ನವರ ಬಹಿರಂಗ ಸಭೆಯಲ್ಲಿ ಪಾಲ್ಗೊಂಡು ಡಿ.ರವಿಶಂಕರ್ ಗೆಲ್ಲಿಸಿ ಎಂದು ಮನವಿ ಮಾಡಿದ್ದರು.

ಮಾತಿನ ಚಕಮಕಿ: ಗುಂಪು ಚದುರಿಸಿದ ಪೊಲೀಸರು

ಪಿರಿಯಾಪಟ್ಟಣ, ಮೇ 13– ಬೆಟ್ಟದಪುರದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದು ಪರಿಸ್ಥಿತಿ ಕೈ ಮೀರುವುದನ್ನು ಅರಿತ ಬೆಟ್ಟದಪುರ ಪೊಲೀಸರು ಮಧ್ಯ ಪ್ರವೇಶಿಸಿ ಗುಂಪುಗಳನ್ನು ಚದುರಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ಇಂದು ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವ ಆಚರಿಸುವ ವೇಳೆ ಇನ್ನೊಂದು ಗುಂಪಿನ ಯುವಕರು ಮಾತಿನ ಚಕಮಕಿ ನಡೆದು ನೂಕಾಟ, ತಳ್ಳಾಟ ಪ್ರಾರಂಭವಾಯಿತು. ತಕ್ಷಣವೇ ಬೆಟ್ಟದಪುರದ ಪಿಎಸ್‌ಐ ಪ್ರಕಾಶ .ಎಂ ಎತ್ತಿನಮನಿ ಮಧ್ಯ ಪ್ರವೇಶಿಸಿ ಶಾಂತಿ ಯುತವಾಗಿ ವಿಜಯೋತ್ಸವವನ್ನು ಆಚರಿಸಬೇಕು. ಯಾವುದೇ ಅಹಿತಕರ ಘಟನೆ ನಡೆದರೆ ಎಲ್ಲರ ವಿರುದ್ಧ ಮೊಕದ್ದಮೆ ದಾಖಲಿಸುವುದಾಗಿ ಎಚ್ಚರಿಕೆ ನೀಡಿದರು.

ಕಾಂಗ್ರೆಸ್ ಜೆಡಿಎಸ್ ಕಾರ್ಯಕರ್ತರ ನಡುವಿನ ಮಾತಿನಂತೆ ಕಾಂಗ್ರೆಸ್ ಕಾರ್ಯಕರ್ತರು ನಾವು ಶಾಂತಿಯುತವಾಗಿ ಮೆರವಣಿಗೆ ಮಾಡಲಾಗುವುದು. ಯಾವುದೇ ಪಕ್ಷದ ನಾಯಕರನ್ನು ನಿಂದಿಸುವುದಿಲ್ಲ. ನಾವು ಬರಿ ವಿಜಯೋತ್ಸವವನ್ನು ಮಾತ್ರ ಆಚರಿಸುತ್ತಿದ್ದೇವೆ ಎಂದು ಪೊಲೀಸರಿಗೆ ಕಾರ್ಯಕರ್ತರು ತಿಳಿಸಲಾಗಿ ನಂತರ ಪೊಲೀಸರು ಎರಡು ಕಡೆಯವರನ್ನು ಸಮಾಧಾನ ಮಾಡಿ ಗುಂಪನ್ನು ಚದುರಿಸಿದರು

ಸಿಎಂ ಸ್ಥಾನಕ್ಕೆ ಬಸವರಾಜ ಬೊಮ್ಮಾಯಿ ರಾಜೀನಾಮೆ

ಬೆಂಗಳೂರು: ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ 135 ಸ್ಥಾನಗಳನ್ನು ಪಡೆದುಕೊಳ್ಳುವುದರೊಂದಿಗೆ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದಿದೆ.

ಇತ್ತ ಕೇವಲ 66 ಸ್ಥಾನಗಳಲ್ಲಿ ಗೆಲುವು ಪಡೆದಿರುವ ಬಿಜೆಪಿ ವಿರೋಧ ಪಕ್ಷದ ಸ್ಥಾನಕ್ಕೆ ತೃಪ್ತಿ ಪಟ್ಟಿದೆ. ಇದರ ನಡುವೆಯೇ ಶನಿವಾರ ಸಂಜೆ ವೇಳೆಗೆ ರಾಜಭವನಕ್ಕೆ ಆಗಮಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಕೆ ಮಾಡಿದ್ದು, ರಾಜ್ಯಪಾಲರಿಗೆ ರಾಜೀನಾಮೆ ಪತ್ರ ನೀಡಿದ್ದಾರೆ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಬಳಿಕ ಅಚ್ಚರಿಯ ಆಯ್ಕೆಯಂತೆ ಬಸವರಾಜ ಬೊಮ್ಮಾಯಿ ಅವರು ಸಿಎಂ ಆಗಿದ್ದರು. 2021ರ ಜುಲೈ 26 ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ ಮಾಡಿದ್ದ ಬೊಮ್ಮಾಯಿ ಅವರು, 19 ತಿಂಗಳು 17 ದಿನಗಳ ಕಾಲ ಮುಖ್ಯಮಂತ್ರಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಯಡಿಯೂರಪ್ಪರ ನಿವೃತ್ತಿ ಘೋಷಣೆಯಿಂದ ಬಯಸದೇ ಬಂದ ಭಾಗ್ಯದಂತೆ ಮುಖ್ಯಮಂತ್ರಿ ಪದವಿ ಅಲಂಕರಿಸಿದ್ದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶನಿವಾರ ಸಂಜೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ರಾಜೀನಾಮೆ ಪತ್ರ ನೀಡಿದರು.

ಎಲ್ಲಿ ತಪ್ಪು ಆಗಿದೆ ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ: ರಾಜೀನಾಮೆ ನೀಡಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಹಂಗಾಮಿ ಸಿಎಂ ಬಸವರಾಜ ಬೊಮ್ಮಾಯಿ, ರಾಜ್ಯಪಾಲರ ಭೇಟಿ ಮಾಡಿ ರಾಜೀನಾಮೆ ನೀಡಿದ್ದೇನೆ. ಜನರ ತೀರ್ಪನ್ನು ಗೌರವಯುತವಾಗಿ ಒಪ್ಪಿಕೊಂಡಿದ್ದೇವೆ, ಪಕ್ಷಕ್ಕೆ ಆದ ಹಿನ್ನಡೆಯನ್ನು ನಾನೇ ಜವಾಬ್ದಾರಿ ವಹಿಸಿಕೊಳ್ಳುತ್ತೇನೆ. ಕಳೆದ ಬಾರಿ ನನಗೆ 104 ಸೀಟು ಬಂದಿತ್ತು, ಈ ಬಾರಿ ಪರ್ಸೆಂಟೇಜ್ ಜಾಸ್ತಿ ಬಂದರೂ, ಕಡಿಮೆ ಸೀಟು ಬಂದಿವೆ. ಏನೇ ಆಗಲಿ ಸೋಲು ಸೋಲೇ. ನಾವು ಇದರ ಬಗ್ಗೆ ಆತ್ಮಾವಲೋಕನ ಮಾಡಿ, ಎಲ್ಲಿ ತಪ್ಪು ಆಗಿದೆ ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ನಮ್ಮದು ಒಂದು ರಾಷ್ಟ್ರೀಯ ಪಕ್ಷ, ನಾವು ಕೇವಲ ಚುನಾವಣೆಗೆ ಮಾತ್ರ ಕೆಲಸ ಮಾಡಲ್ಲ. ರಾಷ್ಟ್ರದ ನಿರ್ಮಾಣಕ್ಕೆ ಕೆಲಸ ಮಾಡುವವರು. ಇನ್ನೇನು ಕೇವಲ 8–10 ತಿಂಗಳಿನಲ್ಲಿ ಲೋಕಸಭೆ ಚುನಾವಣೆ ಬರುತ್ತಿದೆ. ಆ ಚುನಾವಣೆಗೆ ಪಕ್ಷ ಗಟ್ಟಿಗೊಳಿಸುವ ಕೆಲಸ ಮಾಡುತ್ತೇವೆ. ಈ ಚುನಾವಣೆ ಫಲಿತಾಂಶ ಮುಂದಿನ ಚುನಾವಣೆಗೆ ದಿಕ್ಸೂಚಿ ಅಲ್ಲ ಎಂದರು.

ಸುದೀಪ್ ಸೋಲಿಗೆ ಹೊಣೆ ಅನ್ನೋದು ಸರಿಯಲ್ಲ: ನಾವು ಹಿಂದೆ ಎಷ್ಟೋ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳನ್ನು ನೋಡಿದ್ದೇವೆ. ಸೋಲಿಗೆ ಹಲವಾರು ರೀತಿಯ ಕಾರಣಗಳು ಇವೆ, ಅವುಗಳನ್ನು ಎಲ್ಲವನ್ನೂ ಕುಳಿತು ಚರ್ಚೆ ಮಾಡ್ತೀವಿ. ಏನು ವ್ಯತ್ಯಾಸ ಆಗಿದೆ ಎಲ್ಲಿ ಏನಾಗಿದೆ ಎಂದು ಚರ್ಚಿಸಿ, ಆಗಿದ್ದ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತೇವೆ. ಸುದೀಪ್ ರಾಜಕಾರಣಿ ಅಲ್ಲ, ಸೋಲಿಗೆ ಅವರನ್ನು ಹೊಣೆ ಅನ್ನೋದು ಸರಿಯಲ್ಲ ಎಂದು ಹೇಳಿದರು.


ಗೆದ್ದು ಬೀಗಿದ ಕಾಂಗ್ರೆಸ್‌ಗೆ ವಿಶ್ ಮಾಡಿದ ಮೋದಿ



ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ರಾಜ್ಯ ಕಾಂಗ್ರೆಸ್ ಪಕ್ಷಕ್ಕೆ ಶುಭಾಶಯ ತಿಳಿಸಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಭರ್ಜರಿ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಲು ಸಿದ್ಧವಾಗಿರುವ ಕಾಂಗ್ರೆಸ್ ನಾಯಕರಿಗೆ ಪ್ರಧಾನಿ ಶುಭ ಕೋರಿದ್ದು, ಅತ್ಯುತ್ತಮ ಆಡಳಿತ ನೀಡುವಂತೆ ಹಾರೈಸಿದ್ದಾರೆ.

ಚುನಾವಣೆ ಗೆಲುವಿನ ಕುರಿತಾಗಿ ಟ್ವೀಟ್ ಮಾಡಿರುವ ನರೇಂದ್ರ ಮೋದಿ, ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಜಯಗಳಿಸಿದ ಕಾಂಗ್ರೆಸ್ ಪಕ್ಷಕ್ಕೆ ಅಭಿನಂದನೆಗಳು. ಜನರ ಆಶೋತ್ತರಗಳನ್ನು ಅವರು ಈಡೇರಿಸಲಿ. ಅವರಿಗೆ ಹಾರೈಸುತ್ತೇನೆ ಎಂದು ಬರೆದಿದ್ದಾರೆ.

ಜನಾದೇಶ ಸ್ವಾಗತಿಸಿದ ಹೆಚ್.ಡಿ.ಕುಮಾರಸ್ವಾಮಿ



ಬೆಂಗಳೂರು: ಜನಾದೇಶವನ್ನು ಸ್ವಾಗತಿಸುವುದಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಚುನಾವಣೆ ಫಲಿತಾಂಶದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಹೆಚ್‌ಡಿಕೆ, ರಾಜ್ಯದ ಜನತೆ ನೀಡಿರುವ ಆದೇಶವನ್ನು ಸ್ವಾಗತಿಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಾದೇಶವೇ ಅಂತಿಮ. ಸೋಲು, ಗೆಲುವನ್ನು ನಾನು ಸಮಚಿತ್ತದಿಂದ ಸ್ವೀಕರಿಸುತ್ತೇನೆ. ಆದರೆ, ಈ ಸೋಲು ಅಂತಿಮವಲ್ಲ, ನನ್ನ ಹೋರಾಟ ನಿಲ್ಲುವುದಿಲ್ಲ, ಸದಾ ಜನರ ಜತೆಯಲ್ಲೇ ಇರುತ್ತೇನೆ ಎಂದಿದ್ದಾರೆ. ಇದೇ ವೇಳೆ ನಮ್ಮ ಪಕ್ಷವನ್ನು ಆಶೀರ್ವದಿಸಿದ ಮಹಾಜನತೆಗೆ ಅಭಿನಂದನೆ ಸಲ್ಲಿಸಿದ್ದಾರೆ. ನನಗಾಗಲಿ, ನಮ್ಮ ಕುಟುಂಬಕ್ಕೆ ಆಗಲಿ ಸೋಲು, ಗೆಲುವು ಹೊಸದೇನಲ್ಲ. ಈ ಹಿಂದೆ ಹೆಚ್.ಡಿ.ದೇವೇಗೌಡರು, ಹೆಚ್.ಡಿ.ರೇವಣ್ಣ, ನಾನೂ ಸೋತಿದ್ದೆವು. ಹಾಗೆಯೇ ಗೆದ್ದಾಗ ಬದ್ಧತೆಯಿಂದ ಜನಸೇವೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಸಂಘಟನೆಯಲ್ಲಿ ತೊಡಗಿಸಿಕೊಂಡು ಪಕ್ಷ ಕಟ್ಟುವ ಕೆಲಸ ಮಾಡುತ್ತೇನೆ. ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಲಿರುವ ನೂತನ ಸರಕಾರಕ್ಕೆ ಶುಭವಾಗಲಿ. ಜನರ ಆಶೋತ್ತರಗಳಿಗೆ ಸ್ಪಂದಿಸಲಿ ಎಂದು ಹಾರೈಸುತ್ತೇನೆ. ಪಕ್ಷದ ಪರವಾಗಿ ಹಗಲಿರುಳು ಶ್ರಮಿಸಿದ ಕಾರ್ಯಕರ್ತರು, ಮುಖಂಡರು, ಅಭ್ಯರ್ಥಿಗಳಿಗೆ ನನ್ನ ಕೃತಜ್ಞತೆಗಳು. ಯಾರೂ ಧೃತಿಗೆಡುವುದು ಬೇಡ, ನಿಮ್ಮ ಜತೆಯಲ್ಲಿ ನಾನಿದ್ದೇನೆ ಎಂದು ಧೈರ್ಯ ತುಂಬಿದ್ದಾರೆ.

ಬಿಜೆಪಿ ಸೋಲಿನ ಹೊಣೆ ನನ್ನದೆ



ಬೆಂಗಳೂರು: ಬಿಜೆಪಿ ಸೋಲು ಸೋಲಿನ ಹೊಣೆ ಹೊರುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾರ್ಯಕರ್ತರಿಗೆ ಧನ್ಯವಾದ ತಿಳಿಸುತ್ತೇನೆ. ನಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡಿದರೂ ಅನಿರೀಕ್ಷಿತ ಫಲಿತಾಂಶ ಬಂದಿದೆ. ಬಿಜೆಪಿಗೆ ಹಿನ್ನಡೆಯಾಗಿದೆ. ಇಡೀ ಸೋಲಿನ ಜವಾಬ್ದಾರಿಯನ್ನು ರಾಜ್ಯಾಧ್ಯಕ್ಷನಾಗಿ ನಾನು ಹೊರುತ್ತೇನೆ ಎಂದು ನಳಿನ್ ಕುಮಾರ್ ಕಟೀಲ್ ಹೇಳಿದರು.

ಕರ್ನಾಟಕದ ಜನತೆಗೆ ಧನ್ಯವಾದ ಹೇಳಿದ ಪ್ರಿಯಾಂಕಾ ಗಾಂಧಿ



ಬೆಂಗಳೂರು: ಕರ್ನಾಟಕದಲ್ಲಿ ಐತಿಹಾಸಿಕ ಜನಾದೇಶ ನೀಡಿದ ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಧನ್ಯವಾದ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದ ಪರ ಐತಿಹಾಸಿಕ ತೀರ್ಪು ನೀಡಿದ ಕರ್ನಾಟಕದ ಜನತೆಗೆ ತುಂಬು ಹೃದಯದ ಧನ್ಯವಾದಗಳು. ಭ್ರಷ್ಟಾಚಾರ, ಕೋಮುವಾದ, ಬೆಲೆ ಏರಿಕೆ ವಿರುದ್ಧ ಕನ್ನಡಿಗರು ಕೈ ಏರಿಸಿದ್ದಾರೆ ಮತ್ತು ನಮ್ಮ ರಾಷ್ಟ್ರವನ್ನು ಒಗ್ಗೂಡಿಸುವುದಕ್ಕಾಗಿ ಕರ್ನಾಟಕದ ಜನತೆ ಕಾಂಗ್ರೆಸ್ ಕೈ ಹಿಡಿದಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರಿಗೆ ಮತ್ತು ಕರ್ನಾಟಕ ಕಾಂಗ್ರೆಸ್‌ನ ನಾಯಕರಿಗೆ ನನ್ನ ಹೃದಯಪೂರ್ವಕ ಧನ್ಯವಾದಗಳು. ನಿಮ್ಮ ನಿರಂತರ ಶ್ರಮಕ್ಕೆ ಪ್ರತಿಫಲ ಸಿಕ್ಕಿದೆ. ಕರ್ನಾಟಕದ ಜನತೆಗೆ ಕಾಂಗ್ರೆಸ್ ಪಕ್ಷವು ನೀಡಿದ್ದ ಭರವಸೆಗಳನ್ನು ಪೂರ್ಣಗೊಳಿಸಲು ಬದ್ಧವಾಗಿದೆ. ಜೈ ಕರ್ನಾಟಕ, ಜೈ ಕಾಂಗ್ರೆಸ್ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಟ್ವೀಟ್ ಮಾಡಿದ್ದಾರೆ.

ನಾನು ಹೇಳಿದಂತೆ, ಇದು (ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದು) ದೊಡ್ಡ ಜವಾಬ್ದಾರಿಯಾಗಿದೆ. ನಾವು ಕೆಲವು ಭರವಸೆಗಳೊಂದಿಗೆ ಜನರ ಬಳಿಗೆ ಹೋಗಿದ್ದೇವೆ ಮತ್ತು ನಾವು ಅವುಗಳನ್ನು ಪೂರೈಸಬೇಕು. ಜನರಿಗಾಗಿ ಕೆಲಸ ಮಾಡಬೇಕು. ಮುಂದೆ ಏನಾಗುತ್ತದೆ ಎಂಬುದನ್ನು ಸಾರ್ವಜನಿಕರು ನಮಗೆ ತಿಳಿಸುತ್ತಾರೆ ಎಂದು ಪ್ರಿಯಾಂಕಾ ಗಾಂಧಿ ಹೇಳಿದರು.

ಕಾಂಗ್ರೆಸ್‌ಗೆ ಆಲ್ ದಿ ಬೆಸ್ಟ್



ಬೆಂಗಳೂರು: ಚುನಾವಣೆಯಲ್ಲಿ ಸೋಲು–ಗೆಲುವು ಸಹಜ. ನಾವು ಒಂದು ವಿಪಕ್ಷವಾಗಿ ಜನರ ಸೇವೆ ಮಾಡುತ್ತೇವೆ. ಕಾಂಗ್ರೆಸ್‌ಗೆ ಆಲ್ ದಿ ಬೆಸ್ಟ್ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಶನಿವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆಯಲ್ಲಿ ಸೋಲು, ಗೆಲುವು ಸಹಜ. ಕಾಂಗ್ರೆಸ್‌ಗೆ ಜನರು ಆಶೀರ್ವಾದ ಮಾಡಿದ್ದಾರೆ. ನಾವು ಒಂದು ವಿಪಕ್ಷವಾಗಿ ಜನರ ಸೇವೆ ಮಾಡುತ್ತೇವೆ. ಒಳ್ಳೆಯ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತೇವೆ ಎಂದು ಶೋಭಾ ಕರಂದ್ಲಾಜೆ ಹೇಳಿದರು.

ಕ್ಷೇತ್ರದ ಜನತೆ, ಕಾರ್ಯಕರ್ತರಿಗೆ ಗೆಲುವು ಅರ್ಪಣೆ: ತನ್ವೀರ್



ಮೈಸೂರು, ಮೇ 13(ಎಂಕೆ)– ಕ್ಷೇತ್ರದ ಜನತೆ, ಕಾರ್ಯಕರ್ತರಿಗೆ ಗೆಲುವು ಅರ್ಪಣೆ ಮಾಡುವುದಾಗಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವಿಜೇತ ಅಭ್ಯರ್ಥಿ ತನ್ವೀರ್ ಸೇಠ್ ಹರ್ಷ ವ್ಯಕ್ತಪಡಿಸಿದರು.

ಮತ ಎಣಿಕೆ ಕೇಂದ್ರದಿಂದ ಹೊರಬಂದು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ಈ ಚುನಾವಣೆಗೂ ಮುನ್ನ ನನ್ನ ಮೇಲೆ ಆದಂತಹ ಹಲ್ಲೆ ಹಾಗೂ ಇನ್ನಿತರೆ ಕೆಲ ಕಾರಣಗಳಿಗೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದಿದ್ದೆ. ಆದರೆ ಕ್ಷೇತ್ರದ ಜನತೆ ಹಾಗೂ ಕಾರ್ಯಕರ್ತರ ಒತ್ತಾಯ ಹಾಗೂ ಕಾಂಗ್ರೆಸ್ ಪಕ್ಷವೂ ಕೂಡ ಸೂಚಿಸಿದ್ದರಿಂದ ಸ್ಪರ್ಧಿಸಬೇಕಾಯಿತು. ಆದ್ದರಿಂದ ಈ ಗೆಲುವನ್ನು ಕ್ಷೇತ್ರದ ಜನತೆ ಹಾಗೂ ಕಾರ್ಯಕರ್ತರಿಗೆ ಅರ್ಪಿಸುತ್ತೇನೆ ಎಂದರು.

ಭರವಸೆ ಈಡೇರಿಸುವ ಕೆಲಸ: ರಾಜ್ಯದಲ್ಲಿ ಕಾಂಗ್ರೆಸ್ ಬಹುಮತ ಪಡೆದಿದ್ದು, ಜನತೆ ನೀಡಿದ ಭರವಸೆಗಳನ್ನು ಈಡೇರಿಸುವುದು ನಮ್ಮ ಜವಾಬ್ದಾರಿಯಾಗಿದೆ. ಜನರ ನಿರೀಕ್ಷೆಗೆ ತಕ್ಕಂತೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ನಾನು ಯಾವತ್ತು ಅಧಿಕಾರ ಬೇಕು ಎಂದು ಅಪೇಕ್ಷೆ ಪಟ್ಟವನಲ್ಲ. ರಾಜ್ಯದಲ್ಲಿ ನಮ್ಮ ಸರ್ಕಾರ ಬಂದಿದೆ. ಪಕ್ಷ ಯಾವುದೇ ಜವಾಬ್ದಾರಿ ನೀಡಿದರೂ ನಿರ್ವಹಿಸಲು ಸಿದ್ಧನಾಗಿದ್ದೇನೆ ಎಂದು ಹೇಳಿದರು.

ಕೆ.ಆರ್.ನಗರ ನಗರಸಭೆ, ಸಾಲಿಗ್ರಾಮ ಪಪಂ ಮಾಡೋದು ನನ್ನ ಕನಸು



ಮೈಸೂರು, ಮೇ 13(ಎಂಕೆ)– ಕೆ.ಆರ್.ನಗರವನ್ನು ನಗರಸಭೆ ಹಾಗೂ ಸಾಲಿಗ್ರಾಮವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವುದು ನನ್ನ ಮೊದಲ ಆದ್ಯತೆಯಾಗಿದೆ ಎಂದು ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ವಿಜೇತ ಅಭ್ಯರ್ಥಿ ಕಾಂಗ್ರೆಸ್‌ನ ಡಿ.ರವಿಶಂಕರ್ ಹೇಳಿದರು.

ರಾಜ್ಯ ವಿಧಾನಸಭಾ ಚುನವಣೆ ಮತ ಎಣಿಕೆ ಕೇಂದ್ರದಿಂದ ಗೆಲುವಿನ ನಗೆಯೊಂದಿಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಾನು ನೆಪ ಮಾತ್ರ. ನನ್ನ ಗೆಲುವಿಗಾಗಿ ಹಲವಾರು ಕಾರ್ಯಕರ್ತರು ಹೋರಾಟ ಮಾಡಿದ್ದಾರೆ. ನಮ್ಮ ತಂದೆ ದೊಡ್ಡ ಸ್ವಾಮೀಗೌಡರ ಕನಸು ಕೂಡ ನನ್ನನು ಶಾಸಕನಾಗಿ ನೋಡುವುದಾಗಿತ್ತು. ನನ್ನ ಗೆಲುವನ್ನು ಕೃಷ್ಣರಾಜನಗರ ಕ್ಷೇತ್ರದ ಸಮಸ್ತ ಮತದಾರರಿಗೆ ಅರ್ಪಿಸುತ್ತೇನೆ. ಕೆ.ಆರ್.ನಗರ ಕ್ಷೇತ್ರದಲ್ಲಿ ಕೆ.ಆರ್.ನಗರ ಹಾಗೂ ಸಾಲಿಗ್ರಾಮ ತಾಲೂಕುಗಳಿದ್ದು, ಅಭಿವೃದ್ಧಿ ದೃಷ್ಟಿಯಿಂದ ಕೆ.ಆರ್ ನಗರವನ್ನು ನಗರಸಭೆ ಹಾಗೂ ಸಾಲಿಗ್ರಾಮವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವುದು ನನ್ನ ಮೊದಲ ಆದ್ಯತೆಯಾಗಿದೆ ಎಂದರು.

ತಂದೆ ಆಶೀರ್ವಾದ ಪಡೆದರು...

ಮತ ಎಣಿಕೆ ಕೇಂದ್ರದ ಎದುರು ತಂದೆಯ ಆಶೀರ್ವಾದ ಪಡೆದ ಕೆ.ಆರ್.ನಗರ ವಿಜೇತ ಅಭ್ಯರ್ಥಿ ಡಿ.ರವಿಶಂಕರ್ ಎಲ್ಲರ ಗಮನ ಸೆಳೆದರು. ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಬಳಿಕ ಹೊರಗಡೆ ತೆರಳುತ್ತಿದ್ದ ರವಿಶಂಕರ್, ತಮ್ಮ ತಂದೆ ದೊಡ್ಡ ಸ್ವಾಮೀಗೌಡರ ಪಾದಕ್ಕೆರಗಿ ಆಶೀರ್ವಾದ ಪಡೆದರು.

ಅತೀ ಹೆಚ್ಚು ಗೆಲುವಿನ ಅಂತರ ಪಡೆದು ಗೆಲುವು; ಸೋಲು!


ಬೆಂಗಳೂರು: ಕನಕಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಡಿ.ಕೆ.ಶಿವಕುಮಾರ್ (ಕಾಂಗ್ರೆಸ್) –1,22,392, ಕೊಳ್ಳೇಗಾಲ ಎ.ಆರ್.ಕೃಷ್ಣಮೂರ್ತಿ (ಕಾಂಗ್ರೆಸ್) –59,519, ಯಮಕನಮರಡಿ ಸತೀಶ್ ಜಾರಕಿಹೊಳಿ (ಕಾಂಗ್ರೆಸ್)–57,211, ಬೆಳಗಾವಿ ಗ್ರಾಮಾಂತರ ಲಕ್ಷ್ಮಿ ಹೆಬ್ಬಾಳ್ಕರ್ (ಕಾಂಗ್ರೆಸ್)–56,016, ಸರ್ವಜ್ಞನಗರ ಕೆ.ಜೆ.ಜಾರ್ಜ್ (ಕಾಂಗ್ರೆಸ್)–55,768, ಪದ್ಮನಾಭನಗರ ಆರ್.ಅಶೋಕ (ಬಿಜೆಪಿ)–55,175 ಬಸವನಗುಡಿ ರವಿಸುಬ್ರಹ್ಮಣ್ಯ (ಬಿಜೆಪಿ) –54,978 ಅತಿ ಹೆಚ್ಚು ಗೆಲುವಿನ ಅಂತರ ಪಡೆದರು.

ಬಿಜೆಪಿಯಿಂದ 75 ಹೊಸಬರಿಗೆ ಟಿಕೆಟ್ ನೀಡಲಾಗಿತ್ತು. ಈ ಪೈಕಿ 19 ಮಂದಿ ಮಾತ್ರ ಗೆದ್ದಿದ್ದಾರೆ.

ಅತೀ ಕಡಿಮೆ ಅಂತರದಲ್ಲಿ ಗೆದ್ದವರು

ಬೆಂಗಳೂರಿನ ಜಯನಗರದಲ್ಲಿ ಬಿಜೆಪಿಯ ಸಿ.ಕೆ.ರಾಮಮೂರ್ತಿ–16, ಗಾಂಧಿ ನಗರದಲ್ಲಿ ಕಾಂಗ್ರೆಸ್‌ನ ದಿನೇಶ್ ಗುಂಡೂರಾವ್–105, ಶೃಂಗೇರಿಯಲ್ಲಿ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ–201, ಮಾಲೂರಿ ನಲ್ಲಿ ಕಾಂಗ್ರೆಸ್‌ನ ಕೆ.ವೈ.ನಂಜೇಗೌಡ–248, ಮೂಡಿಗೆರೆಯಲ್ಲಿ ಕಾಂಗ್ರೆಸ್‌ನ ನಯನಾ ಮೋಟಮ್ಮ–722, ಚಿಂಚೋಳಿಯಲ್ಲಿ ಬಿಜೆಪಿಯ ಅವಿನಾಶ್ ಜಾಧವ್–858, ಜಗಳೂರಲ್ಲಿ ಕಾಂಗ್ರೆಸ್‌ನ ಬಿ.ದೇವೇಂದ್ರಪ್ಪ–874 ಕಡಿಮೆ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ.

ಚುನಾವಣಾ ಫಲಿತಾಂಶ ಲೋಕಸಭೆಗೆ ದಿಕ್ಸೂಚಿ ಅಲ್ಲ



ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಗೂ, ಲೋಕಸಭಾ ಚುನಾವಣೆಗೂ ಸಂಬಂಧವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಜನ ಕೊಟ್ಟ ತೀರ್ಪನ್ನು ಗೌರವದಿಂದ ಸ್ವೀಕರಿಸುತ್ತೇವೆ. ನಾವು ಹಿಂದೆ 25 ಲೋಕಸಭಾ ಸೀಟ್ ಗೆದ್ದಿದ್ವಿ. ಈ ಸಲವೂ ಅಷ್ಟೇ ಸೀಟ್ ಗೆದ್ದು ಮೋದಿಯವರು ಮತ್ತೆ ಪ್ರಧಾನಿ ಮಾಡಲು ಸಹಕರಿಸುತ್ತೇವೆ ಎಂದರು.

ಬಿಜೆಪಿಗೆ ಸೋಲು ಗೆಲುವು ಹೊಸದಲ್ಲ. ಎರಡು ಸ್ಥಾನದಿಂದ ಆರಂಭಿಸಿ ಸ್ವಂತ ಬಲದಿಂದ ಸರ್ಕಾರ ಮಾಡಿದ್ದೆವು. ಕಾರ್ಯಕರ್ತರು ಧೃತಿಗೆಡಬೇಕಿಲ್ಲ. ಅಭಿವೃದ್ಧಿ ಪರ ಆಡಳಿತ ಕೊಟ್ಟಿದ್ವಿ, ಆದರೂ ಸೋಲಾಗಿದೆ, ಪರಾಮರ್ಶೆ, ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ. ರಾಜ್ಯದ ಜನತೆಗೆ ಧನ್ಯವಾದ ಹೇಳುತ್ತೇನೆ. ರಾಜ್ಯದ ಅಭಿವೃದ್ಧಿಗೆ ಸಹಕಾರ ಇರಲಿದೆ. ಕಾಂಗ್ರೆಸ್‌ನವರು ಮನೆಮನಗೆ ಹೋಗಿ ಗ್ಯಾರಂಟಿ ಕಾರ್ಡ್ ಕೊಟ್ಟಿದ್ದೀರಿ. ನಿಮ್ಮ ಭರವಸೆ ಈಡೇರಿಸುವುದು ನಿಮ್ಮ ಕರ್ತವ್ಯ ಎಂದರು.

ಮಾಜಿ ಸಿಎಂ ಸಿದ್ದರಾಮಯ್ಯ ಸಹೋದರಿ ಪತಿ ನಿಧನ: ಕಳೆಗುಂದಿದ ಸಂಭ್ರಮಾಚರಣೆ

ಮೈಸೂರು: ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಗೆಲುವಿನ ಸಂಭ್ರಮಾಚರಣೆ ಕಳೆಗುಂದಿದೆ. ಅತ್ತ ಕಾಂಗ್ರೆಸ್ ಪಕ್ಷ ಗೆಲುವಿನ ನಗೆ ಬೀರುತ್ತಿದ್ದರೆ ಇತ್ತ ಸಿದ್ದರಾಮಯ್ಯ ಮನೆಯಲ್ಲಿ ಶೋಕದ ವಾತಾವರಣ ಮೂಡಿದೆ. ಸಿದ್ದರಾಮಯ್ಯ ಅವರ ಸ್ವಂತ ಸಹೋದರಿ ಶಿವಮ್ಮ ಅವರ ಪತಿ ರಾಮೇಗೌಡ (69) ಶನಿವಾರ ನಿಧನರಾಗಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಬೆಳಿಗ್ಗೆ ನಗರದ ಜೆಎಸ್ ಎಸ್ ಆಸ್ಪತ್ರೆ ಗೆ ದಾಖಲಿಸಲಾಗಿತ್ತು. ಬೆಳಿಗ್ಗೆ 8.30ರ ಸುಮಾರಿಗೆ ಕೊನೆಯುಸಿರೆಳೆದರು ಎಂದು ಕುಟುಂಬ ಸದಸ್ಯರು ತಿಳಿಸಿದರು. ಮೃತರು ಸಿದ್ದರಾಮನಹುಂಡಿಯಲ್ಲಿ ನ್ಯಾಯಬೆಲೆ ಅಂಗಡಿ ನಡೆಸುತ್ತಿದ್ದರು. ಮೃತರಿಗೆ ಪತ್ನಿ, ಮೂವರು ಹೆಣ್ಣು, ಒರ್ವ ಪುತ್ರ ಇದ್ದಾರೆ. ಹುಟ್ಟೂರಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

3ನೇ ವರ್ಷದ ಸವಿನೆನಪು



ಶ್ರೀಮತಿ ಲಕ್ಷ್ಮಮ್ಮ
ನಿಧನ: 14–5–2020
ಶ್ರೀ ಪಿ.ತಿಪ್ಪಣ್ಣ ಶಶಾಣ ಇವರ ಧರ್ಮಪತ್ನಿ, ಗಾಂಧಿನಗರ, ಮೈಸೂರು

ನೀವು ನಮ್ಮನ್ನಗಲಿ 3 ವರ್ಷ ಕಳೆದರೂ ಸದಾ ನಿಮ್ಮ ಸವಿನೆನಪಿನಲ್ಲಿರುವ
ದುಃಖತಪ್ತರು:
ಟಿ.ರಂಗನಾಥ
ಟಿ.ಮಂಜುನಾಥ
ಟಿ.ಆರತಿ,
ಸೊಸೆಯಂದಿರು
ಹಾಗೂ ಮೊಮ್ಮಕ್ಕಳು
ಮತ್ತು ಫಕೀರಪ್ಪ
ಕುಟುಂಬವರ್ಗದವರು


6ನೇ ವರ್ಷದ ಚಿರಸ್ಮರಣೆ



ಶ್ರೀ ಎಸ್.ರಾಮೇಗೌಡರು
ನಿವೃತ್ತ ಕೃಷಿ ಅಧಿಕಾರಿ
ನಿಧನ: 14–05–2017

ಬದುಕು ಕೊಟ್ಟ ಭಗವಂತ ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು:
ಮೃತರ ಧರ್ಮಪತ್ನಿ ಶ್ರೀಮತಿ ಜಯಮ್ಮ
ಮಗ: ಕುಮಾರಸ್ವಾಮಿ
ಸೊಸೆ: ಕವಿತ,
ಮೊಮ್ಮಗ: ಯಶ್ವಂತ್ ಎಂ.ಕೆ
ಮತ್ತು ಕುಟುಂಬ ವರ್ಗದವರು
ಬೃಂದಾವನ ಬಡಾವಣೆ, ಮೈಸೂರು–20

2ನೇ ವರ್ಷದ ಸವಿನೆನಪು



ಶ್ರೀಮತಿ ಗಾಯಿತ್ರಿ

ನೀವು ನಮ್ಮನ್ನಗಲಿ 2 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು:
ಹರೀಶ್ ಸ್ಟೀಲ್ ಮಾರ್ಟ್
ಜಯನಗರ, 4ನೇ ಮೇನ್, 4ನೇ ಕ್ರಾಸ್, ಮೈಸೂರು
ಮಕ್ಕಳಾದ:
ಎಂ.ರಾಜಶೇಖರ್, ಎಂ.ಹರೀಶ್,
ಸೊಸೆಯಂದಿರು: ಎಂ.ಶಿಲ್ಪ & ಭವ್ಯ
ಮೊಮ್ಮಕ್ಕಳು:
ಆರ್.ಎಸ್.ಶರತ್,
ಆರ್.ಎಸ್. ಶ್ರೇಯಸ್
ಎಚ್.ಬಿ. ಯಶಸ್ವಿನಿ, ಎಚ್.ಬಿ.ಯತಿನ್

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಂ.ಸುಬ್ರಮಣ್ಯ (ಮಣಿ)ರವರು
(ಲೇಟ್ ಮಾದಪ್ಪರವರಮಗ)
ಗೋಕುಲಂ, ಮೈಸೂರು ನಗರ
ನಿಧನ : 14–05–2021
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷವಾದರೂ ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಸದಾ ಹಚ್ಚಹಸಿರಾಗಿದೆ.
ಸದಾ ನಿಮ್ಮ ನೆನಪಿನಲ್ಲಿರುವ
ಮೃತರ ಪತ್ನಿ ಶ್ರೀಮತಿ ಕುಮುದಾಮಣಿ,
ಮಗ: ಎಸ್.ರಾಘವೇಂದ್ರ, ಹೆಣ್ಣುಮಕ್ಕಳು, ಅಳಿಯಂದಿರು,
ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಭಾಗ್ಯಮ್ಮರವರು

ಇವರು ದಿ: 04.05.2023 ಗುರುವಾರ ದೈವಾಧೀನರಾಗಿದ್ದು ತತ್ಸಂಬಂಧ ದಿ: 14.05.2023 ಭಾನುವಾರ ಬೆಳಗ್ಗೆ 11.30 ರಿಂದ 1.30 ರವರೆಗೆ ಹಾಲು ತುಪ್ಪ ಕಾರ್ಯವನ್ನು ಹಾಗೂ ಉತ್ತರ ಕ್ರಿಯಾದಿ ಕಾರ್ಯವನ್ನು 1.30 ರಿಂದ 4.30 ರವರೆಗೆ ಮೃತರ ಸ್ವಗೃಹ ಕರಡಿಮರಯ್ಯನ ಹುಂಡಿ, ಜಯಪುರ ಹೋಬಳಿ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಶ್ರೀ ಮೆಣಸೇಗೌಡ ಉ॥ ಅಮವಾಸೇಗೌಡ ಕುಟುಂಬವರ್ಗ ಹಾಗೂ ಬಂಧುಮಿತ್ರರು.
ಭೋಜನ: ಮಧ್ಯಾಹ್ನ 2 ಗಂಟೆಗೆ
ಹರಿಕಥೆ: ರಾತ್ರಿ 9 ಗಂಟೆಗೆ, ಶ್ರೀ ಭರತ್ ಶಿವಕುಮಾರ ಶಾಸ್ತ್ರಿ ಹಾಗೂ ತಂಡದಿಂದ

2ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಉಷಾ ಮತ್ತು ವಿರೇಶ್

ಶುಭಕೋರುವವರು:
ತಂದೆ ಬಾಬು ಬಿರಾದರ್, ತಾಯಿ ಉಷಾ ಬಿರಾದರ್, ತಮ್ಮ ಅಭಿಷೇಕ್ ಬಿರಾದರ್ ಮತ್ತು ಬಂಧುಮಿತ್ರರು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಎಕ್ಸ್‌ಟ್ರಾ ಇನ್ನಿಂಗ್ಸ್
ಚುನಾವಣಾ ವಿಶೇಷ

ಮೈಸೂರು ಮಿತ್ರ

ಭಾನುವಾರ
14 ಮೇ 2023





ಮೈಸೂರು ಕಾಂಗ್ರೆಸ್‌ನಲ್ಲಿ ಉಲ್ಲಾಸ...

ಹಾಲಿ ಅರ್ಧ ಡಜನ್ ಶಾಸಕರಿಗೆ ಸೋಲು, ಐವರು ಹೊಸಮುಖ

ಮೈಸೂರು, ಮೇ 13 (ಎಂಟಿವೈ)–ಮೈಸೂರು ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ ಆರು ಹಾಲಿ ಶಾಸಕರು ಸೋಲನುಭವಿಸಿದರೆ, ಮೂವರು ಪುನರಾಯ್ಕೆಯಾಗಿದ್ದಾರೆ. ಐವರು ಹೊಸ ಮುಖ ಹಾಗೂ ಮೂವರು 5 ವರ್ಷದ ಬಳಿಕ ಮತ್ತೆ ಅಧಿಕಾರ ಗದ್ದುಗೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ರಾಷ್ಟ್ರ ರಾಜಕಾರಣದ ಗಮನ ಸೆಳೆದಿದ್ದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯ ರಾಜಕಾರಣ ರಾಜ್ಯದ ಗಮನ ಸೆಳೆದಿತ್ತು. ಮಾಜಿ ಸಿಎಂ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ಕ್ಷೇತ್ರ ಸೇರಿದಂತೆ ಜಿಲ್ಲೆಯ 11 ಕ್ಷೇತ್ರಗಳೂ ಗಮನ ಸೆಳೆದಿದ್ದವು. ಮೇ 10ರಂದು ನಡೆದ ಚುನಾವಣೆಯ ಜಿದ್ದಾಜಿದ್ದಿನ ಫಲಿತಾಂಶ ಹೊರ ಬಿದ್ದಿದ್ದು, ಹಲವು ಅಚ್ಚರಿಗೆ ಸಾಕ್ಷಿಯಾಗಿದೆ.

ಕ್ಷೇತ್ರ ಕಳೆದುಕೊಂಡ ಆರು ಶಾಸಕರು: ಮೈಸೂರು ಜಿಲ್ಲೆಯಲ್ಲಿ ಹಾಲಿ ಆರು ಶಾಸಕರು ಸೋಲನುಭವಿಸಿದ್ದಾರೆ. ಪುನರಾಯ್ಕೆ ಬಯಸಿ ಚುನಾವಣಾ ಕಣಕ್ಕಿಳಿದಿದ್ದ ಆರು ಶಾಸಕರನ್ನು ಜನ ತಿರಸ್ಕರಿಸಿದ್ದಾರೆ. ಅವರಲ್ಲಿ ಮೂವರು ಜೆಡಿಎಸ್ ಶಾಸಕರಾಗಿದ್ದರೆ, ಇಬ್ಬರು ಬಿಜೆಪಿ ಹಾಗೂ ಓರ್ವ ಕಾಂಗ್ರೆಸ್ ಶಾಸಕರಾಗಿದ್ದಾರೆ. ಜೆಡಿಎಸ್ ಶಾಸಕರಾಗಿದ್ದ ಸಾ.ರಾ.ಮಹೇಶ್(ಕೆ.ಆರ್.ನಗರ), ಕೆ.ಮಹದೇವು (ಪಿರಿಯಾಪಟ್ಟಣ), ಅಶ್ವಿನ್‌ಕುಮಾರ್ (ತಿ.ನರಸೀಪುರ) ಸೋಲನುಭವಿಸಿದ್ದರೆ, ಬಿಜೆಪಿ ಶಾಸಕರಾಗಿದ್ದ ಎಲ್.ನಾಗೇಂದ್ರ (ಚಾಮರಾಜ), ಬಿ.ಹರ್ಷವರ್ಧನ್ (ನಂಜನಗೂಡು) ಹಾಗೂ ಕಾಂಗ್ರೆಸ್ ಶಾಸಕ ಹೆಚ್.ಪಿ.ಮಂಜುನಾಥ್ (ಹುಣಸೂರು) ಪರಾಭವಗೊಂಡಿದ್ದಾರೆ.

ಪುನರಾಯ್ಕೆಯಾದ ಮೂವರು: ಜಿಲ್ಲೆಯಲ್ಲಿ ಮೂವರು ಶಾಸಕರು ಪುನರಾಯ್ಕೆಯಾಗಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರ ಶಾಸಕ ಜಿ.ಟಿ.ದೇವೇಗೌಡ, ಎನ್.ಆರ್.ಕ್ಷೇತ್ರದ ತನ್ವೀರ್ ಸೇಠ್ ಹಾಗೂ ಹೆಚ್.ಡಿ.ಕೋಟೆ ಕ್ಷೇತ್ರ ಅನಿಲ್ ಚಿಕ್ಕಮಾದು ಪುನರಾಯ್ಕೆ ಯಾಗಿ ಕ್ಷೇತ್ರ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಮರು ಆಯ್ಕೆಯಾದ ಮೂವರು: ಮೈಸೂರು ಜಿಲ್ಲೆಯ ಮೂರು ಕ್ಷೇತ್ರಗಳಲ್ಲಿ ಹಳೆ ಸ್ನೇಹಿತರು 5 ವರ್ಷದ ಬಳಿಕ ತಮ್ಮ ತಮ್ಮ ಕ್ಷೇತ್ರದಲ್ಲಿ ಮರು ಆಯ್ಕೆಯಾಗಿದ್ದಾರೆ. ಕಳೆದ ಚುನಾವಣೆಯಲ್ಲಿ ಬಾದಾಮಿಗೆ ಹೋಗಿದ್ದ ಮಾಜಿ ಸಿಎಂ ಸಿದ್ದರಾಮಯ್ಯ 5 ವರ್ಷದ ಬಳಿಕ ಮತ್ತೆ ತವರು ಕ್ಷೇತ್ರ ವರುಣದಲ್ಲಿ ಗೆದ್ದು ಬೀಗಿದರೆ, ಕಳೆದ ಚುನಾವಣೆಯಲ್ಲಿ ಸೋಲನುಭವಿಸಿದ್ದ ಸಿದ್ದರಾಮಯ್ಯ ಅವರ ಸ್ನೇಹಿತರಾದ ತಿ.ನರಸೀಪುರ ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿ, ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಿರಿಯಾಪಟ್ಟಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ.ವೆಂಕಟೇಶ್ ಮರು ಆಯ್ಕೆಯಾಗಿ ವಿಧಾನಸಭೆ ಪ್ರವೇಶಿಸಿದ್ದಾರೆ.

ಐವರು ಹೊಸ ಮುಖಗಳಿಗೆ ಮಣೆ: ಜಿಲ್ಲೆಯಲ್ಲಿ 11 ಕ್ಷೇತ್ರಗಳಲ್ಲಿ ಐವರು ಹೊಸ ಮುಖಗಳಿಗೆ ಕ್ಷೇತ್ರದ ಜನ ಮಣೆ ಹಾಕಿದ್ದಾರೆ. ಇದೇ ಮೊದಲ ಬಾರಿಗೆ ಚುನಾವಣೆ ಎದುರಿಸಿದ್ದ ಮೂವರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಮೈಸೂರಿನ ಕೆ.ಆರ್.ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಟಿ.ಎಸ್.ಶ್ರೀವತ್ಸ, ನಂಜನಗೂಡು ಕ್ಷೇತ್ರ ದರ್ಶನ್ ಧ್ರುವನಾರಾಯಣ್ ಹಾಗೂ ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ.ಹರೀಶ್‌ಗೌಡ ಮೊದಲ ಚುನಾವಣೆ ಯಶಸ್ಸು ಕಂಡವರಾಗಿದ್ದಾರೆ. ಈ ಹಿಂದೆ ಎರಡು ಬಾರಿ ಸೋಲನುಭವಿಸಿದ್ದ ಕೆ.ಆರ್.ನಗರದ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಹಾಗೂ ಕಳೆದ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿ ಸೋಲನುಭವಿಸಿದ್ದ ಚಾಮರಾಜ ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿ ಕೆ.ಹರೀಶ್‌ಗೌಡ ಅವರು ಹೊಸದಾಗಿ ಮೊದಲ ಬಾರಿಗೆ ವಿಧಾನ ಸೌಧ ಪ್ರವೇಶಿಸುತ್ತಿದ್ದಾರೆ.

ಒಟ್ಟಾರೆ ಮೈಸೂರು ಜಿಲ್ಲೆಯ 11 ಕ್ಷೇತ್ರಗಳಲ್ಲಿ 8 ಕ್ಷೇತ್ರ ಕಾಂಗ್ರೆಸ್‌ಗೆ, ಎರಡು ಕ್ಷೇತ್ರ ಜೆಡಿಎಸ್‌ಗೆ ಹಾಗೂ ಒಂದು ಕ್ಷೇತ್ರ ಬಿಜೆಪಿಗೆ ನೀಡಿರುವ ಮೈಸೂರು ಜನತೆ ಅಚ್ಚರಿಯ ಹಾಗೂ ಪ್ರಬುದ್ಧವಾದ ಫಲಿತಾಂಶ ನೀಡಿ ಗಮನ ಸೆಳೆದಿದ್ದಾರೆ.



ಜೆಡಿಎಸ್‌ನ ಜಿ.ಟಿ.ದೇವೇಗೌಡ ಹಾಗೂ ಪುತ್ರ ಜಿ.ಡಿ.ಹರೀಶ್‌ಗೌಡ ಸಂಭ್ರಮಾಚರಣೆ.



ಚಾಮರಾಜ ಕ್ಷೇತ್ರದ ಕಾಂಗ್ರೆಸ್‌ನ ಕೆ.ಹರೀಶ್‌ಗೌಡ ಅಭಿಮಾನಿಗಳೊಂದಿಗೆ ಗೆಲುವಿನ ನಗೆ ಬೀರಿದರು.



ಎನ್‌ಆರ್ ಕ್ಷೇತ್ರದ ಕಾಂಗ್ರೆಸ್‌ನ ತನ್ವೀರ್ ಸೇಠ್ ಅಭಿಮಾನಿಗಳೊಂದಿಗೆ ವಿಜಯೋತ್ಸವ.

ಮೋದಿ, ಶಾ, ನಡ್ಡಾ ನೂರು ಬಾರಿ ಬಂದರೂ ಪ್ರಯೋಜನವಿಲ್ಲವೆಂದು ಮೊದಲೇ ಹೇಳಿದ್ದೆ: ಮಾಜಿ ಸಿಎಂ ಸಿದ್ದರಾಮಯ್ಯ ಕುಟುಕು

ಮೈಸೂರು,ಮೇ 13(ಪಿಎಂ)– ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ನೂರು ಬಾರಿ ರಾಜ್ಯಕ್ಕೆ ಬಂದರೂ ಪ್ರಯೋಜನ ವಿಲ್ಲ ಎಂದು ನಾನು ಮೊದಲೇ ಹೇಳಿದ್ದೆ ಎಂದು ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆಲುವು ಸಾಧಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜು ಆವರಣದಲ್ಲಿ ಶನಿವಾರ ಚುನಾವಣಾ ಫಲಿತಾಂಶ ಹೊರ ಬಿದ್ದ ಬಳಿಕ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಇವರು ನೂರು ಬಾರಿ ಬಂದರೂ ಏನೂ ಪ್ರಯೋಜನವಿಲ್ಲ ಎಂದು ನಾನು ಹೇಳಿದ್ದೆ. ಏಕೆಂದರೆ ಇದು ಕರ್ನಾಟಕ ವಿಧಾನಸಭಾ ಚುನಾವಣೆಯಾಗಿದ್ದು, ಕರ್ನಾಟಕದ ಜನತೆ ಕಷ್ಟಕ್ಕೆ ಒಳಗಾಗಿದ್ದಾರೆ. ಆ ಬಗ್ಗೆ ಅವರು ಮಾತನಾಡಲಿಲ್ಲ ಎಂದರು. ಬಿಜೆಪಿಯವರು ಕರ್ನಾಟಕಕ್ಕೆ ಕಳಂಕ ತಂದಿದ್ದಾರೆ. ಇಂತಹ ಭ್ರಷ್ಟ ಸರ್ಕಾರವನ್ನು ನಾವು ಎಂದೂ ನೋಡಿರಲಿಲ್ಲ. 40 ಪರ್ಸೆಂಟ್ ಕಮಿಷನ್ ಸರ್ಕಾರ ಎಂಬುದು ಕರ್ನಾಟಕದ ಇತಿಹಾಸದಲ್ಲೇ ಮೊದಲು. ಹಾಗಾಗಿ ಜನ ಬದಲಾವಣೆ ಬಯಸಿ, ಕಾಂಗ್ರೆಸ್‌ಗೆ ಅವಕಾಶ ಮಾಡಿಕೊಟ್ಟಿದ್ದಾರೆ. ನಾಡಿನ ಜನತೆ ಯಾವ ನಿರೀಕ್ಷೆ ಇಟ್ಟು ಅವಕಾಶ ಕೊಟ್ಟಿದ್ದರೋ ಅದರಂತೆ ನಡೆದುಕೊಳ್ಳುತ್ತೇವೆ ಎಂದು ಭರವಸೆ ನೀಡಿದರು.

ಪ್ರಣಾಳಿಕೆಯಲ್ಲಿ ಭರವಸೆ ಕೊಟ್ಟಿರುವಂತೆ ಈಡೇರಿಸುವ ಪ್ರಯತ್ನ ಪ್ರಾಮಾಣಿಕವಾಗಿ ಮಾಡುತ್ತೇವೆ. ವಿಶೇಷವಾಗಿ ಐದು ಗ್ಯಾರಂಟಿ ಕೊಟ್ಟಿದ್ದೇವೆ. ಅವುಗಳನ್ನು ಮೊದಲನೇ ಸಚಿವ ಸಂಪುಟದಲ್ಲೇ ತೀರ್ಮಾನ ಮಾಡಿ, ಆದೇಶ ಹೊರಡಿಸುತ್ತೇವೆ ಎಂದರು.

ಮತದಾರರಿಗೆ ಧನ್ಯವಾದ: ರಾಜ್ಯದ ಮತದಾರರಿಗೆ ನಾನು ಹೃದಯಪೂರ್ವಕ ಧನ್ಯವಾದ ಹೇಳುತ್ತೇನೆ. ಜೊತೆಗೆ ಕಾಂಗ್ರೆಸ್ ಕಾರ್ಯಕರ್ತರು, ಅಭ್ಯರ್ಥಿಗಳು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಣದೀಪ್ ಸಿಂಗ್ ಸುರ್ಜೆವಾಲ, ವೇಣುಗೋಪಾಲ್ ಅವರಿಗೂ ಧನ್ಯವಾದ ಹೇಳುತ್ತೇನೆ ಎಂದರು. ನಮ್ಮ ನಿರೀಕ್ಷೆಗೂ ಮೀರಿ ಜನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಆಶೀರ್ವಾದ ಮಾಡಿದ್ದಾರೆ. ಕಾಂಗ್ರೆಸ್ ಕನಿಷ್ಠ 130 ಸ್ಥಾನಗಳಲ್ಲಿ ಗೆಲುವು ಸಾಧಿಸಲಿದೆ ಎಂದು ಚುನಾವಣಾ ಪ್ರಚಾರ ಸಂದರ್ಭದಲ್ಲಿ ಹೇಳುತ್ತಿದ್ದೆ. ಅದೇ ರೀತಿ ನಾವು 136ಕ್ಕೂ ಹೆಚ್ಚು ಸ್ಥಾನ ಗಳಿಸಿದ್ದೇವೆ. ಇದು ಕಾಂಗ್ರೆಸ್‌ನ ದೊಡ್ಡ ಗೆಲುವು. ಜನತೆ ಬದಲಾವಣೆ ಬಯಸಿ ಕಾಂಗ್ರೆಸ್‌ಗೆ ಮತ ಕೊಟ್ಟಿದ್ದಾರೆ. ನಾವು ಜನರ ನಿರೀಕ್ಷೆಯಂತೆ ನಡೆಯಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದು ತಿಳಿಸಿದರು.

ವರುಣ ಕ್ಷೇತ್ರದಲ್ಲಿ ಪ್ರಚಾರವು ಡಾ.ಯತೀಂದ್ರ ನೇತೃತ್ವದಲ್ಲಿ ನಡೆಯಿತು. ಯತೀಂದ್ರ ಅವರು ಹಾಲಿ ಶಾಸಕರು. ಅವರು ತಮ್ಮ ಸ್ಥಾನ ತ್ಯಾಗ ಮಾಡಿ ಅವಕಾಶ ಕೊಟ್ಟರು. ಅವರಿಗೆ, ಕ್ಷೇತ್ರದ ಕಾರ್ಯಕರ್ತರು ಹಾಗೂ ಮತದಾರರಿಗೆ ವಿಶೇಷ ಧನ್ಯವಾದ ಹೇಳುತ್ತೇನೆ. ಕಾರ್ಯಕರ್ತರ ಶ್ರಮದಿಂದ ನಾನು ದೊಡ್ಡ ಅಂತರದಿಂದ ಗೆಲುವು ಸಾಧಿಸಲು ಸಾಧ್ಯವಾಯಿತು. ಹಾಗಾಗಿ ಎಲ್ಲಾ ಮುಖಂಡರು, ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಜಿಲ್ಲಾಧ್ಯಕ್ಷರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರಲ್ಲದೇ ಈ ಫಲಿತಾಂಶ ಮುಂಬರುವ ಲೋಕಸಭಾ ಚುನಾವಣೆಗೆ ಮೆಟ್ಟಿಲಾಗಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾನು ಯಾವುದೇ ಜಾತಿ ವಿರೋಧಿಯಲ್ಲ

ವರುಣದಲ್ಲಿ ನಿಮ್ಮನ್ನು ಲಿಂಗಾಯತರ ವಿರೋಧಿ ಎಂದು ಆರೋಪ ಮಾಡಲಾಗಿತ್ತು ಎಂಬ ಬಗ್ಗೆ ಪ್ರತಿಕ್ರಿಸಿದ ಸಿದ್ದರಾಮಯ್ಯ, ನಾನು ಯಾವುದೇ ಜಾತಿಯ ವಿರೋಧಿಯಲ್ಲ. ನಾನು ಮನುಷ್ಯತ್ವದಲ್ಲಿ ನಂಬಿಕೆ ಇಟ್ಟಿದ್ದೇನೆ. ಎಲ್ಲಾ ಧರ್ಮ, ಜಾತಿಗಳ ಬಗ್ಗೆ ಗೌರವಭಾವ ಹೊಂದಿದ್ದೇನೆ. ಯಾವುದೇ ಜಾತಿ–ಧರ್ಮಕ್ಕೆ ಸೇರಿದ್ದರೂ ಎಲ್ಲರೂ ಮನುಷ್ಯರೇ. ಆದ್ದರಿಂದ ನಾವು ಮನುಷ್ಯರಾಗಿ ಇರಬೇಕು. ಪ್ರತಿಯೊಬ್ಬ ವ್ಯಕ್ತಿಯನ್ನೂ ಪ್ರೀತಿಸಬೇಕು, ಗೌರವಿಸಬೇಕು. ಅವರ ಜೊತೆಗೆಯಲ್ಲಿ ಗೌರವದಿಂದ ನಡೆದುಕೊಳ್ಳಬೇಕು. ಮೊದಲಿನಿಂದಲೂ ಅಂತೆಯೇ ನಡೆದುಕೊಂಡು ಬಂದಿದ್ದೇನೆ. ಮುಂದೆಯೂ ಅದೇ ರೀತಿ ನಡೆದುಕೊಳ್ಳುತ್ತೇನೆ ಎಂದು ತಿಳಿಸಿದರು.



ನಂಜನಗೂಡಿನ ದರ್ಶನ್ ಗೆಲುವಿನ ನಗೆ



ಕೆಆರ್ ಕ್ಷೇತ್ರದ ಬಿಜೆಪಿಯ ಶ್ರೀವತ್ಸ ವಿಜಯೋತ್ಸವ ಆಚರಿಸಿದರು.



ಹೆಚ್.ಡಿ.ಕೋಟೆಯ ಅನಿಲ್‌ಚಿಕ್ಕಮಾದು ಗೆಲುವಿನ ಸಂಭ್ರಮಾಚರಣೆ



ಪಿರಿಯಾಪಟ್ಟಣದ ಕೆ.ವೆಂಕಟೇಶ್ ವಿಜಯೋತ್ಸವ

ಫಲಿತಾಂಶ ಕುರಿತು ಡಿಕೆಶಿ ಭಾವುಕತೆ



ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಭಾರೀ ಬಹುಮತ ಪಡೆಯುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷ ಭಾವುಕರಾಗಿದ್ದಾರೆ.

ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ. ಶಿವಕುಮಾರ್ ಭಾವುಕರಾಗಿ ತಮ್ಮ ಅಭಿಪ್ರಾಯ ತಿಳಿಸಿದರು. ಅಖಂಡ ಕರ್ನಾಟಕದ ಮಹಾ ಜನತೆಯ ಪಾದಗಳಿಗೆ ಸಾಷ್ಟಾಂಗ ನಮನಗಳು. ನಮ್ಮ ಮೇಲೆ ವಿಶ್ವಾಸವಿಟ್ಟು ನಿಚ್ಚಳ ಬಹುಮತ ನೀಡಿದ್ದಾರೆ. ನನ್ನ ಪಕ್ಷದ ಕಾರ್ಯಕರ್ತರು, ನಾಯಕರ ಒಗ್ಗಟ್ಟಿನ ಪರಿಶ್ರಮದಿಂದ ಈ ಗೆಲುವು ಸಾಧ್ಯವಾಗಿದೆ. ನಾನು ಪಕ್ಷದ ಅಧ್ಯಕ್ಷನಾಗಿ ಅಧಿಕಾರ ವಹಿಸಿ ಕೊಂಡ ಮೊದಲ ದಿನವೇ ಹೇಳಿದ್ದೆ, ಜತೆಗೂಡುವುದು ಆರಂಭ, ಜತೆಗೂಡಿ ಯೋಚಿಸುವುದು ಪ್ರಗತಿ, ಜತೆಯೂಡಿ ಕೆಲಸ ಮಾಡುವುದು ಯಶಸ್ಸು ಎಂದು. ಅದೇ ರೀತಿ ನಮ್ಮ ನಾಯಕರು ಹಾಗೂ ಕಾರ್ಯಕರ್ತರ ಒಗ್ಗಟ್ಟಿನ ಪರಿಶ್ರಮದಿಂದ ಪಕ್ಷಕ್ಕೆ ಈ ಯಶಸ್ಸು ಸಿಕ್ಕಿದೆ ಎಂದು ಹೇಳಿದರು. ನಾನು ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕೊಟ್ಟ ಮಾತಿನಂತೆ ನಾನು ಪಕ್ಷವನ್ನು ಗೆಲುವಿನ ದಡ ಸೇರಿಸಿದ್ದೇನೆ. ನನ್ನ ಮೇಲೆ ಬಿಜೆಪಿ ಷಡ್ಯಂತ್ರ ರೂಪಿಸಿ ಬಿಜೆಪಿ ಸೇರಬೇಕು ಅಥವಾ ಜೈಲಿಗೆ ಹೋಗಬೇಕು ಎಂಬ ಆಯ್ಕೆ ಇಟ್ಟಾಗ ನಾನು ಜೈಲಿಗೆ ಹೋಗುವುದನ್ನು ಆರಿಸಿಕೊಂಡೆ. ಆಗ ಸೋನಿಯಾ ಗಾಂಧಿ ಅವರು ತಿಹಾರ್ ಜೈಲಿಗೆ ಬಂದು ನನ್ನನ್ನು ಭೇಟಿ ಮಾಡಿದ್ದರು. ಅವರು ನನ್ನ ಮೇಲೆ ಅಷ್ಟು ನಂಬಿಕೆ ಇಟ್ಟಿದ್ದರು ಎಂದು ಭಾವುಕರಾಗಿ ಡಿಕೆಶಿ ನುಡಿದರು.

ಇದು ಒಬ್ಬನಿಂದ ಬಂದಿರುವ ಯಶಸ್ಸಲ್ಲ. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಸೇರಿದಂತೆ ಕಾಂಗ್ರೆಸ್ ಶಾಸಕರುಗಳು, ಎಐಸಿಸಿ ಪದಾಧಿಕಾರಿಗಳು, ಉಸ್ತುವಾರಿಗಳು, ರಾಜ್ಯದ ನಾಯಕರುಗಳು, ಪಕ್ಷದ ಪದಾಧಿಕಾರಿಗಳು, ಬೂತ್ ಮಟ್ಟದಲ್ಲಿ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಿರುವ ಎಲ್ಲಾ ಕಾರ್ಯಕರ್ತರಿಗೆ ಈ ಸಂದರ್ಭದಲ್ಲಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ಹೇಳಿದರು.

ನಾನು ಈಗ ಹೆಚ್ಚಾಗಿ ಏನು ಮಾತನಾಡುವುದಿಲ್ಲ. ಕಾರ್ಯಕರ್ತರು ಉತ್ಸಾಹದಿಂದ ಗಲಾಟೆ ಮಾಡುತ್ತಿದ್ದಾರೆ ಎಂದು ನನ್ನ ಚುನಾವಣಾ ಪ್ರಮಾಣಪತ್ರ ಪಡೆಯಲು ನಾನೇ ಹೋಗಬೇಕು ಎಂದು ರಾಮನಗರ ಜಿಲ್ಲಾಧಿಕಾರಿಗಳು ಹೇಳುತ್ತಿದ್ದಾರೆ. ಹೀಗಾಗಿ ನಾನು ಅಲ್ಲಿಗೆ ಹೋಗುತ್ತಿದ್ದು, ಅಲ್ಲಿಂದ ಬಂದ ನಂತರ ನನ್ನ ದೇವಾಲಯ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಮಾತನಾಡುತ್ತೇನೆ ಎಂದು ಡಿಕೆ ಶಿವಕುಮಾರ್ ತಿಳಿಸಿದರು.

ಹಾಸನದಲ್ಲಿ ಸ್ವರೂಪ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಭವಾನಿ

ಮಾತು ಉಳಿಸಿಕೊಂಡ ಗೌಡತಿ

ಹಾಸನ: ಟಿಕೆಟ್ ಹಂಚಿಕೆ ವಿಷಯದಿಂದಲೇ ಭಾರೀ ಕುತೂಹಲ ಸೃಷ್ಟಿಸಿದ್ದ ಹಾಸನ ವಿಧಾನಸಭೆ ಕ್ಷೇತ್ರದಲ್ಲಿ ಜೆಡಿಎಸ್ ಮತ್ತೆ ಪ್ರಾಬಲ್ಯ ಮೆರೆದಿದೆ. ಹಾಸನ ಕ್ಷೇತ್ರದಲ್ಲಿ ಜೆಡಿಎಸ್‌ನ ಸ್ವರೂಪ್ ಪ್ರಕಾಶ್ ಭರ್ಜರಿ ಗೆಲುವು ಸಾಧಿಸಿದ್ದಾರೆ. ಸಾಮಾನ್ಯ ಕಾರ್ಯಕರ್ತನನ್ನು ನಿಲ್ಲಿಸಿ, ಗೆಲ್ಲಿಸುವುದಾಗಿ ಜೆಡಿಎಸ್ ಕುಟುಂಬ ನೀಡಿದ್ದ ಹೇಳಿಕೆ ನಿಜವಾಗಿದೆ.

ಮೂರು ಬಾರಿ ಶಾಸಕರಾಗಿದ್ದ ದಿವಂಗತ ಎಚ್.ಎಸ್.ಪ್ರಕಾಶ್ ಅವರ ಪುತ್ರ ಸ್ವರೂಪ್ 8 ಸಾವಿರ ಮತಗಳಿಂದ ಗೆಲುವು ಸಾಧಿಸಿದ್ದಾರೆ. ಅನುಕಂಪ, ಆಡಳಿತ ವಿರೋಧಿ ಅಲೆ ಸ್ವರೂಪ್ ಕೈ ಹಿಡಿಯುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಭವಾನಿ ರೇವಣ್ಣ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದರು.

ಇದೇ ವಿಚಾರ ಕುಮಾರಸ್ವಾಮಿ ಮತ್ತು ಭವಾನಿ ರೇವಣ್ಣ ಕುಟುಂಬ ನಡುವೆ ಮನಸ್ತಾಪಕ್ಕೂ ಕಾರಣವಾಗಿತ್ತು. ತೀವ್ರ ಹಗ್ಗ–ಜಗ್ಗಾಟದ ನಡುವೆ ಕೊನೆ ಕ್ಷಣದಲ್ಲಿ ಭವಾನಿಗೆ ಟಿಕೆಟ್ ನಿರಾಕರಿಸಿ, ಸ್ವರೂಪ್ ಪ್ರಕಾಶ್‌ಗೆ ಟಿಕೆಟ್ ನೀಡಲಾಯಿತು.



ರೇವಣ್ಣ ಕುಟುಂಬದ ಯಾರೇ ಸ್ಪರ್ಧಿಸಿದರೂ, 50 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸು ವುದಾಗಿ ಸವಾಲು ಹಾಕಿದ್ದ ಪ್ರೀತಂಗೌಡ ಸೋಲು ಅನುಭವಿಸಬೇಕಾಗಿದೆ. ಅತಿಯಾದ ಆತ್ಮವಿಶ್ವಾಸ, ಅನಗತ್ಯ ಹೇಳಿಕೆಗಳಿಂದ ಗೊಂದಲ ಸೃಷ್ಟಿಸಿಕೊಂಡ ಪ್ರೀತಂಗೌಡರನ್ನು ಮತದಾರರು ತಿರಸ್ಕರಿಸಿದ್ದಾರೆ.

ದಾಸ ಒಕ್ಕಲಿಗ ಸಮುದಾಯದ ಮತಗಳು ಬಿಜೆಪಿ, ಜೆಡಿಎಸ್‌ಗೆ ಹಂಚಿಕೆಯಾಗಿದ್ದು, ಅಲ್ಪಸಂಖ್ಯಾತರ ಮತಗಳು ಸಂಪೂರ್ಣವಾಗಿ ಜೆಡಿಎಸ್ ಪರ ಬಂದಿದ್ದರಿಂದ ಸ್ವರೂಪ್ ಗೆಲುವು ಸುಲಭವಾಯಿತು.

ಸ್ವರೂಪ್‌ಗೆ ಟಿಕೆಟ್ ಕೊಡಲು ಆರಂಭದಲ್ಲಿ ಅಪಸ್ವರ ಎತ್ತಿದ್ದ ಎಚ್.ಡಿ.ರೇವಣ್ಣ ಕುಟುಂಬ ನಂತರ ಅಭ್ಯರ್ಥಿ ಪರವಾಗಿಯೇ ನಿಂತಿತು. ಒಮ್ಮೆ ಇಡೀ ದೇವೇಗೌಡ ಕುಟುಂಬ ಸದಸ್ಯರು ಹಾಸನಕ್ಕೆ ಬಂದು ಪ್ರಚಾರ ನಡೆಸಿದರು. ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಭಾವನಾತ್ಮಕ ಪ್ರಚಾರಗಳು ಸ್ವರೂಪ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದವು. ಟಿಕೆಟ್ ನೀಡಿದ ಬೆನ್ನಲ್ಲೇ, ದೇವೇಗೌಡರು ಭವಾನಿ ಅವರನ್ನು ಮನೆಗೆ ಕರೆಸಿ ಟಾಸ್ಕ್ ನೀಡಿದ್ದರು. ಸ್ವರೂಪ್ ಪ್ರಕಾಶ್ ಅವರನ್ನು ಗೆಲ್ಲಿಸಿಕೊಂಡು ಬರುವ ಜವಾಬ್ದಾರಿಯನ್ನು ನೀಡಿದ್ದರು. ದೇವೇಗೌಡರ ಮಾತಿನಂತೆ ಸ್ವರೂಪ್ ಪ್ರಕಾಶ್ ಪರ ಭರ್ಜರಿ ಕ್ಯಾಂಪೇನ್ ಮಾಡಿದ್ದರು.

ಸ್ವರೂಪ್ ನನ್ನ ಮಗನಂತೆ, ಇವನು ಗೆದ್ದರೆ ನಾನೇ ಗೆದ್ದಂತೆ ಎಂದು ನಿರಂತರ ಪ್ರಚಾರ ನಡೆಸಿದ ಭವಾನಿ ರೇವಣ್ಣ ಇಡೀ ಕ್ಷೇತ್ರದಾದ್ಯಂತ ಬಿರುಸಿನ ಪರಚಾರ ನಡೆಸಿದ್ದರು. ಬಿಜೆಪಿಯಿಂದ ಪ್ರೀತಂಗೌಡ ಕಣಕ್ಕೆ ಇಳಿದಿದ್ದರೆ, ಕಾಂಗ್ರೆಸ್‌ನಿಂದ ಬನವಾಸಿ ರಂಗಸ್ವಾಮಿ ಕಣದಲ್ಲಿದ್ದರು.

ಕಿಂಗ್ ಮೇಕರ್ ಆಗುವ ಜೆಡಿಎಸ್ ಕನಸು ಭಗ್ನ

ಬೆಂಗಳೂರು: ಈ ಬಾರಿ ಅತಂತ್ರ ವಿಧಾನಸಭೆ ನಿರ್ಮಾಣವಾದರೆ ಕಿಂಗ್ ಮೇಕರ್ ಆಗುವ ಕನಸು ಕಂಡಿದ್ದ ಜಾತ್ಯತೀತ ಜನತಾದಳದ ಕನಸು ಭಗ್ನವಾಗಿದೆ. ದಳ 19 ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಕರ್ನಾಟಕ ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರ ಬೀದ್ದಿದ್ದು, 224 ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಪಕ್ಷ 136 ಸ್ಥಾನ ಗೆದ್ದು, ಸ್ಪಷ್ಟ ಬಹುಮತ ಗಳಿಸಿದೆ. ಆಡಳಿತ ವಿರೋಧಿ ಅಲೆಯಲ್ಲಿ ಕೊಚ್ಚಿ ಹೋಗಿರುವ ಬಿಜೆಪಿ 65 ಕ್ಷೇತ್ರಗಳಲ್ಲಿ ಗೆದ್ದಿದೆ. ಕಳೆದ ಬಾರಿಗಿಂತ ಈ ಭಾರೀ ಹೀನಾಯ ಹಿನ್ನಡೆ ಅನುಭವಿಸಿದೆ. ಮತದಾನೋತ್ತರ ಸಮೀಕ್ಷೆಗಳಲ್ಲಿ ಈ ಬಾರಿ ಅತಂತ್ರ ಸ್ಥಿತಿ ನಿರ್ಮಾಣವಾಗಬಹುದು ಎಂದು ಹೇಳಿದ್ದವು. ಅಂತೆಯೇ ಈ ಬಾರಿಯೂ ಜೆಡಿಎಸ್ ಕಿಂಗ್ ಮೇಕರ್ ಆಗಬಹುದು ಎಂದು ಸಮೀಕ್ಷೆಗಳಲ್ಲಿ ಹೇಳಲಾಗಿತ್ತು.

ಆದರೆ ಈ ಬಾರಿ ಜೆಡಿಎಸ್ 19 ಕ್ಷೇತ್ರಗಳಲ್ಲಿ ಮಾತ್ರ ಮುನ್ನಡೆ ಕಾಯ್ದುಕೊಂಡಿದೆ. ಕಳೆದ ಬಾರಿಗಿಂತ ಈ ಬಾರಿ ಜೆಡಿಎಸ್ ಹಲವು ಕ್ಷೇತ್ರಗಳಲ್ಲಿ ಹಿನ್ನಡೆ ಅನುಭವಿಸಿದೆ. ಆ ಮೂಲಕ ಜೆಡಿಎಸ್‌ನ ಕಿಂಗ್ ಮೇಕರ್ ಕನಸು ಭಗ್ನಗೊಂಡಿದ್ದು, ಮೂರನೇ ಸ್ಥಾನಕ್ಕೆ ಸಮಾಧಾನ ಪಟ್ಟುಕೊಳ್ಳುವಂತಾಗಿದೆ. ಎಚ್‌ಡಿ ದೇವೇಗೌಡ ನೇತೃತ್ವದ ಪಕ್ಷವು 2018 ರಲ್ಲಿ 37 ಸ್ಥಾನಗಳನ್ನು ಗೆದ್ದಿತು ಮತ್ತು ಶೇಕಡಾ 20 ಕ್ಕಿಂತ ಹೆಚ್ಚು ಮತ ಪ್ರಮಾಣ ಗಳಿಸಿತ್ತು. ಆದರೆ ಈ ಬಾರಿ ಇದಕ್ಕೆ ವ್ಯತಿರಿಕ್ತವಾಗಿ, ಪಕ್ಷವು ಪ್ರಸ್ತುತ 19 ಸ್ಥಾನಗಳಲ್ಲಿ ಮಾತ್ರ ಮುನ್ನಡೆ ಸಾಧಿಸಿದೆ.

ಮೈಸೂರು ಮಿತ್ರ

ಭಾನುವಾರ 14 ಮೇ 2023

ಪುಟ 11

ವಿಧಾನಸಭೆ ಚುನಾವಣೆ – 2023ರ ಫಲಿತಾಂಶ

ಕ್ಷೇತ್ರ	ವಿಜೇತರು
ನಿಪ್ಪಾಣಿ	ಶಶಿಕಲಾ ಜೊಲ್ಲೆ
ಚಿಕ್ಕೋಡಿ	ಗಣೇಶ್ ಹುಕ್ಕೇರಿ
ಅಥಣಿ	ಲಕ್ಷ್ಮಣ ಸವದಿ
ಕಾಗವಾಡ	ಭರಮಗೌಡ ಕಾಗೆ
ಕುಡಚಿ	ಮಹೇಂದ್ರ ತಮ್ಮಣ್ಣನವರ್
ರಾಯ್‌ಭಾಗ್	ಐಹೊಳೆ ಮಹಾಲಿಂಗಪ್ಪ
ಹುಕ್ಕೇರಿ	ನಿಖಿಲ್ ಕತ್ತಿ
ಅರಭಾವಿ	ಬಾಲಚಂದ್ರ ಜಾರಕಿಹೊಳಿ
ಗೋಕಾಕ್	ರಮೇಶ್ ಜಾರಕಿಹೊಳಿ
ಯಮಕನಮರಡಿ	ಸತೀಶ್ ಜಾರಕಿಹೊಳಿ
ಬೆಳಗಾವಿ ಉತ್ತರ	ಆಸೀಫ್ ಸೇಠ್
ಬೆಳಗಾವಿ ದಕ್ಷಿಣ	ಅಭಯ್ ಪಾಟೀಲ್
ಬೆಳಗಾವಿ ಗ್ರಾಮಾಂತರ	ಲಕ್ಷ್ಮಿ ಹೆಬ್ಬಾಳ್ಕರ್
ಖಾನಾಪುರ	ವಿಠಲ್ ಹಲಗೇಕರ್
ಕಿತ್ತೂರು	ಬಾಬಾಸಾಹೇಬ್ ಪಾಟೀಲ್
ಬೈಲಹೊಂಗಲ	ಮಹಾಂತೇಶ್ ಕೌಜಲಗಿ
ಸವದತ್ತಿ ಯಲ್ಲಮ್ಮ	ವಿಶ್ವಾಸ ವೈದ್ಯ
ರಾಮದುರ್ಗ	ಅಶೋಕ್ ಪಟ್ಟಣ್
ಮುಧೋಳ್	ತಿಮ್ಮಾಪುರ ಬಾಳಪ್ಪ
ತೇರದಾಳ	ಸಿದ್ದು ಸವದಿ
ಜಮಖಂಡಿ	ಜಗದೀಶ್ ಗುಡಗುಂಟಿ
ಬೀಳಗಿ	ಜೆಟಿ.ಪಾಟೀಲ್
ಬಾದಾಮಿ	ಬಿ.ಬಿ. ಚಿಮ್ಮನಕಟ್ಟಿ
ಬಾಗಲಕೋಟೆ	ಹೆಚ್.ವೈ. ಮೇಟಿ
ಹುನಗುಂದ	ವಿಜಯಾನಂದ ಕಾಶಪ್ಪನವರ್
ಮುದ್ದೇಬಿಹಾಳ್	ಅಪ್ಪಾಜಿ ಚನ್ನಬಸವರಾಜ್
ದೇವರ ಹಿಪ್ಪರಗಿ	ಭೀಮನಗೌಡ ಪಾಟೀಲ್
ಬಸವನ ಬಾಗೇವಾಡಿ	ಶಿವಾನಂದ ಪಾಟೀಲ್
ಬಬಲೇಶ್ವರ	ಎಂ.ಬಿ. ಪಾಟೀಲ್
ಬಿಜಾಪುರ ನಗರ	ಬಸನಗೌಡ ಪಾಟೀಲ್ ಯತ್ನಾಳ್
ನಾಗಠಾಣ	ವಿಠಲ್ ಕಟಕದೊಂಡಿಬಾ
ಇಂಡಿ	ಯಶವಂತ ರಾಯಗೌಡ
ಸಿಂಧಗಿ	ಅಶೋಕ್ ಮನಗುಳಿ
ಅಫ್ಜಲ್‌ಪುರ	ನಿತೀನ್ ಗುತ್ತೇದಾರ್
ಜೇವರ್ಗಿ	ಅಜಯ್ ಸಿಂಗ್
ಶೋರಾಪುರ	ರಾಜ ನಾಯ್ಕ್
ಶಹಾಪುರ	ಶರಣಬಸಪ್ಪ ದರ್ಶನಾಪುರ
ಯಾದಗಿರಿ	ಚನ್ನರೆಡ್ಡಿ ಪಾಟೀಲ್
ಗುರುಮಿಟ್ಕಲ್	ಶರಣ್‌ಗೌಡ ಕಂದಕೂರ್
ಚಿತ್ತಾಪುರ	ಪ್ರಿಯಾಂಕ್ ಖರ್ಗೆ
ಸೇಡಂ	ಶರಣಪ್ರಕಾಶ್ ಪಾಟೀಲ್
ಚಿಂಚೋಳಿ	ಅವಿನಾಶ್ ಜಾಧವ್
ಗುಲ್ಬರ್ಗಾ ಗ್ರಾಮೀಣ	ಬಸವರಾಜ ಮತ್ತಿಮೂಡು
ಗುಲ್ಬರ್ಗಾ ದಕ್ಷಿಣ	ಅಲ್ಲಮಪ್ರಭು ಪಾಟೀಲ್
ಗುಲ್ಬರ್ಗಾ ಉತ್ತರ	ಕನೀಜ್ ಫಾತೀಮಾ
ಆಳಂದ	ಬಿ.ಆರ್. ಪಾಟೀಲ್
ಬಸವಕಲ್ಯಾಣ	ಶರಣು ಸಲಗರ
ಹುಮ್ನಾಬಾದ್	ಸಿದ್ದು ಪಾಟೀಲ್
ಬೀದರ್ ದಕ್ಷಿಣ	ಶೈಲೇಂದ್ರ ಬೆಲ್ದಾಳೆ
ಬೀದರ್	ರಹೀಂ ಖಾನ್
ಭಾಲ್ಕಿ	ಈಶ್ವರ್ ಖಂಡ್ರೆ
ಔರಾದ್	ಪ್ರಭು ಚೌಹಾಣ್
ರಾಯಚೂರು ಗ್ರಾಮೀಣ	ಬಸನಗೌಡ ದದ್ದಲ್
ರಾಯಚೂರು	ಮಹಮ್ಮದ್ ಶಾಲಂ
ಮಾನ್ವಿ	ಹಂಪಯ್ಯ ನಾಯಕ್
ದೇವದುರ್ಗ	ಕರೆಮ್ಮ
ಲಿಂಗಸಗೂರು	ಮಾನಪ್ಪ ವಜ್ಜಲ್
ಸಿಂಧನೂರು	ಹಂಪನಗೌಡ ಬಾದರ್ಲಿ
ಮಸ್ಕಿ	ಬಸನಗೌಡ ತುರ್ವಿಹಾಳ್
ಕುಷ್ಟಗಿ	ಹನುಮಗೌಡ ಪಾಟೀಲ್
ಕನಕಗಿರಿ	ಶಿವರಾಜ್ ತಂಗಡಗಿ
ಗಂಗಾವತಿ	ಜನಾರ್ಧನ್ ರೆಡ್ಡಿ
ಯಲಬುರ್ಗಾ	ಬಸವರಾಜ ರಾಯರೆಡ್ಡಿ
ಕೊಪ್ಪಳ	ರಾಘವೇಂದ್ರ ಹಿಟ್ನಾಳ
ಶಿರಹಟ್ಟಿ	ಚಂದ್ರು ಲಮಾಣಿ
ಗದಗ	ಹೆಚ್.ಕೆ. ಪಾಟೀಲ್
ರೋಣ	ಗುರುಪಾದಗೌಡ ಪಾಟೀಲ್
ನರಗುಂದ	ಸಿ.ಸಿ.ಪಾಟೀಲ್
ನವಲಗುಂದ	ನಿಂಗರಡ್ಡಿ ಕೋನರಡ್ಡಿ
ಕುಂದಗೋಳ	ಎಂ.ಆರ್. ಪಾಟೀಲ್
ಧಾರವಾಡ	ವಿನಯ್ ಕುಲಕರ್ಣಿ
ಹುಬ್ಬಳ್ಳಿ–ಧಾರವಾಡ(ಪೂ)	ಅಬ್ಬಯ್ಯ ಪ್ರಸಾದ್
ಹುಬ್ಬಳ್ಳಿ–ಧಾರವಾಡ(ಸೆಂ.)	ಮಹೇಶ್ ಟೆಂಗಿನಕಾಯಿ
ಹುಬ್ಬಳ್ಳಿ–ಧಾರವಾಡ(ಪ)	ಅರವಿಂದ್ ಬೆಲ್ಲದ್
ಕಲಘಟಗಿ	ಸಂತೋಷ್ ಲಾಡ್
ಹಳಿಯಾಳ	ರಘುನಾಥ್ ದೇಶಪಾಂಡೆ
ಕಾರವಾರ	ಸತೀಶ್ ಕೃಷ್ಣ ಸೈಲ್
ಕುಮಟಾ	ಸೂರಜ್ ನಾಯ್ಕ್
ಭಟ್ಕಳ	ಮಂಕಾಳ ವೈದ್ಯ
ಶಿರಸಿ	ಭೀಮಣ್ಣ ನಾಯ್ಕ್
ಯಲ್ಲಾಪುರ	ಶಿವರಾಮ್ ಹೆಬ್ಬಾರ್
ಹಾನಗಲ್	ಶ್ರೀನಿವಾಸ್ ಮಾನೆ
ಶಿಗ್ಗಾಂವಿ	ಬಸವರಾಜ ಬೊಮ್ಮಾಯಿ
ಹಾವೇರಿ	ರುದ್ರಪ್ಪ ಲಮಾಣಿ
ಬ್ಯಾಡಗಿ	ಬಸವರಾಜ ಶಿವಣ್ಣನವರ್
ಹಿರೇಕೆರೂರು	ಯು.ಬಿ. ಬಣಕಾರ್
ರಾಣೇಬೆನ್ನೂರು	ಪ್ರಕಾಶ್ ಕೋಳಿವಾಡ
ಹಡಗಲಿ	ಕೃಷ್ಣ ನಾಯಕ
ಹಗರಿಬೊಮ್ಮನಹಳ್ಳಿ	ನೇಮರಾಜ ನಾಯ್ಕ
ವಿಜಯನಗರ	ಹೆಚ್.ಆರ್. ಗವಿಯಪ್ಪ
ಕಂಪ್ಲಿ	ಜೆ.ಎನ್. ಗಣೇಶ್

ಮೈಸೂರು ಮಿತ್ರ

ಭಾನುವಾರ 14
ಮೇ 2023

ವಿಧಾನಸಭೆ ಚುನಾವಣೆ – 2023ರ ಫಲಿತಾಂಶ

ಸಿರುಗುಪ್ಪ ರಾಜ ನಾಯ್ಕ್	ಬಳ್ಳಾರಿ ಗ್ರಾಮಾಂತರ ಬಿ.ನಾಗೇಂದ್ರ	ಬಳ್ಳಾರಿ ನಗರ ನಾರಾ ಭರತ್ ರೆಡ್ಡಿ	ಸಂಡೂರು ತುಕಾರಾಂ	ಕೂಡ್ಲಿಗಿ ಎನ್.ಟಿ. ಶ್ರೀನಿವಾಸ್	ಮೊಳಕಾಲ್ಮೂರು ಎನ್.ವೈ. ಗೋಪಾಲಕೃಷ್ಣ	ಚಳ್ಳಕೆರೆ ರಘುಮೂರ್ತಿ
ಚಿತ್ರದುರ್ಗ ಕೆ.ಸಿ.ವೀರೇಂದ್ರ ಪಪ್ಪಿ	ಹಿರಿಯೂರು ಡಿ.ಸುಧಾಕರ್	ಹೊಸದುರ್ಗ ಬಿ.ಜಿ. ಗೋವಿಂದಪ್ಪ	ಹೊಳಲ್ಕೆರೆ ಎಂ. ಚಂದ್ರಪ್ಪ	ಜಗಳೂರು ಬಿ. ದೇವೇಂದ್ರಪ್ಪ	ಹರಪನಹಳ್ಳಿ ಲತಾ ಮಲ್ಲಿಕಾರ್ಜುನ	ಹರಿಹರ ಬಿ.ಪಿ. ಹರೀಶ್
ದಾವಣಗೆರೆ ಉತ್ತರ ಎಸ್.ಎಸ್. ಮಲ್ಲಿಕಾರ್ಜುನ	ದಾವಣಗೆರೆ ದಕ್ಷಿಣ ಶಾಮನೂರು ಶಿವಶಂಕರಪ್ಪ	ಮಾಯಕೊಂಡ ಕೆ.ಎಸ್ ಬಸವಂತಪ್ಪ	ಚನ್ನಗಿರಿ ಬಸವರಾಜು ಶಿವಗಂಗಾ	ಹೊನ್ನಾಳಿ ಶಾಂತನಗೌಡ	ಶಿವಮೊಗ್ಗ ಗ್ರಾಮೀಣ ಶಾರದಾ ಪೂರ್ಯಾನಾಯ್ಕ	ಭದ್ರಾವತಿ ಬಿ.ಕೆ. ಸಂಗಮೇಶ್ವರ
ಶಿವಮೊಗ್ಗ ಚನ್ನಬಸಪ್ಪ	ತೀರ್ಥಹಳ್ಳಿ ಆರಗ ಜ್ಞಾನೇಂದ್ರ	ಶಿಕಾರಿಪುರ ವಿಜಯೇಂದ್ರ ಯಡಿಯೂರಪ್ಪ	ಸೊರಬ ಮಧು ಬಂಗಾರಪ್ಪ	ಸಾಗರ ಬೇಳೂರು ಗೋಪಾಲಕೃಷ್ಣ	ಬೈಂದೂರು ಗುರುರಾಜ್ ಶೆಟ್ಟಿ	ಕುಂದಾಪುರ ಕಿರಣ್ ಕುಮಾರ್ ಕೊಡಗಿ
ಉಡುಪಿ ಯಶ್‌ಪಾಲ್ ಸುವರ್ಣ	ಕಾಪು ಸುರೇಶ್ ಶೆಟ್ಟಿ ಗುರ್ಮೆ	ಕಾರ್ಕಳ ವಿ.ಸುನೀಲ್ ಕುಮಾರ್	ಶೃಂಗೇರಿ ಟಿ.ಡಿ. ರಾಜೇಗೌಡ	ಮೂಡಿಗೆರೆ ನಯನ ಮೋಟಮ್ಮ	ಚಿಕ್ಕಮಗಳೂರು ಹೆಚ್.ಡಿ. ತಮ್ಮಯ್ಯ	ತರಿಕೆರೆ ಜಿ.ಹೆಚ್. ಶ್ರೀನಿವಾಸ
ಕಡೂರು ಆನಂದ್ ಕೆ.ಎಸ್	ಚಿಕ್ಕನಾಯಕನಹಳ್ಳಿ ಸುರೇಶ್ ಬಾಬು	ತಿಪಟೂರು ಕೆ.ಷಡಕ್ಷರಿ	ತುರುವೆಕೆರೆ ಎಂ.ಟಿ. ಕೃಷ್ಣಪ್ಪ	ಕುಣಿಗಲ್ ಹೆಚ್.ಡಿ. ರಂಗನಾಥ್	ತುಮಕೂರು ನಗರ ಇಕ್ಬಾಲ್ ಅಹಮದ್	ತುಮಕೂರು ಗ್ರಾಮೀಣ ಸುರೇಶ್ ಗೌಡ
ಕೊರಟಗೆರೆ ಜಿ.ಪರಮೇಶ್ವರ	ಗುಬ್ಬಿ ಎಸ್.ಆರ್ ಶ್ರೀನಿವಾಸ್	ಶಿರಾ ಟಿ.ಬಿ. ಜಯಚಂದ್ರ	ಪಾವಗಡ ಹೆಚ್.ವಿ. ವೆಂಕಟೇಶ್	ಮಧುಗಿರಿ ಕ್ಯಾತಸಂದ್ರ ರಾಜಣ್ಣ	ಗೌರಿಬಿದನೂರು ಕೆ.ಹೆಚ್. ಪುಟ್ಟಸ್ವಾಮಿ ಗೌಡ	ಬಾಗೇಪಲ್ಲಿ ಎಸ್.ಎನ್ ಸುಬ್ಬಾರೆಡ್ಡಿ
ಚಿಕ್ಕಬಳ್ಳಾಪುರ ಪ್ರದೀಪ್ ಈಶ್ವರ್	ಶಿಡ್ಲಘಟ್ಟ ಬಿ.ಎನ್. ರವಿಕುಮಾರ್	ಚಿಂತಾಮಣಿ ಎಂ.ಸಿ. ಸುಧಾಕರ್	ಶ್ರೀನಿವಾಸಪುರ ವೆಂಕಟ ಶಿವರೆಡ್ಡಿ	ಮುಳಬಾಗಿಲು ಸಮೃದ್ಧಿ ಮಂಜುನಾಥ್	ಕೆಜಿಎಫ್ ರೂಪಕಲಾ	ಬಂಗಾರಪೇಟೆ ಎಸ್.ಎನ್. ನಾರಾಯಣಸ್ವಾಮಿ
ಕೋಲಾರ ಕೊತ್ತೂರು ಮಂಜು	ಮಾಲೂರು ಕೆ.ವೈ. ನಂಜೇಗೌಡ	ಯಲಹಂಕ ಎಸ್.ಆರ್. ವಿಶ್ವನಾಥ್	ಕೆ.ಆರ್.ಪುರಂ ಬಿ.ಎ. ಬಸವರಾಜ	ಬ್ಯಾಟರಾಯನಪುರ ಕೃಷ್ಣ ಬೈರೇಗೌಡ	ಯಶವಂತಪುರ ಎಸ್.ಟಿ. ಸೋಮಶೇಖರ್	ರಾಜರಾಜೇಶ್ವರಿನಗರ ಮುನಿರತ್ನ
ದಾಸರಹಳ್ಳಿ ಎಸ್.ಮುನಿರಾಜು	ಮಹಾಲಕ್ಷ್ಮಿ ಲೇಔಟ್ ಕೆ.ಗೋಪಾಲಯ್ಯ	ಮಲ್ಲೇಶ್ವರಂ ಅಶ್ವತ್ಥ ನಾರಾಯಣ	ಹೆಬ್ಬಾಳ್ ಬಿ.ಎಸ್. ಸುರೇಶ್	ಪುಲಕೇಶಿನಗರ ಎ.ಸಿ. ಶ್ರೀನಿವಾಸ	ಸರ್ವಜ್ಞ ನಗರ ಕೆ.ಜೆ.ಜಾರ್ಜ್	ಸಿ.ವಿ.ರಾಮನ್ ನಗರ ಎಸ್.ರಘು
ಶಿವಾಜಿನಗರ ರಿಜ್ವಾನ್ ಅರ್ಷದ್	ಶಾಂತಿನಗರ ಎನ್.ಎ. ಹ್ಯಾರಿಸ್	ಗಾಂಧಿನಗರ ದಿನೇಶ್ ಗುಂಡೂರಾವ್	ರಾಜಾಜಿ ನಗರ ಎಸ್.ಸುರೇಶ್ ಕುಮಾರ್	ಗೋವಿಂದರಾಜನಗರ ಪ್ರಿಯಕೃಷ್ಣ	ವಿಜಯನಗರ ಎಂ.ಕೃಷ್ಣಪ್ಪ	ಚಾಮರಾಜಪೇಟೆ ಜಮೀರ್ ಅಹಮದ್
ಚಿಕ್ಕಪೇಟೆ ಉದಯ್ ಗರುಡಾಚಾರ್	ಬಸವನಗುಡಿ ರವಿ ಸುಬ್ರಹ್ಮಣ್ಯ	ಪದ್ಮನಾಭನಗರ ಆರ್.ಅಶೋಕ್	ಬಿಟಿಎಂ ಲೇಔಟ್ ರಾಮಲಿಂಗಾ ರೆಡ್ಡಿ	ಬೆಂಗಳೂರು ದಕ್ಷಿಣ ಎಂ.ಕೃಷ್ಣಪ್ಪ	ಮಹದೇವಪುರ ಮಂಜುಳಾ ಲಿಂಬಾವಳಿ	ಬೊಮ್ಮನಹಳ್ಳಿ ಸತೀಶ್ ರೆಡ್ಡಿ
ಆನೇಕಲ್ ಶಿವಣ್ಣ	ಹೊಸಕೋಟೆ ಶರತ್ ಬಚ್ಚೇಗೌಡ	ದೇವನಹಳ್ಳಿ ಕೆ.ಹೆಚ್. ಮುನಿಯಪ್ಪ	ದೊಡ್ಡಬಳ್ಳಾಪುರ ಧೀರಜ್ ಮುನಿರಾಜ್	ನೆಲಮಂಗಲ ಶ್ರೀನಿವಾಸಯ್ಯ	ಮಾಗಡಿ ಹೆಚ್.ಸಿ. ಬಾಲಕೃಷ್ಣ	ರಾಮನಗರ ಇಕ್ಬಾಲ್ ಹುಸೇನ್

ಮುಂದುವರೆಯುವುದು

ಕೊಡವ ಹೆರಿಟೇಜ್ ಕಟ್ಟಡಕ್ಕೆ ಕಾಯಕಲ್ಪ ಯಾವಾಗ



ಕೊಡಗು ಜಿಲ್ಲೆಯ ಮಡಿಕೇರಿ ನಗರದ ಹೊರ ವಲಯದ ಕೆ.ಬಾಡಗ ಗ್ರಾಮದ ಬಳಿ ಕೊಡವ ಹೆರಿಟೇಜ್ ಕಟ್ಟಡ ನಿರ್ಮಾಣ ಕಾಮಗಾರಿ ಶೇ.80ರಷ್ಟು ಪೂರ್ಣಗೊಂಡಿದ್ದು, ಕೆಲವು ಕಾಮಗಾರಿಗಳು ಪೂರ್ಣಗೊಳ್ಳುವ ಮೂಲಕ ಯೋಜನೆ ಸಮಾಜಕ್ಕೆ ಅರ್ಪಿತವಾಗಬೇಕಿದೆ. ಮಹತ್ವಾಕಾಂಕ್ಷೆಯ ಸರಕಾರಿ ಕಾಮಗಾರಿಯೊಂದು ಪೂರ್ಣಗೊಳ್ಳಲು ಇಷ್ಟೊಂದು ಸುದೀರ್ಘ ಸಮಯ ಪಡೆದದ್ದು, ಆಡಳಿತ ಯಂತ್ರದ ಕಾರ್ಯ ವೈಖರಿಗೆ ಸಾಕ್ಷಿಯಾಗಿದ್ದು, ವ್ಯವಸ್ಥೆಯನ್ನು ಅಣಕಿಸುತ್ತಿದೆ. ಪ್ರಸ್ತುತ ಚುನಾವಣಾ ಪ್ರಕ್ರಿಯೆ ಹಿನ್ನೆಲೆಯಲ್ಲಿ ತಕ್ಷಣವೇ ಅಂತಿಮ ಹಂತದ ಕಾಮಗಾರಿಗಳು ನಡೆಯುವುದು ಅಸಾಧ್ಯವಾಗಿತ್ತು. ಆದರೆ ಈ ಚುನಾವಣೆ ಮುಗಿದಿದ್ದು, ಯೋಜನೆ ಸಾಕಾರಗೊಳ್ಳುವುದೇ ಎಂಬುದನ್ನು ಕಾದು ನೋಡಬೇಕಾಗಿದೆ. ಕೊಡವ ಸಮುದಾಯ ಶ್ರೀಮಂತ ಸಂಸ್ಕೃತಿ, ಪದ್ದತಿ, ಪರಂಪರೆ, ಆಚಾರ ವಿಚಾರಗಳನ್ನು ದೇಶ ವಿದೇಶಗಳಿಗೂ ಪಸರಿಸಬೇಕು ಎನ್ನುವ ಉದ್ದೇಶದಿಂದ ಕೊಡವ ಹೆರಿಟೇಜ್ ಯೋಜನೆಯನ್ನು ಜಾರಿಗೆ ತರಲಾಗಿದೆ. ಮೂಲತಃ ಕೊಡಗಿನವರೇ ಆಗಿರುವ ಕೇಂದ್ರ ಪ್ರವಾಸೋದ್ಯಮ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ ನಿವೃತ್ತ ಐಎಎಸ್ ಅಧಿಕಾರಿ ರತಿ ವಿನಯ್ ಝಾ ಅವರು ಈ ಯೋಜನೆಯ ರೂವಾರಿಗಳು. ಇವರು ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿದ ಪರಿಣಾಮ 2004ರಲ್ಲಿ ಒಟ್ಟು 88 ಲಕ್ಷ ರೂ.ಗಳ ಅನುದಾನದೊಂದಿಗೆ ಕೇಂದ್ರ ಸರಕಾರ ಕೊಡಗು ಜಿಲ್ಲೆಗೆ ಈ ಯೋಜನೆಯನ್ನು ನೀಡಿದೆ.

ಉದ್ದೇಶಿತ ಕೊಡವ ಹೆರಿಟೇಜ್ ಯೋಜನೆಯನ್ನು ರಾಜ್ಯ ಸರಕಾರ ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಿತ್ತು. ಈ ಎಲ್ಲಾ ಬೆಳವಣಿಗೆಗಳ ನಡುವೆ ಸೂಕ್ತ ಜಾಗದ ಹುಡುಕಾಟಕ್ಕಾಗಿಯೇ ಅನಾವಶ್ಯಕವಾಗಿ 6 ವರ್ಷಗಳು ಕಳೆದಿದೆ. 2004ರಲ್ಲಿ ಯೋಜನೆಗೆ ಅನುಮೋದನೆ ದೊರೆತ ಬಳಿಕ 2010ರಲ್ಲಿ ಮಡಿಕೇರಿ ಹೊರವಲಯದ ಕೆ.ಬಾಡಗ ಗ್ರಾಮದಲ್ಲಿ ಒಟ್ಟು 5 ಎಕರೆ ಪ್ರದೇಶವನ್ನು ಜಿಲ್ಲಾಡಳಿತದಿಂದ ಗುರುತಿಸಲಾಯಿತು.

ರಾಜಕಾರಣಿಗಳ ಸಹಕಾರ ಬೇಕಿದೆ

ಕೊಡವ ಹೆರಿಟೇಜ್ ಕೇಂದ್ರದಂತಹ ಯೋಜನೆಗೆ ಸ್ಥಳೀಯ ರಾಜಕಾರಣಿಗಳ ಸಹಕಾರವಿಲ್ಲದೆ ಕಾಮಗಾರಿ ಮುಂದುವರಿಯಲು ಸಾಧ್ಯವಿಲ್ಲ. ಈ ಯೋಜನೆಯ ರುವಾರಿಯಾದ ಆಗಿನ ಕೇಂದ್ರ ಪ್ರವಾಸೋದ್ಯಮ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿದ್ದು ಈಗ ನಿವೃತ್ತಿ ಹೊಂದಿರುವ ಕೊಡಗಿನವರೇ ಆದ ಶ್ರೀಮತಿ ರತಿ ವಿನಯ್ ಝಾ ಅವರು ಈ ಕೇಂದ್ರದ ಕಾಮಗಾರಿ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತುಕತೆ ಮಾಡಿದರೂ ಕಾಮಗಾರಿ ಮುಂದುವರಿಯದೆ ಇರುವುದು ಬೇಸರ ತರುತ್ತದೆ.

> “ ಕೊಡವ ಹೆರಿಟೇಜ್ ಸೆಂಟರ್ ಕೇಂದ್ರ ಪ್ರವಾಸೋಧ್ಯಮ ಇಲಾಖೆಯ ಮೂಲಕ ಜಾರಿಗೆ ಬಂದ ಯೋಜನೆಯಾಗಿದ್ದು, ಹೆರಿಟೇಜ್ ಸೆಂಟರ್‌ನ 2 ಕಟ್ಟಡದಲ್ಲೂ ಕೊಡವ ಸಮುದಾಯದ ಐನ್‌ಮನೆಯ ವಿನ್ಯಾಸಗಳು ಇರಲಿವೆ. ಆ್ಯಂಪಿ ಥೀಯೇಟರ್, ಗ್ರಂಥಾಲಯ, ಕೊಡವ ಸಮುದಾಯ ಪಾರಂಪರಿಕವಾಗಿ ಬಳಸಿಕೊಂಡು ಬಂದಿರುವ ವಸ್ತುಗಳ ಸಂಗ್ರಹಾಲಯ, ಪುಷ್ಕರಣಿ, ತೆರೆದ ಹೊರಾಂಗಣ, ಅಡುಗೆ ಮನೆ ಸೇರಿದಂತೆ ಒಂದು ಪಾರಂಪರಿಕ ಐನ್‌ಮನೆಯಲ್ಲಿ ಇರಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಒಳಗೊಂಡಿರಲಿದೆ.

ಕಾಮಗಾರಿ ಆರಂಭ

ಕೊಡವ ಹೆರಿಟೇಜ್ ಸೆಂಟರ್‌ನ ಸಾಂಪ್ರದಾಯಿಕ 2 ಐನ್‌ಮನೆ ಮಾದರಿಗಳ ನೀಲಿ ನಕ್ಷೆ ದೆಹಲಿಯಲ್ಲೇ ಸಿದ್ದವಾಗಿದ್ದು, ಅದರಂತೆ ಸಂಪೂರ್ಣ ಯೋಜನೆ ಕೆಂಪು ಕಲ್ಲಿನಿಂದಲೇ ನಿರ್ಮಿಸಬೇಕಿತ್ತು. ಮಾತ್ರವಲ್ಲದೇ 2 ಐನ್‌ಮನೆ ಕಟ್ಟಡಗಳು ಕೊಡವ ಪಾರಂಪರಿಕ ಶೈಲಿಯಲ್ಲಿಯೇ ನಿರ್ಮಾಣವಾಗಬೇಕಿತ್ತು. ಕೇಂದ್ರ ಸರಕಾರ ನೀಡಿದ 88 ಲಕ್ಷ ರೂ. ಅನುದಾನದಲ್ಲಿ ಈ ಯೋಜನೆ ಪೂರ್ಣವಾಗದ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಪ್ರಾರಂಭಿಕವಾಗಿ 2 ಕೋಟಿ 68 ಲಕ್ಷ ರೂ. ವೆಚ್ಚದೊಂದಿಗೆ 2013ರಲ್ಲಿ ಲೋಕೋಪಯೋಗಿ ಇಲಾಖೆ ಮೂಲಕ ಕಾಮಗಾರಿ ಪ್ರಾರಂಭಿಸಿತ್ತು. ಗುತ್ತಿಗೆ ಪಡೆದವರು ಪ್ರಾರಂಭದಲ್ಲಿ ಬಿರುಸಿನ ಕಾಮಗಾರಿ ನಡೆಸಿದರೂ, ದಿನ ಕಳೆದಂತೆ ಯೋಜನೆ ಕುಂಟುತ್ತಾ ಸಾಗಿತ್ತು. ಪರಿಣಾಮ ಕಟ್ಟಡಗಳು ಶಿಥಿಲಾವಸ್ಥೆಗೆ ತಲುಪಿ ಯೋಜನೆ ಮೂಲೆ ಗುಂಪಾಗಿತ್ತು.

ಕಾಮಗಾರಿ ಪರಿಷ್ಕರಣೆ

ಕಾಮಗಾರಿ ವಿಳಂಬ, ಕಟ್ಟಡ ಕಾಮಗಾರಿಗಳ ಬೆಲೆ ಏರಿಕೆ ಮತ್ತಿತ್ತರ ಕಾರಣಗಳಿಂದ ಯೋಜನೆಯ ಮೊತ್ತವನ್ನು ಮತ್ತೊಮ್ಮೆ ಪರಿಷ್ಕರಿಸಿ 2018ರಲ್ಲಿ ಒಟ್ಟು 3.30 ಕೋಟಿಗೆ ಏರಿಕೆ ಮಾಡಿ ಅನುಮೋದನೆ ನೀಡಲಾಗಿತ್ತು. ಈ ನಡುವೆ ಮೊದಲು ಕಾಮಗಾರಿ ನಡೆಸಿದ್ದ ಗುತ್ತಿಗೆದಾರರು ಸಮರ್ಪಕವಾಗಿ ಕಾಮಗಾರಿ ನಡೆಸದ ಕಾರಣ ಅವರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿತ್ತು. 2018ರಿಂದ 2020ರವರೆಗೆ ಜಿಲ್ಲೆಯಲ್ಲಿ ಸುರಿದ ಭಾರೀ ಮಳೆಯಿಂದ ನಿರಂತರವಾಗಿ ಪ್ರಾಕೃತಿಕ ವಿಕೋಪಗಳು ಘಟಿಸಿದ ಪರಿಣಾಮ ಹೆರಿಟೇಜ್ ಸೆಂಟರ್ ಯೋಜನೆ ಮತ್ತೊಮ್ಮೆ ಹಳ್ಳ ಹಿಡಿಯಿತು. ಆ ಹೊತ್ತಿಗೆ ಕಟ್ಟಡಗಳ ಸ್ಥಿತಿ ಮತ್ತಷ್ಟು ಶೋಚನೀಯವಾಗಿತ್ತಲ್ಲದೇ, ಸ್ಥಳದಲ್ಲಿ ಕಟ್ಟಡ ಸಾಮಾಗ್ರಿಗಳು ಕಂಡವರ ಪಾಲಾದವು. ಶಿಥಿಲವಾದ ಗೋಡೆಗಳು ಕುಸಿದು ಬಿದ್ದಿದ್ದರೆ, ಮರಮುಟ್ಟುಗಳು ಗೆದ್ದಲು ಪಾಲಾಗಿದ್ದವು. ತದನಂತರ ಕಾಮಗಾರಿ ಪ್ರಾರಂಭಿಸಲು ಕೋವಿಡ್ ಕೂಡ ಅಡ್ಡಿ ಮಾಡಿತ್ತು. ಸರಿ ಸುಮಾರು 4 ವರ್ಷಗಳ ಕಾಲ ಮತ್ತೆ ಯೋಜನೆ ಸ್ಥಗಿತವಾಗುವಂತಾಯಿತು.

ಶೇ.80ರಷ್ಟು ಪೂರ್ಣ

ಈ ಮೊದಲು ಐನ್‌ಮನೆಗಳ ಮೇಲ್ಛಾವಣಿಗೆ ಮರವನ್ನು ಬಳಸಲಾಗಿದ್ದ ಹಿನ್ನೆಲೆಯಲ್ಲಿ ಮೇಲ್ಛಾವಣಿ ಕುಸಿತ ಕಂಡಿತ್ತಲ್ಲದೇ, ಜಿಲ್ಲೆಯ ಹವಾಮಾನ ಆಧಾರಿಸಿ ಕಾಮಗಾರಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಯಿತು. ಅದರಂತೆ ದೀರ್ಘ ಬಾಳಿಕೆಗಾಗಿ, ಮರದ ಮೇಲ್ಛಾವಣಿ ಬದಲಿಸಿ ಸ್ಟೀಲ್ ಬಳಸಲು ಅನುಮತಿಸಲಾಯಿತು. ಅದರಂತೆ ಮಡಿಕೇರಿಯ ಗುತ್ತಿಗೆದಾರರು 1.50 ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ತಡೆಗೋಡೆ, ಮೇಲ್ಛಾವಣಿ, ನೆಲಹಾಸು, ಮತ್ತಿತ್ತರ ಕಾಮಗಾರಿ ಕೈಗೊಂಡಿದ್ದು, ಶೇ.80ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಿದ್ದಾರೆ. ಕೊಡವ ಹೆರಿಟೇಜ್ ಸೆಂಟರ್ ಕಾಮಗಾರಿಯಲ್ಲಿ 2 ಐನ್‌ಮನೆಗಳ ಮೇಲ್ಛಾವಣಿ ಕೆಲಸ, ಪ್ರವೇಶ ದ್ವಾರ, ಅಡುಗೆ ಕೋಠಡಿ, ಮೆಟ್ಟಿಲುಗಳು, ಆಂಪಿಕ್ ಥಿಯೇಟರ್, ಗ್ರಂಥಾಲಯ, ವಿದ್ಯುದ್ದೀಕರಣ, ಕಿಟಕಿ ಬಾಗಿಲುಗಳ ಜೋಡಣೆ ಕೆಲಸ ಪೂರ್ಣಗೊಂಡಿದೆ. ಹೊಸದಾಗಿ 25 ಕೆ.ವಿ.ಟ್ರಾನ್ಸ್ ಫಾರ್ಮರ್ ಅಳವಡಿಕೆ ಪೂರ್ಣವಾಗಿದೆ. ಈ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ರಾಜ್ಯ ಸರಕಾರ ಒಟ್ಟು 282.50 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದು, ಸದರಿ ಕಾಮಗಾರಿಗೆ 47.95 ಲಕ್ಷ ರೂ.ಗಳ ಅನುದಾನ ಬಿಡುಗಡೆ ಮಾಡಬೇಕಿದೆ.

ತಲೆ ಎತ್ತಿದ ಕಟ್ಟಡಗಳು

ಇನ್ನು ಕೊಡವ ಹೆರಿಟೇಜ್ ಕಟ್ಟಡ ಕಾಮಗಾರಿ ಆರಂಭವಾದ ಬಳಿಕ ಅದರ ಸುತ್ತ ಜಿಲ್ಲಾ ಪಂಚಾಯಿತಿ ಭವನ, ಜಿಲ್ಲಾ ನ್ಯಾಯಾಲಯ ಕಟ್ಟಡ, ಕೇಂದ್ರೀಯ ವಿದ್ಯಾಲಯ ಕಟ್ಟಡಗಳು ತಲೆ ಎತ್ತಿದೆ. ಈಗಾಗಲೇ ಜಿಲ್ಲಾ ಪಂಚಾಯಿತಿ ಕಟ್ಟಡ ಮತ್ತು ಕೇಂದ್ರೀಯ ವಿದ್ಯಾಲಯ, ಜಿಲ್ಲಾ ನ್ಯಾಯಾಲಯ ಸಂಕೀರ್ಣ ಪೂರ್ಣಗೊಂಡು ಕಾರ್ಯಾರಂಭ ಮಾಡಿವೆ. ಈ 3 ಸರಕಾರಿ ಸ್ವಾಮ್ಯದ ಕಟ್ಟಡಗಳು ಕೂಡ ಬಹು ಕೋಟಿ ರೂ.ಗಳ ವೆಚ್ಚದ್ದಾಗಿದೆ. ಅಚ್ಚರಿಯ ವಿಚಾರವೆಂದರೆ ಈ ಕಟ್ಟಡಗಳ ನಿರ್ಮಾಣ ಕಾಮಗಾರಿ ಬೆರಳೆಣಿಕೆಯ ವರ್ಷದಲ್ಲೇ ಪೂರ್ಣಗೊಂಡಿವೆ.

ಅಂದಾಜು ಪಟ್ಟಿಗೆ ಸೂಚನೆ

ಕಾಮಗಾರಿ ಪೂರ್ಣಗೊಳಿಸಲು ಕೂಡಲೇ ವಿಸ್ತೃತ ಅಂದಾಜು ಪಟ್ಟಿ ಸಲ್ಲಿಸಬೇಕು ಎಂದು ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ಅವರು ಕೊಡಗು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಅವರಿಗೆ ಸೂಚಿಸಿದ್ದಾರೆ. ಈ ಹಿಂದೆ ವಿಡಿಯೊ ಸಂವಾದದ ಮೂಲಕ ಕೊಡವ ಹೆರಿಟೇಜ್ ಕಟ್ಟಡ ನಿರ್ಮಾಣ ಕಾಮಗಾರಿ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರಿಂದ ಮಾಹಿತಿ ಪಡೆದಿರುವ ಡಾ. ಎನ್.ವಿ. ಪ್ರಸಾದ್, ಕೊಡವ ಹೆರಿಟೇಜ್ ಕಟ್ಟಡ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು. ಆ ನಿಟ್ಟಿನಲ್ಲಿ ಅಂದಾಜು ಪಟ್ಟಿ ಸಲ್ಲಿಸಬೇಕು. ಜಿಲ್ಲೆಯ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರ ಜೊತೆ ಮಾತನಾಡಿ ಹಣಕಾಸು ಇಲಾಖೆಯಿಂದ ಹಣ ಬಿಡುಗಡೆಗೆ ಕ್ರಮ ವಹಿಸಲಾಗುವುದು ಎಂದು ಹೇಳಿದ್ದಾರೆ. ಈಗಾಗಲೇ ಶೇ.75ರಿಂದ 80ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಆ ನಿಟ್ಟಿನಲ್ಲಿ ಬಾಕಿ ಇರುವ ಕಾಮಗಾರಿ ಕೈಗೊಳ್ಳಲು ಮುಂದಾಗಬೇಕು ಎಂದು ಪ್ರಸಾದ್ ಅವರು ತಿಳಿಸಿದ್ದಾರೆ.

ಅಂತಿಮ ಕಾಮಗಾರಿ

ಕೊಡವ ಹೆರಿಟೇಜ್ ಕಟ್ಟಡದ ನಿರ್ಮಾಣ ಕಾಮಗಾರಿಯಲ್ಲಿ ಪ್ರಮುಖವಾಗಿ ಲ್ಯಾಟರೈಟ್ ಗೋಡೆಗಳಿಗೆ ಪಾಲಿಷಿಂಗ್ ಆಗಬೇಕಿದ್ದು, ಕಟ್ಟಡದ ಮುಂಭಾಗ ಗೇಟ್ ಮತ್ತು ಸುತ್ತುಗೋಡೆ ನಿರ್ಮಿಸಬೇಕಿದೆ. ಮೆಟ್ಟಿಲುಗಳಿಗೆ ರೇಲಿಂಗ್ಸ್ ಮತ್ತು ಫ್ಲೋರಿಂಗ್ ಮಾಡಬೇಕಿದೆ. ರಂಗಮಂದಿರಕ್ಕೆ ಮೇಲ್ಛಾವಣಿ ಅಳವಡಿಕೆ ಹಾಗೂ ಇತರ ಕೆಲಸಗಳು ಬಾಕಿ ಇದೆ ಎಂದು ಜಿಲ್ಲಾಧಿಕಾರಿ ಡಾ.ಸತೀಶ್ ಉಳಿಕೆ ಅಂತಿಮ ಕಾಮಗಾರಿಗಳ ವಿವರ ನೀಡಿದ್ದಾರೆ. ಐನ್‌ಮನೆ, ಬಯಲು ರಂಗಮಂದಿರ, ವಾಟರ್ ಟ್ಯಾಂಕ್, ತಡೆಗೋಡೆ ಮತ್ತು ಸಂಪರ್ಕ ಮೆಟ್ಟಿಲುಗಳು, ವಿದ್ಯುತ್ ಸಂಪರ್ಕ ಮತ್ತಿತರ ಕಾಮಗಾರಿಗಳು ಪೂರ್ಣಗೊಂಡಿದೆ. ಈಗಾಗಲೇ 282.50 ಲಕ್ಷ ರೂ. ಬಿಡುಗಡೆಯಾಗಿದ್ದು, 47.95 ಲಕ್ಷ ರೂ. ಬಿಡುಗಡೆಗೆ ಬಾಕಿ ಇದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮಾಹಿತಿ ನೀಡಿದ್ದಾರೆ.

ಕಾಮಗಾರಿ ಪೂರ್ಣಗೊಳಿಸಿ


ನಿವೃತ್ತ ಐಎಎಸ್ ಅಧಿಕಾರಿ ರತಿ ವಿನಯ್ ಜಾ ಅವರು, ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಕೊಡವ ಪಾರಂಪರಿಕ ಕೇಂದ್ರ ನಿರ್ಮಾಣಕ್ಕೆ ಸಾಕಷ್ಟು ಶ್ರಮಿಸಲಾಗಿದೆ. ಆ ನಿಟ್ಟಿನಲ್ಲಿ ಕಾಮಗಾರಿ ಪೂರ್ಣಗೊಳಿಸಲು ಮುಂದಾಗಬೇಕು ಎಂದು ಕೊಡಗು ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ ಅವರನ್ನು ಕೋರಿದ್ದಾರೆ. ಕೊಡವ ಹೆರಿಟೇಜ್ ಕೇಂದ್ರ ಮುಂದಿನ ಪೀಳಿಗೆಗೆ ಕೊಡವ ಸಂಸ್ಕೃತಿ ಪರಿಚಯಿಸುವಲ್ಲಿ ಸಹಕಾರಿಯಾಗಲಿದೆ. ಕೊಡವ ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸುವ ನಿಟ್ಟಿನಲ್ಲಿ ಕೊಡವ ಹೆರಿಟೇಜ್ ಸೆಂಟರ್ ನಿರ್ಮಾಣ ಮಾಡಲಾಗುತ್ತಿದೆ. ಆ ನಿಟ್ಟಿನಲ್ಲಿ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಸಲಹಾ ಸಮಿತಿ ಶಿಫಾರಸು

ಕೊಡವ ಹೆರಿಟೇಜ್ ಸೆಂಟರ್ ಅನ್ನು ಕೊಡವ ಸಂಸ್ಕೃತಿಯ ಪಾರಂಪರಿಕ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸಲಹಾ ಸಮಿತಿಯ ಅಗತ್ಯವಿದೆ. ಈ ಕುರಿತು ಕಾರ್ಯಕಾರಿ ಸಮಿತಿಯನ್ನು ನೇಮಿಸುವ ಸಂಬಂಧ ಜಿಲ್ಲಾಡಳಿತದಿಂದ ರಾಜ್ಯ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಸಮಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿ, ಜಿಲ್ಲೆಯ ಜನಪ್ರತಿನಿಧಿಗಳು ಅದರ ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ.



ವಾರಭವಿಷ್ಯ



14.05.2023 ರಿಂದ 20.05.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ಚಂದ್ರ-ಕುಂಭ, ಮೀನ, ಮೇಷ, ವೃಷಭ, ಕುಜ-ಕಟಕ, ಬುಧ-ಮೇಷ, ಗುರು-ಮೇಷ, ಶುಕ್ರ-ಮಿಥುನ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.



ವಿ.ಕೇಶವಮೂರ್ತಿ

ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಈ ವಾರ ಚಂದ್ರ ಗ್ರಹದ ಶುಭ ಸಂಚಾರ ನಿಮ್ಮ ಬೆಂಬಲಕ್ಕೆ ಇದೆ. ಹೋಟೆಲ್, ಟ್ರಾವೆಲ್ ಏಜೆನ್ಸಿ, ಕೇಟರಿಂಗ್ ವ್ಯವಹಾರಿಗಳಿಗೆ ಕೈ ತುಂಬ ಕೆಲಸ ಹಾಗೂ ಸಂಪಾದನೆ ಆಗಲಿದೆ. ವಿದ್ಯಾರ್ಥಿಗಳು ತಮ್ಮ ಬುದ್ಧಿವಂತಿಕೆಯಿಂದ ಯಶಸ್ಸನ್ನು ಪಡೆಯುವರು. ವಾಸದ ಮನೆ ರಿಪೇರಿ, ಪೇಂಟಿಂಗ್‌ಗೆ ಹಣ ವ್ಯಯವಾಗುವುದು. ಕಾರ್ಮಿಕ ವರ್ಗದವರಿಗೆ ಸರ್ಕಾರದ ಸಹಾಯ ದೊರಕುವುದು. ಶಿರೋವೇದನೆ ಕಾಡುವುದು.
ಶ್ರೀ ವಿಘ್ನೇಶ್ವರನ ಆರಾಧನೆ ಶುಭ ಸಂಖ್ಯೆ-5.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ದೀರ್ಘಕಾಲೀನ ಯೋಜನೆಗಳನ್ನು ರೂಪಿಸಿಕೊಳ್ಳಲು ಇದು ಸುಸಮಯವಾಗಿದೆ. ಮ್ಯೂಚ್ಯುಯಲ್ ಫಂಡ್‌ಗಳಂತಹ ವ್ಯವಹಾರಗಳಲ್ಲಿ ಲಾಭವನ್ನು ನಿರೀಕ್ಷಿಸಬಹುದು. ದ್ವಿದಳ ಧಾನ್ಯ ವ್ಯಾಪಾರಿಗಳಿಗೆ ವ್ಯಾಪಾರ ಜೋರು. ವಿವಾಹಾಕಾಂಕ್ಷಿಗಳಿಗೆ ಸೂಕ್ತ ವಧು-ವರ ದೊರೆಯುವ ಸಾಧ್ಯತೆ ಇದೆ. ಉತ್ತಮರ ಸಂಗದಲ್ಲಿದ್ದರೆ ಮನೋಲ್ಲಾಸ ಉಂಟಾಗುವುದು. ವಾರಾಂತ್ಯಕ್ಕೆ ಮನರಂಜನೆಗೆ ಹಣ ವ್ಯಯ.
ಶ್ರೀ ಶಕ್ತಿದೇವತಾ ಉಪಾಸನೆ. ಶುಭ ಸಂಖ್ಯೆ-6.



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ನೂತನ ಯೋಜನೆಗಳಿಗೆ ಪ್ರೇರಣೆ ಆಗುತ್ತದೆ. ಗುರು ಅನುಗ್ರಹದ ಜೊತೆಗೆ ನಿಮ್ಮ ಹಿತೈಷಿಗಳ ಸಹಕಾರವೂ ದೊರೆಯಲಿದೆ. ಈ ವಾರವೆಲ್ಲಾ ಆದಾಯ ಮತ್ತು ಖರ್ಚುಗಳು ಸಮತೋಲನವಾಗಿ ಸಾಗುತ್ತದೆ. ಬ್ಯಾಂಕ್ ವ್ಯವಹಾರದಲ್ಲಿ ಸಫಲತೆಯನ್ನು ಹೊಂದುವಿರಿ. ಅಹಿತಕರ ಪರಿಸ್ಥಿತಿಯಲ್ಲಿಯೂ ಸಫಲತೆಯನ್ನು ಹೊಂದುವಿರಿ. ಮನೆಯಲ್ಲಿ ದೇವತಾಕಾರ್ಯಗಳು ನಡೆದು ಧನ್ಯತಾಭಾವದಿಂದ ಹೃದಯ ಹಗುರವಾಗುವುದು. ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4.



ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)
ವಾರದಾರಂಭಕ್ಕೆ ಶುಭ ಸಮಾಚಾರ ಹೊತ್ತ ಸಂದೇಶ ಒಂದು ಬರಬಹುದು. ಚಂದ್ರನ ನಡೆ ಶುಭವಿದ್ದು, ಪ್ರೇಮ ಪ್ರಸಂಗಗಳು ವಿವಾಹದಲ್ಲಿ ಪರಿವರ್ತನೆ ಆಗುವ ಸಾಧ್ಯತೆ. ನಿಮ್ಮ ವೈಯಕ್ತಿಕ ವಿಚಾರಗಳಲ್ಲಿ ಅನ್ಯ ವ್ಯಕ್ತಿಗಳು ತಲೆ ಹಾಕದಂತೆ ನಿಗಾ ವಹಿಸಿ. ಲೆಕ್ಕ ಪತ್ರ ವಿಚಾರಗಳಲ್ಲಿ ಇತರರನ್ನು ನೆಚ್ಚಿಕೊಂಡರೆ ನಷ್ಟವನ್ನು ಅನುಭವಿಸಬೇಕಾದೀತು. ನಿಮ್ಮ ಉದ್ಯೋಗ ನಿಮಿತ್ತ ಪ್ರಯಾಣಗಳು ಎದುರಾಗುವುವು.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-8.



ಸಿಂಹ (ಮ.ಮಿ.ಮು.ಮೆ.ಮೊ.ಟ.ಟಿ.ಟು.ಟೆ)
ಸಪ್ತಾಹದ ಆದಿಗೆ ವಸ್ತ್ರಾಭರಣ, ಸುಖ ಪ್ರಾಪ್ತಿ, ಸ್ತ್ರೀಯಿಂದ ಆನಂದ ಪ್ರಾಪ್ತಿ ಹಾಗೂ ನಿಮ್ಮ ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ಅವರಿಂದ ಬೆಂಬಲ. ಗುರು ಕೃಪೆಯಿಂದ ಭಾಗ್ಯದಲ್ಲಿ ಸಿರಿತನ. ಇಷ್ಟಪಟ್ಟ ದುಬಾರಿ ವಸ್ತು ಪಡೆಯುವಿರಿ. ನಿಮ್ಮ ರಾಶಿಯ ಮೇಲೆ ಶನಿ ದೃಷ್ಟಿ ಇದ್ದು ಶತ್ರುಗಳ ಕಾರಸ್ಥಾನ ಹಾಗೂ ಉಪದ್ರವಗಳು ಉಂಟಾಗುವುದು. ನಿರೀಕ್ಷಿತ ಹಣ ಕೈ ಸೇರುವಲ್ಲಿ ವಿಳಂಬವಾಗುವುದು. ಸಂಧಿವಾತ ಕಾಡುವುದು.
ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-3.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ಸದ್ಯದ ಪರಿಸ್ಥಿತಿಯಲ್ಲಿ ನಿಮ್ಮ ಯೋಜನೆಗಳು ಸಫಲವಾಗಬೇಕೆಂದರೆ ಚತುರತೆಯ ಅಗತ್ಯವಿದೆ. ಗುರು ಅಷ್ಟಮಕ್ಕೆ ಪಲ್ಲಟವಾಗಿದ್ದು, ನಿಮ್ಮ ಸಹನೆಯ ಪರೀಕ್ಷೆಗೂ ತಯಾರಾಗಿರಿ. ಹಣ ಸಂಪಾದನೆಯಾದರೂ ಖರ್ಚಿನ ಮೇಲೆ ಖರ್ಚುಗಳು ಬರುವುದು. ಕಂಟ್ರಾಕ್ಟರುಗಳಿಗೆ ಉತ್ತಮ ಯೋಜನೆಗಳು ದೊರೆಯುವುದು. ಫ್ಯಾಬ್ರಿಕೇಷನ್ ಉದ್ಯಮ ನಡೆಸುವವರಿಗೆ ದೊಡ್ಡ ಮೊತ್ತದ ಆರ್ಡರ್ ದೊರೆಯಲಿದೆ.
ಶ್ರೀ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ-1



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಗುರು ಕೃಪೆಗೆ ಪಾತ್ರರಾಗಿರುವ ನಿಮಗೆ 'ಬಹು ನಿರೀಕ್ಷೆಯ ಫಲ ಮಧುರವೇ' ಆಗಿರುತ್ತದೆ. ಅರಸಿ ಬಂದದ್ದನ್ನು ತಿರಸ್ಕರಿಸಿದರೆ ಪಶ್ಚಾತ್ತಾಪ ಪಡಬೇಕಾದೀತು. ಜೊತೆಗೆ ಎಲ್ಲಾ ತೀರ್ಮಾನಗಳನ್ನು ಸಾವಧಾನವಾಗಿ ನಿರ್ಧರಿಸಿ ಹೊಸ ವ್ಯಾಪಾರ ಅನುಷ್ಠಾನ ಮಾಡಲು ಸಮಯ ಶುಭವಿದೆ. ಪರೋಪಕಾರದಿಂದ ಜನಾದರಕ್ಕೆ ಪಾತ್ರರಾಗುವಿರಿ. ಆರೋಗ್ಯ ಬಗ್ಗೆ ಕಾಳಜಿ ಇರಲಿ. ವಿಷಾಹಾರ ಸೇವನೆಯಿಂದ ತೊಂದರೆ.
ಶ್ರೀ ಸುಬ್ರಹ್ಮಣ್ಯ ದರ್ಶನ. ಶುಭ ಸಂಖ್ಯೆ-3.



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)
ಈ ವಾರದಲ್ಲಿ 'ಬಿತ್ತಿದ್ದನ್ನು ಬೆಳೆದುಕೊ' ಎಂಬ ನಾಣ್ಣುಡಿಯಂತೆ ಸಾಗುವುದು. ಜೀವನದಲ್ಲಿ ಸವಾಲುಗಳು ಎದುರಾದರೆ ಮುಕ್ತ ಮನಸ್ಸಿನಿಂದ ಎದುರಿಸಿ. ಆಸ್ತಿ ಖರೀದಿಸುವ ಹವಣಿಕೆಯಲ್ಲಿದ್ದರೆ ಧೈರ್ಯವಾಗಿ ಮುಂದುವರೆಯಿರಿ. ಕೃಷಿ ಕಾರ್ಯಕ್ಕೆ ಉತ್ತಮ ಫಸಲು ದೊರೆಯಲಿದೆ. ರಕ್ತ ಸಂಬಂಧಿಕರಲ್ಲಿ ಮನಸ್ತಾಪಗಳು ಉಂಟಾಗಲಿದೆ. ಅಗ್ನಿ, ವಿದ್ಯುತ್ ಅಪಘಾತಗಳಿಂದ ಜಾಗೃತರಾಗಿರಿ. ವಾರದ ಕಡೆಗೆ ಮನೆದೇವರ ಸನ್ನಿಧಿಗೆ ತೆರಳಿ.
ಶ್ರೀ ಸುಬ್ರಹ್ಮಣ್ಯ ಆರಾಧನೆ. ಶುಭ ಸಂಖ್ಯೆ-9.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಗುರು ನಿಮ್ಮ ರಾಶ್ಯಾಧಿಪತಿ, ಶುಭ ಸ್ಥಾನಕ್ಕೆ ಬಂದಿದ್ದಾರೆ. 'ಸೂತ್ರ ಚೆನ್ನಾಗಿದ್ದರೆ ಎಲ್ಲವೂ ಸುಸೂತ್ರ' ಎಂದು ಈ ವಾರ ಸಾಗುವುದು. ನಿಮ್ಮ ನಿಪುಣತೆಯಿಂದಲೂ ಬುದ್ಧಿಮತ್ತೆಯಿಂದಲೂ ಕಾರ್ಯ ಸಾಧನೆ ಆಗುವುದು. ಧನ, ಧಾನ್ಯ, ಲಾಭ, ಸುಖ ಭೋಜನ, ಮನೆಯಲ್ಲಿ ನೆಮ್ಮದಿಯ ವಾತಾವರಣ. ಆಸ್ತಿ-ಪಾಸ್ತಿ ಹೊಂದುವ ಯೋಗವಿದೆ. ಪ್ರಯತ್ನಿಸಿ ದಾನ-ಧರ್ಮ ಮಾಡುವುದರಿಂದ ಧನ್ಯತಾಭಾವ.
ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-7.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ಬೃಹಸ್ಪತಿ ಹಾಗೂ ಶನಿದೇವರ ಕೃಪಾಭಾವ ನಡೆದಿದೆ. ವಿಧಿಯಂತೆ ನಿರ್ವಹಿಸಿ, ಭಗವಂತನನ್ನು ನಮಿಸಿ, ಆದಾಯ ಹೆಚ್ಚಾದಂತೆ ಖರ್ಚುಗಳೂ ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಪಿತ್ರಾರ್ಜಿತ ಆಸ್ತಿಗೆ ಸಂಬಂಧಿಸಿದ ವಿಚಾರಗಳು ಇತ್ಯರ್ಥವಾಗಲು ವಿಳಂಬವಾಗುವುದು. ವಾರ ಮಧ್ಯಾನಂತರ ಭವಿಷ್ಯದ ಕೆಲಸಗಳಿಗೆ ಪೂರ್ವಭಾವಿ ಸಿದ್ಧತೆ ಮಾಡಿಕೊಳ್ಳಲು ಅಡ್ಡಿಯಿಲ್ಲ. ವಿದ್ಯಾರ್ಥಿಗಳು ಆಲಸಿಗರಾಗುವರು.
ಎಳ್ಳೆಣ್ಣೆ ದೀಪ ಹಚ್ಚಿ. ಶುಭ ಸಂಖ್ಯೆ-8.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರನಿಂದ ನಿಮ್ಮ ನಿರಂತರ ಪರಿಶ್ರಮಕ್ಕೆ ಪ್ರತಿಫಲ ದೊರೆಯುವುದು. ಪಶು ಪಾಲನೆ ಹಾಗೂ ಕೃಷಿಯಿಂದ ಉತ್ತಮ ಆದಾಯವಿದೆ. ಮಿತ್ರ ಜನರ ಜೊತೆ ಬೆರೆಯುವುದರಿಂದ ಮನಸ್ಸು ಪ್ರಫುಲ್ಲವಾಗಿರುತ್ತದೆ. ನಿಮ್ಮ ಜನ್ಮ ರಾಶಿಯಲ್ಲೇ ಶನಿದೇವ ಇರುವುದರಿಂದ ತೀರ್ಮಾನಗಳನ್ನು ಸಾವಧಾನವಾಗಿ ನಿರ್ಧರಿಸಿ. ಮನೆಯಲ್ಲಿ ಹಿರಿಯರೊಬ್ಬರ ಆರೋಗ್ಯದಲ್ಲಿ ವ್ಯತ್ಯಯ ಉಂಟಾದೀತು.
ಶ್ರೀ ಶನಿಮಹಾತ್ಮೆ ಕಥೆ ಓದಿ. ಶುಭ ಸಂಖ್ಯೆ-2.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಈ ವಾರ ಭಗವಂತನ ಅನುಗ್ರಹ ನಿಮ್ಮ ಕೈ ಹಿಡಿಯಲಿದೆ. ಕೆಲವು ಪ್ರತಿಕೂಲ ಪ್ರಸಂಗಗಳನ್ನು ಸಾಹಸದಿಂದ ಎದುರಿಸುವಿರಿ. ಮಾನಸಿಕವಾಗಿ, ಶಾರೀರಿಕವಾಗಿ ಜರ್ಝರಿತಕ್ಕೆ ಒಳಗಾಗಿದ್ದ ನಿಮಗೆ ಶುಭ ಪ್ರಸಂಗಗಳು ಧೈರ್ಯ ತುಂಬಲಿದೆ. ವ್ಯಾಪಾರ, ವಹಿವಾಟುಗಳು ನಿಮ್ಮ ನಿರೀಕ್ಷೆಗೂ ಮೀರಿ ನಡೆಯುವುದು. ಕೈ ಹಿಡಿದು ಖರ್ಚು ಮಾಡಿ, ಅದೇ ನಿಮಗೆ ಉಳಿತಾಯವಾಗುವುದು. ದುಡುಕಿನ ವಾಹನ ಚಾಲನೆಯಿಂದ ಅನರ್ಥಗಳು ಉಂಟಾಗುವುದು.
ಶ್ರೀ ಶನಿಸ್ತೋತ್ರ ಜಪಿಸಿ. ಶುಭ ಸಂಖ್ಯೆ-5.

ಆಧುನಿಕತೆಗೆ ತತ್ತರಿಸುತ್ತಿರುವ ಕೊಡಗಿನ ಸಂಸ್ಕೃತಿ ಉಳಿಸಲು ಮ್ಯೂಸಿಯಂ ಅಗತ್ಯ

■ ಎಂ.ಟಿ.ಯೋಗೇಶ್‌ಕುಮಾರ್

ಆಧುನಿಕ, ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಹೊಡೆತಕ್ಕೆ ಕೊಡಗು ಸೇರಿದಂತೆ ನಮ್ಮ ನೆಲಮೂಲದ ಸಂಸ್ಕೃತಿಗಳು ನಶಿಸುತ್ತಿದ್ದು, ಕೊಡಗಿನಲ್ಲಿ ಮ್ಯೂಸಿಯಂ ಸ್ಥಾಪನೆ ಮೂಲಕ ಮುಂದಿನ ಪೀಳಿಗೆಗೆ ಮಾಹಿತಿ ರವಾನಿಸುವ ಸಾರ್ಥಕ ಪ್ರಯತ್ನ ನಡೆಯುತ್ತಿರುವುದು ಶ್ಲಾಘನೀಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಿಭಾಗದ ಮುಖ್ಯಸ್ಥ ಡಾ.ಎಂ. ನಂಜಯ್ಯ ಹೊಂಗನೂರು ಅಭಿಪ್ರಾಯಪಟ್ಟಿದ್ದಾರೆ.

ಇತ್ತೀಚಿನ ದಿನಗಳಲ್ಲಿ ನಮ್ಮ ನೆಲ ಮೂಲದ ಎಲ್ಲಾ ಸಂಸ್ಕೃತಿಗಳು ನಶಿಸುತ್ತಿವೆ. ಆಧುನಿಕತೆಯ ಆಡಂಬರದ ಹೊಡೆತದಿಂದ ಸಂಸ್ಕೃತಿಗಳಿಗೆ ಧಕ್ಕೆಯಾಗುತ್ತಿದೆ. ಇವುಗಳನ್ನು ಸಂರಕ್ಷಿಸಿ, ಮುಂದಿನ ತಲೆಮಾರಿಗೆ ಕೊಂಡೊಯ್ಯಬೇಕಾದ ಜವಾಬ್ದಾರಿ ಎಲ್ಲರ ಮೇಲಿದೆ. ಕರ್ನಾಟಕದಲ್ಲಿ ಕೊಡಗು ವಿಶಿಷ್ಟವಾದ ಸಂಸ್ಕೃತಿ ಹಾಗೂ ಪರಿಸರವನ್ನು ಹೊಂದಿದೆ. ಇಂತಹ ನಾಡಲ್ಲಿ ಕೊಡಗಿನ ಆಚಾರ-ವಿಚಾರ, ಸಂಸ್ಕೃತಿ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಮ್ಯೂಸಿಯಂ ಸ್ಥಾಪನೆ ಮಾಡಲು ಮುಂದಾಗಿರುವುದು ಸಾರ್ಥಕದ ಕೆಲಸ. ಈ ವಸ್ತು ಸಂಗ್ರಹಾಲಯವು ಕೊಡವ ಸಮಾಜ, ಸಂಸ್ಕೃತಿಯೊಂದಿಗೆ ಒಟ್ಟಾರೆ ಕೊಡಗಿನ ಪರಂಪರೆ ಉಳಿಸಿ, ಇತಿಹಾಸ ಕಟ್ಟಿಕೊಡುವ ಪ್ರಯತ್ನ ಮಾಡಲಿದೆ. ಭೌತಿಕ ಹಾಗೂ ಭೌತಿಕವಲ್ಲದ(ವರ್ಚುವಲ್) ವಸ್ತುಸಂಗ್ರಹಾಲಯಗಳು ಚಾರಿತ್ರಿಕವಾದ ಕೆಲಸ ಮಾಡುತ್ತವೆ ಎಂದರು.

ಇಂದು ಅನೇಕ ಪ್ರಭಾವದಿಂದ ನಮ್ಮಲಿನ ಎಲ್ಲಾ ಸಂಸ್ಕೃತಿಗಳು ಅವನತಿ ಹೊಂದುತ್ತಿವೆ. ಆಧುನಿಕ ವಿದ್ಯಾಮಾನ, ಆಧುನಿಕ ಒತ್ತಡದಿಂದ ಅನೇಕ ಸಂಸ್ಕೃತಿಗಳು ಕಣ್ಮರೆಯಾಗುತ್ತಿವೆ. ಕೊಡಗಿನ ಸಂಸ್ಕೃತಿಯೂ ವಿಶಿಷ್ಟವಾಗಿದ್ದು, ಅದನ್ನು ಉಳಿಸಲೇಬೇಕಾಗಿದೆ. ಕೊಡಗಿನ ಜನರ ವಿವಾಹ, ಆಚರಣೆ, ಹಬ್ಬ-ಹರಿದಿನ, ಶವಸಂಸ್ಕಾರ ಪದ್ಧತಿ, ವ್ಯವಸಾಯ, ಗುಡ್ಡಗಾಡುಗಳಲ್ಲಿ ತೋಟಗಾರಿಕೆ, ಪಾರಂಪರಿಕ ಕುಶಲಕಲೆಗಳು ನಶಿಸುತ್ತಿವೆ. ಆ ಎಲ್ಲವನ್ನು ಕಟ್ಟಿಕೊಡುವ ಕೆಲಸವನ್ನು ಮ್ಯೂಸಿಯಂ ಮೂಲಕ ಮಾಡುವುದು ಸಾರ್ಥಕವಾದ ಕೆಲಸ. ಕೊಡಗಿನ ಸಂಸ್ಕೃತಿಯನ್ನು ವಸ್ತುಗಳ ಮೂಲಕ ಮುಂದಿನ ತಲೆಮಾರಿಗೆ ಉಳಿಸುವ ಕೆಲಸ ತುರ್ತಾಗಿ ಆಗಬೇಕು ಎಂದು ಮನವಿ ಮಾಡಿದರು.

ಮ್ಯೂಸಿಯಂಗಳನ್ನು(ಮೆಟಿರಿಯಲ್ ಕಲ್ಚರ್) ಭೌತಿಕ ಸಂಸ್ಕೃತಿ ಎನ್ನುತ್ತೇವೆ. ಮ್ಯೂಸಿಯಂಗಳಲ್ಲಿ ನಾವು ಬಳಸುವ ವಸ್ತುಗಳು, ಪೂರ್ವಿಕರು ಬಳಸುತ್ತಿದ್ದ ವಸ್ತುಗಳು, ತೋಟಗಾರಿಕೆ, ಮನೆ ಬಳಕೆ ವಸ್ತುಗಳು, ಉಡುಗೆ-ತೊಡುಗೆ ಸೇರಿದಂತೆ ಹಲವು ವಸ್ತುಗಳು ಒಳಗೊಂಡಿರುತ್ತವೆ. ಇವುಗಳನ್ನು ಮ್ಯೂಸಿಯಂನಲ್ಲಿಟ್ಟಾಗ ಹೊಸ ಹೊಸ ತಲೆಮಾರಿನ ಜನರಿಗೆ ನಮ್ಮ ಸಂಸ್ಕೃತಿಗಳ ಪರಿಚಯ ಮಾಡಿಕೊಡಲು ಸಾಧ್ಯವಾಗುತ್ತದೆ ಎಂದರು. ಸರ್ವಕಾಲಕ್ಕೂ ಮ್ಯೂಸಿಯಂಗಳು ಜೀವಂತ ಪಳೆಯುಳಿಕೆಯಂತಿರುತ್ತವೆ. ಯಾವುದೇ ಮ್ಯೂಸಿಯಂಗಳಾಗಬಹುದು ಅವುಗಳು ಹೊಸ ತಲೆಮಾರಿಗೆ ಸಂಸ್ಕೃತಿಯನ್ನು ರವಾನೆ ಮಾಡುತ್ತದೆ. ತಾತ-ಮುತ್ತಾತನ ಕಾಲಘಟ್ಟದಲ್ಲಿ ಏನೇನು ಬಳಸುತ್ತಿದ್ದರು ಎಂಬ ಮಾಹಿತಿ ನೀಡುವ ಮೂಲಕ ಜಾಗೃತಿ ಮೂಡಿಸುತ್ತವೆ. ಹಾಗಾಗಿ ಮ್ಯೂಸಿಯಂಗಳು ತನ್ನದೇ ಆದ ಪಾತ್ರನಿರ್ವಹಿಸುತ್ತವೆ. ಎಲ್ಲೆಡೆ ಮ್ಯೂಸಿಯಂಗಳಿರಬೇಕು. ಅದರಲ್ಲೂ ಸಂಸ್ಕೃತಿಗಳ ಬಗ್ಗೆ ಅನಾವರಣ ಮಾಡುವ ಮ್ಯೂಸಿಯಂಗಳಿದ್ದರೆ, ಸಮಾಜಕ್ಕೆ ಸಂದೇಶ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕೊಡಗಿನಲ್ಲಿ ಮ್ಯೂಸಿಯಂ ಸ್ಥಾಪನೆಗೆ ವಿರೋಧ ಮಾಡುವುದು ಸರಿಯಲ್ಲ. ವಿಶೇಷ ಸಂಸ್ಕೃತಿ ಹಾಗೂ ಪರಿಸರದ ಭಾಗವಾಗಿರುವ ಕೊಡಗಿನಿಲ್ಲಿ ಮ್ಯೂಸಿಯಂ ಸ್ಥಾಪನೆ ಅನಿವಾರ್ಯ. ಅಲ್ಲಿನ ಸಂಸ್ಕೃತಿಯನ್ನು ಕಟ್ಟುವ, ಕಾಯುವ, ಸಂರಕ್ಷಿಸುವ ಹಾಗೂ ಮುಂದಿನ ತಲೆಮಾರಿಗೆ ಉಳಿಸುವ ಕಾರ್ಯ ಸಾರ್ಥಕ ಕಾರ್ಯವನ್ನು ಮ್ಯೂಸಿಯಂಗಳು ಮಾಡುತ್ತದೆ. ಮ್ಯೂಸಿಯಂ ಮೂಲಕ ನಮ್ಮ ಪೂರ್ವಿಕರು ಹೀಗೆ ಇದ್ದರು. ಅವರ ಕಾಲದಲ್ಲಿ ಹೀಗೆಲ್ಲ ಇತ್ತು ಎಂದು ತಿಳಸಬೇಕಾಗಿದೆ. ಆ ನಿಟ್ಟಿನಲ್ಲಿ ಮ್ಯೂಸಿಯಂಗಳ ಸ್ಥಾಪನೆಗೆ ವಿರೋಧ ಸರಿಯಲ್ಲ ಎಂದರು. ಕೆಲವು ವಿಚಾರಕ್ಕೆ ಸಂಬಂಧಿಸಿದಂತೆ ಆನ್‌ಲೈನ್ ಮ್ಯೂಸಿಯಂಗಳೂ ಇವೆ. ಕೊಡಗಿನ ವಿಚಾರಕ್ಕೆ ಸಂಬಂಧಪಟ್ಟಂತೆ ಆನ್‌ಲೈನ್ ಮ್ಯೂಸಿಯಂ ಸ್ಥಾಪನೆ ವಿಚಾರವೂ ಕೇಳಿ ಬರುತ್ತಿದೆ. ಈ ಆನ್‌ಲೈನ್ ಮ್ಯೂಸಿಯಂಗಳು ವಿದ್ಯಾವಂತರಿಗೆ ಹಾಗೂ ಅಂತರ್ಜಾಲ ಬಳಕೆ ಮಾಡುವವರಿಗೆ ಮಾತ್ರ ತಲುಪುತ್ತದೆ. ಅಲ್ಲದೆ ಜಾಗತಿಕ ಮಟ್ಟದಲ್ಲೂ ಮಾಹಿತಿ ರವಾನಿಸುತ್ತದೆ. ವರ್ಚುವಲ್ ಮ್ಯೂಸಿಯಂಗಿಂತ ಭೌತಿಕ ಮ್ಯೂಸಿಯಂ ಹೆಚ್ಚು ಆನಂದ ಕೊಡುತ್ತದೆ. ಆನ್‌ಲೈನ್‌ನಲ್ಲಿ ಚಿತ್ರ ನೋಡುವುದಕ್ಕೂ, ನೈಜವಾಗಿ ವಸ್ತು ನೋಡುವುದಕ್ಕೂ ವ್ಯತ್ಯಾಸವಿದೆ. ಕೊಡಗಿನ ಪ್ರವಾಸಕ್ಕೆ ಹೋದಾಗ ಭೌತಿಕ ಮ್ಯೂಸಿಯಂನಲ್ಲಿರುವ ವಸ್ತುಗಳನ್ನು ಮುಟ್ಟಿ ನೋಡುವ ಅನುಭವ ಪಡೆದುಕೊಳ್ಳಬಹುದು. ಭೌತಿಕ ಮ್ಯೂಸಿಯಂಗಳು ತಾಜಾತನದಿಂದ ಕೂಡಿರುತ್ತವೆ ಎಂದು ತಿಳಿಸಿದರು. ಪ್ರಸ್ತುತ ಸಂದರ್ಭದಲ್ಲಿ ನಮ್ಮಲ್ಲಿನ ಜಾನಪದ ಅಳಿಸಿ ಹೋಗುತ್ತಿದೆ. ಅದನ್ನು ಉಳಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಅವು ಕರಾವಳಿ ಜಾನಪದವಾಗಿರಬಹುದು, ಗುಡ್ಡಗಾಡು ಜಾನಪದವೂ ಆಗಿರಬಹುದು. ನಮಗೆ ಎಲ್ಲಾ ಬಗೆಯ ಜಾನಪದವೂ ಉಳಿಯಬೇಕು. ಅದಕ್ಕಾಗಿ ಕಾರ್ಯಕ್ರಮ ರೂಪಿಸಬೇಕಾಗಿದೆ ಎಂದರು.



ಡಾ.ಎಂ.ನಂಜಯ್ಯ ಹೊಂಗನೂರು
ಜಾನಪದ ವಿಭಾಗದ ಮುಖ್ಯಸ್ಥರು